## ಅಧ್ಯಾಯ-೩
# ಜನತೆ

**ಪೀಠಿಕೆ :** ಜಿಲ್ಲೆಯ ವಾಯವ್ಯ ಭಾಗದಲ್ಲಿರುವ ಈ ತಾಲೂಕಿನಲ್ಲೂ ಇತರೆಡೆಗಳಂತೆ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಜನರು ವಾಸಿಸುತ್ತಿದ್ದು, ಕೃಷಿ ಪ್ರಧಾನ ಕಸುಬಾಗಿದೆ. ತಾಲೂಕಿನಲ್ಲಿರುವ ವಿವಿಧ ಜಾತಿ-ಧರ್ಮಗಳಿಗೆ ಸೇರಿದ ಜನತೆ ಪರಂಪರಾಗತವಾಗಿ ಬಂದಿರುವ ಸಾಂಪ್ರದಾಯಿಕ ಕಸುಬನ್ನೇ ಜೀವನೋಪಾಯಕ್ಕೆ ಅನುಸರಿಸುತ್ತಿದ್ದರೂ, ಲಭ್ಯವಿರುವ ಶಿಕ್ಷಣ ಸೌಲಭ್ಯ ಹಾಗೂ ಸರ್ಕಾರದ ಮೀಸಲಾತಿ ನಿಯಮಗಳಿಂದಾಗಿ, ಎಲ್ಲರಿಗೂ ಅವಕಾಶ ಲಭಿಸುವುದರ ಜೊತೆಗೆ, ಕೆಳವರ್ಗದವರಿಗೆ ವಿಶೇಷ ಪ್ರೋತ್ಸಾಹ ದೊರೆತ ಪರಿಣಾಮವಾಗಿ, ಇಂದು ಸಮಾಜದಲ್ಲಿ ಸಾಕಷ್ಟು ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಗಳುಂಟಾಗಿದೆ. ಜಾತಿಕಟ್ಟುಪಾಡುಗಳು ಸಾರ್ವಜನಿಕವಾಗಿ ಸಾಕಷ್ಟು ಸಡಿಲಗೊಂಡಿದ್ದು, ಅದನ್ನು ದೈನಂದಿನ ಬದುಕಿನಲ್ಲೂ ಕಾಣಬಹುದಾಗಿದೆ. ಸಾಮಾಜಿಕ-ಧಾರ್ಮಿಕ ಸೌಹಾರ್ದತೆಯು ಎಂದಿನಂತೆ ಮುಂದುವರಿದುಕೊಂಡು ಬಂದಿರುವುದಕ್ಕೆ ಜಾತ್ರೆ ಊರಹಬ್ಬಗಳು ನಿದರ್ಶನಗಳಾಗಿವೆ. ಈ ಎಲ್ಲಾ ಅಂಶಗಳನ್ನು ಈ ಅಧ್ಯಾಯದಲ್ಲಿ ನಿರೂಪಿಸಲಾಗಿದೆ.

**ಜನಸಂಖ್ಯೆ:** ಸಂಸ್ಥಾನದ ಸರ್ಕಾರವು ಅನುಸರಿಸಿದ ಖಾನೇ ಸುಮಾರು ಅಂದಾಜಿನಂತೆ ತಾಲೂಕಿನ ಜನಸಂಖ್ಯೆಯು ೧೮೫೩-೫೪ರಲ್ಲಿ ೭೪,೭೩೦ ಇದ್ದು, ಆಗ ಈ ತಾಲೂಕು ಹುಣಸೂರು ತಾಲೂಕಿನಲ್ಲಿತ್ತು. ಮುಂದೆ ೧೮೭೧ರಲ್ಲಿ ಜರುಗಿದ ಮೊದಲ ಅಧಿಕೃತ ಜನಗಣತಿಯಲ್ಲಿ ಇದು ೧,೧೬,೬೩೨ಕ್ಕೆ ಏರಿದರೆ ೧೮೮೧ರಲ್ಲಿ ೧,೧೩,೩೩೪ಕ್ಕೆ ಇಳಿಯಿತು. ಈ ಅವಧಿಯಲ್ಲಿ ಪಿರಿಯಾಪಟ್ಟಣ ತಾಲೂಕಿನಲ್ಲಿ ಹುಣಸೂರು ತಾಲೂಕು ಅಂತರ್ಗತವಾಗಿತ್ತು. ಇದಕ್ಕೆ ೧೮೭೬ರ ಭೀಕರ ಬರಗಾಲ ಕಾರಣವಾಗಿತ್ತು. ಆದರೆ ೧೮೯೧ರಲ್ಲಿ ಇದು ಮತ್ತೆ ೧,೧೩,೨೩೧ಕ್ಕೆ ಇಳಿಯಿತು. ಮುಂದೆ ಇದು ೧೯೧೧ರಲ್ಲಿ ಇದು ೯,೬೭೪ಕ್ಕೆ ಇಳಿಯಿತು. ಆಗ ಈ ತಾಲೂಕು ಹುಣಸೂರು ತಾಲೂಕಿನಲ್ಲಿ ಅಂತರ್ಗತವಾಗಿತ್ತು. ೧೯೩೧ರಲ್ಲಿ ಉಪತಾಲೂಕಾಗಿ ಅಸ್ತಿತ್ವ ಪಡೆಯಿತು. ಸುಮಾರು ೧೯೩೫ರಲ್ಲಿ ಇದಕ್ಕೆ ಮತ್ತೊಮ್ಮೆ ತಾಲೂಕು ಸ್ಥಾನ ದೊರೆಯಿತು. ಅಲ್ಲಿಂದೀಚೆಗೆ ಜನಸಂಖ್ಯಾ ಪ್ರಮಾಣದಲ್ಲಿ ಗಣನೀಯ ಹೆಚ್ಚಳ ಕಂಡುಬರಲಾರಂಭಿಸಿ, ೧೯೬೧ರಲ್ಲಿ

೯೪,೯೬೫ ಕ್ಕೇರಿ, ೧೯೭೧ರಲ್ಲಿ ೧,೧೫,೩೮೧ಕ್ಕೇರುವ ಮೂಲಕ ಲಕ್ಷದ ಗಡಿ ದಾಟಿತು. ಮುಂದೆ ೧೯೮೧ರಲ್ಲಿ ೧,೫೫,೦೯೪ಕ್ಕೇರುವ ಮೂಲಕ ಶೇ. ೨೨ರಷ್ಟು ದಶವಾರ್ಷಿಕ ಜನಸಂಖ್ಯಾ ಬೆಳವಣಿಗೆಯನ್ನು ವೀಕ್ಷಿಸಿತು. ಇದು ೧೯೯೧ರಲ್ಲಿ ೧,೮೮,೯೦೦ಕ್ಕೆ ಹೆಚ್ಚಳಗೊಂಡಿತು. ೨೦೦೧ರಲ್ಲಿ ೨,೨೪,೨೫೪ಕ್ಕೇರಿತು. ಕಳೆದ ದಶಕದಲ್ಲಿ ಜನಸಂಖ್ಯಾ ಬೆಳವಣಿಗೆ ಪ್ರಮಾಣವು ಶೇ. ೧೮.೭, ೨೦೧೧ರ ವೇಳೆಗೆ ತಾಲೂಕಿನ ಸಂಭವನೀಯ ಜನಸಂಖ್ಯೆಯು ೨,೫೧,೭೦೦ಕ್ಕೆ ಏರುವುದೆಂದು ನಿರೀಕ್ಷಿಸಲಾಗಿತ್ತು.

**ಜನಸಾಂದ್ರತೆ:** ತಾಲೂಕಿನ ಸಾಂದ್ರತೆಯು ೧೯೭೧ರಲ್ಲಿ ೧೪೨ ಇದ್ದು ೧೯೮೧ರಲ್ಲಿ ೧೯೦ಕ್ಕೂ ಅಧಿಕಗೊಂಡಿತು. ಇದು ೧೯೯೧ರಲ್ಲಿ ೨೩೧ಕ್ಕೂ, ೨೦೦೧ರ ಗಣತಿ ನಂತರ ೨೮೫ಕ್ಕೂ ಏರುವ ಮೂಲಕ, ಜಿಲ್ಲೆಯ ಸರಾಸರಿ ಜನಸಾಂದ್ರತಾ ಪ್ರಮಾಣಕ್ಕಿಂತ(೩೮೫) ಹೆಚ್ಚಾಗಿತ್ತು.

**ಮನೆಗಳು ಹಾಗೂ ಕುಟುಂಬಗಳು :** ತಾಲೂಕಿನಲ್ಲಿ ೧೯೭೧ರ ಜನಗಣತಿಯಲ್ಲಿ ತಾಲೂಕಿನಲ್ಲಿದ್ದ ೧೭,೨೮೨ (೧೬,೨೪೫ ಗ್ರಾಮಾಂತರ ಹಾಗೂ ೧,೦೩೭ ನಗರ) ಮನೆಗಳಲ್ಲಿ ೨೦,೭೩೩ (೧೯,೪೯೦ ಗ್ರಾಮೀಣ ಹಾಗೂ ೧,೨೪೩ ನಗರ) ಕುಟುಂಬಗಳು ವಾಸಿಸುತ್ತಿದ್ದವು. ೧೯೮೧ರ ಜನಗಣತಿಯಂತೆ ತಾಲೂಕಿನಲ್ಲಿ ೨೭,೦೫೯ (೨೫,೨೯೫ ಗ್ರಾಮೀಣ ಹಾಗೂ ೧,೭೬೪ ನಗರ) ಮನೆಗಳಲ್ಲಿ ೨೭,೪೨೩ (೨೫,೫೯೫ ಗ್ರಾಮೀಣ ಹಾಗೂ ೧,೮೨೮ ನಗರ) ಕುಟುಂಬಗಳು ವಾಸಿಸುತ್ತಿದ್ದವು. ಅದೇ ೨೦೦೧ರ ವೇಳೆಗೆ ತಾಲೂಕಿನಲ್ಲಿ ೪೨,೬೯೩ (೩೯,೫೪೩ ಗ್ರಾಮೀಣ ಹಾಗೂ ೩,೧೫೦ ನಗರ) ಕುಟುಂಬಗಳು ವಾಸಿಸುತ್ತಿದ್ದವು.

**ಸಾಂಸ್ಥಿಕ ಜನಸಂಖ್ಯೆ:** ವಿದ್ಯಾರ್ಥಿ ನಿಲಯ, ವಸತಿಗೃಹ, ಜೈಲು, ಆಸ್ಪತ್ರೆ, ವೃದ್ಧಾಶ್ರಮ, ಅನಾಥಾಶ್ರಮ, ಮಠ, ಮುಂತಾದ ಸಂಸ್ಥೆಗಳಲ್ಲಿರುವವರನ್ನು ಸಾಂಸ್ಥಿಕ ಜನಸಂಖ್ಯೆಯಡಿ ಪರಿಗಣಿಸಲಾಗುತ್ತಿದ್ದು, ಅದರಂತೆ ೧೯೭೧ರಲ್ಲಿ ತಾಲೂಕಿನಲ್ಲಿದ್ದ ೧೬೩ (೧೪೪ ಗ್ರಾಮೀಣ, ೧೯ ನಗರ) ಸಂಸ್ಥೆಗಳಲ್ಲಿ ೭೧೨ (೬೫೧ ಗ್ರಾಮೀಣ ಹಾಗೂ ೬೧ ನಗರ) ಪುರುಷರು ಹಾಗೂ ೨೫ (೧೫ ಗ್ರಾಮೀಣ ಹಾಗೂ ೧೦ ನಗರ) ಮಹಿಳೆಯರು ವಾಸಿಸುತ್ತಿದ್ದರು. ಅದೇ ೧೯೮೧ರಲ್ಲಿ ತಾಲೂಕಿನಲ್ಲಿದ್ದ ೧೮೩ (೧೭೩ ಗ್ರಾಮೀಣ ಹಾಗೂ ೧೦ ನಗರ) ಸಂಸ್ಥೆಗಳಲ್ಲಿ ೧,೧೪೨ (೧,೧೦೪ ಗ್ರಾಮೀಣ ಹಾಗೂ ೩೮ ನಗರ) ಪುರುಷರು ಹಾಗೂ ೬೫ (೪೧ ಗ್ರಾಮೀಣ ಹಾಗೂ ೨೪ ನಗರ) ಮಹಿಳೆಯರು ಆಶ್ರಯ ಪಡೆದಿದ್ದರು.

**ವಸತಿಹೀನರು:** ವಾಸದ ಮನೆಯನ್ನು ಹೊಂದಿರದ ಇವರು ಗುಡಿ, ಗುಂಡಾರ, ರಸ್ತೆ ಬದಿ ಮುಂತಾದೆಡೆ ವಾಸಿಸುತ್ತಿದ್ದು, ಹೆಚ್ಚಿನವರು ಭಿಕ್ಷುಕರು ಇಲ್ಲವೇ ತಿರುಕರಾಗಿರುತ್ತಾರೆ. ತಾಲೂಕಿನಲ್ಲಿ ೧೯೭೧ರಲ್ಲಿ ಈ ವರ್ಗಕ್ಕೆ ಸೇರಿದ ೧೭೪ (೧೫೯ ಗ್ರಾಮೀಣ ಹಾಗೂ ೧೫ ನಗರ) ಕುಟುಂಬಗಳಿದ್ದು, ೭೨ (೩೬ ಗ್ರಾಮೀಣ ಹಾಗೂ ೩೬ ನಗರ)

ಪುರುಷರನ್ನೂ ೫೦ (೨೭ ಗ್ರಾಮೀಣ ಹಾಗೂ ೨೩ ನಗರ) ಮಹಿಳೆಯರನ್ನೂ ಒಳಗೊಂಡಿದ್ದವು. ಅದೇ ೧೯೮೧ರಲ್ಲಿ ತಾಲೂಕಿನಲ್ಲಿದ್ದ ೮೧ (೬೩ ಗ್ರಾಮೀಣ ಹಾಗೂ ೧೮ ನಗರ) ಕುಟುಂಬಗಳಲ್ಲಿ ೨೪೭ (೧೭೬ ಗ್ರಾಮೀಣ ಹಾಗೂ ೭೧ ನಗರ) ಪುರುಷರು ಹಾಗೂ ೧೫೩ (೧೧೦ ಗ್ರಾಮೀಣ ೪೩ ನಗರ) ಮಹಿಳೆಯರು ಇದ್ದರು.

**ಸ್ತ್ರೀ–ಪುರುಷ ಪ್ರಮಾಣ :** ಪ್ರತಿ ೧೦೦೦ ಪುರುಷರಿಗೆ ಇರುವ ಮಹಿಳೆಯರ ಸಂಖ್ಯೆಯನ್ನು ಸ್ತ್ರೀ ಪುರುಷ ಪ್ರಮಾಣ ಎಂದು ಕರೆಯಲಾಗುತ್ತದೆ. ತಾಲೂಕಿನಲ್ಲಿ ಸ್ತ್ರೀ–ಪುರುಷ ಪ್ರಮಾಣವು ೧೯೭೧ರಲ್ಲಿ ೯೬೦.೩೨ (೯೬೨.೫೯ ಗ್ರಾಮೀಣ ಹಾಗೂ ೯೨೭.೯೩ ನಗರ) ಇತ್ತು. ಇದು ೧೯೮೧ರಲ್ಲಿ ೯೫೪.೪೩ (೯೫೬.೮೯ ಗ್ರಾಮೀಣ ಹಾಗೂ ೯೧೯.೫೦) ಕ್ಕೇರಿದರೂ, ಜಿಲ್ಲಾ ಪ್ರಮಾಣವಾದ ೯೫೦.೬೨ (೯೫೫.೭೯ ಗ್ರಾಮೀಣ ಹಾಗೂ ೯೩೭.೦೫ ನಗರ) ಕ್ಕಿಂತ ಕಡಿಮೆ ಇತ್ತು. ಇದು ೧೯೯೧ರಲ್ಲಿ ೯೫೮ ಇದ್ದರೆ, ೨೦೦೧ರಲ್ಲಿ ೯೩೬ಕ್ಕೆ ಇಳಿದಿತ್ತು. ಅಲ್ಲದೆ ಜಿಲ್ಲಾ ಪ್ರಮಾಣ (೯೬೪) ಹಾಗೂ ರಾಜ್ಯ ಪ್ರಮಾಣ (೯೬೫)ಗಳಿಗಿಂತ ಕಡಿಮೆ ಇತ್ತು.

**ಗ್ರಾಮೀಣ ಜನಸಂಖ್ಯೆ :** ತಾಲೂಕಿನ ಗ್ರಾಮಾಂತರ ಭಾಗದಲ್ಲಿ ೧೯೬೧ರಲ್ಲಿ ೮೮,೮೯೦ ಮಂದಿ ವಾಸಿಸುತ್ತಿದ್ದು, ೧೯೭೧ರಲ್ಲಿ ಅದು ೧,೦೭,೯೭೦ ಕ್ಕೇರಿತು. ೧೯೮೧ರಲ್ಲಿ ೧,೪೫,೦೫೫ ಜನರು ಗ್ರಾಮೀಣ ಪ್ರದೇಶದಲ್ಲಿ ನೆಲೆಸಿದ್ದು, ೧೯೯೧ರಲ್ಲಿ ಇದು ೧ಮ೭೬,೯೦೦ ಜನಸಂಖ್ಯೆಯನ್ನು ಹೊಂದಿತ್ತು. ೨೦೦೧ರ ಜನಗಣತಿಯಂತೆ ೨,೦೯,೩೩೦ ಜನರು ವಾಸಿಸುತ್ತಿದ್ದಾರೆ.

**ಪಟ್ಟಣ ಜನಸಂಖ್ಯೆ :** ತಾಲೂಕಿನಲ್ಲಿ ೧೯೬೧ರ ಜನಗಣತಿಯಂತೆ ಇದ್ದ ಪಟ್ಟಣ ಜನಸಂಖ್ಯೆಯು ೬,೦೭೫ ಆಗಿದ್ದು, ೧೯೭೧ ೭,೪೧೧ಕ್ಕೂ ೧೯೮೧ರಲ್ಲಿ ೧೦,೦೫೯ಕ್ಕೂ ಹೆಚ್ಚಳಗೊಂಡಿತು. ಇದು ೧೯೯೧ರಲ್ಲಿ ೧೨,೦೦೦ಕ್ಕೆ ಏರಿತು. ೨೦೦೧ರ ಜನಗಣತಿಯಂತೆ ೧೪,೯೨೪ ಜನ ನಗರವಾಸಿಗಳು ಈ ತಾಲೂಕಿನಲ್ಲಿದ್ದರು.

**ಅಂಗವಿಕಲರು :** ಅಂಗವಿಕಲ ಜನರ ಗಣತಿಯನ್ನು ೧೯೩೧ರವರೆಗೆ ನಡೆಸಲಾಯಿತಾದರೂ ೧೯೪೧ರಲ್ಲಿ ಕೈಬಿಡಲಾಯಿತು. ಆದರೆ ಮುಂದೆ ೧೯೮೧ರಿಂದ ಅದನ್ನು ಪುನರಾರಂಭಿಸಲಾಯಿತು. ಆರಂಭದಲ್ಲಿ ಕುರುಡರು – ಕಿವುಡರು – ಕುಂಟರನ್ನು ಗಣಿಸಲಾಗುತ್ತಿದ್ದು, ಅದರಂತೆ ೧೯೮೧ರಲ್ಲಿ ೯೬ ಕುರುಡರು, ೯೩ ಕಿವುಡರು ಹಾಗೂ ೮೮ ಅಂಗವಿಕಲರು ತಾಲೂಕಿನಲ್ಲಿದ್ದರು. ಅಂಗವಿಕಲರಿಗಾಗಿ ಸರ್ಕಾರ ನೀಡುವ ಮಾಸಿಕ ೫೦ ರೂ.ಗಳ ವೇತನವನ್ನು ೧೯೮೭ರ ವೇಳೆಗೆ ತಾಲೂಕಿನ ೭೧೯ ಅಂಗವಿಕಲರು ಪಡೆಯುತ್ತಿದ್ದರು. ೨೦೦೧ರ ಜನಗಣತಿಯಂತೆ ತಾಲೂಕಿನಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಅಂಗವಿಹೀನರಿದ್ದರು. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿದ್ದ ೧೭೭೮ ಮಂದಿ ಅಂಗವಿಕಲರು ೪೦೦ ರೂ.ಗಳ ಮಾಸಿಕ ವೇತನವನ್ನು ಪಡೆಯುತ್ತಿದ್ದರು.

ಅಂಗವಿಕಲತೆಯು ಶೇ. ೭೫ಕ್ಕಿಂತ ಹೆಚ್ಚಿದಲ್ಲಿ ರೂ. ೧,೦೦೦.೦೦ ಮಾಸಿಕ ವೇತನವನ್ನು ೦೧.೦೪.೨೦೦೯ರಿಂದ ನೀಡಲಾಗುತ್ತಿದೆ.

**ಪರಿಶಿಷ್ಟ ಜಾತಿ:** ಸಂವಿಧಾನದ ೩೪೧ನೆಯ ಪರಿಚ್ಛೇದದನ್ವಯ ಆದಿ ಕರ್ನಾಟಕ, ಆದಿದ್ರಾವಿಡ, ಬೋವಿ, ಮಾದಿಗ, ಮೋಚಿ, ಹೊಲೆಯ ಕೊರಮ, ಲಮಾಣಿ, ಹಂದಿ ಜೋಗಿ, ಜಾಂಬವ, ಚಮ್ಮಾರ, ಮಾದರ, ಮುಂತಾದವನ್ನು ಪರಿಶಿಷ್ಟ ಜಾತಿಯವರೆಂದು ಪಟ್ಟಿ ಮಾಡಲಾಗಿದೆ. ಆ ಪ್ರಕಾರ ೧೯೭೧ರಲ್ಲಿ ತಾಲೂಕಿನಲ್ಲಿ ಪರಿಶಿಷ್ಟ ಜಾತಿಯ ೧೭,೨೫೧ (೧೬,೮೩೬ ಗ್ರಾಮೀಣ ಹಾಗೂ ೪೧೫ ಪಟ್ಟಣ) ಜನರಿದ್ದರು. ಅದೇ ೨೦೦೧ರ ಗಣತಿಯನ್ವಯ ಇವರ ಒಟ್ಟು ಜನಸಂಖ್ಯೆಯು ೩೬,೩೩೩ಕ್ಕೆ (೩೫,೦೭೨ ಗ್ರಾಮೀಣ ಹಾಗೂ ೧,೨೫೫ ಪಟ್ಟಣ) ಏರಿತ್ತು.

**ಪರಿಶಿಷ್ಟ ಪಂಗಡ :** ಸಂವಿಧಾನದ ೩೪೨ನೆಯ ಪರಿಚ್ಛೇದದನ್ವಯ ಹಕ್ಕಿಪಿಕ್ಕಿ, ಇರುಳಿಗ, ಜೇನುಕುರುಬ, ಕಾಡುಕುರುಬ, ಕೊಂಡಕಾಪು, ಗೌಡಲು, ಡೋಲಿಗ, ಕೊರಗ, ಕಣಿಯ, ಕುರುಮ ಮುಂತಾದ ಬುಡಕಟ್ಟಿನ ಜನರನ್ನು ಪರಿಶಿಷ್ಟ ಪಂಗಡದವರೆಂದು ಪರಿಗಣಿಸಲಾಗಿದೆ. ಆ ಪ್ರಕಾರ ೧೯೭೧ರ ಜನಗಣತಿಯಂತೆ ತಾಲೂಕಿನಲ್ಲಿ ೧,೧೯೯ (೧,೧೬೦ ಗ್ರಾಮಾಂತರ ೩೯ ನಗರ) ಮಂದಿ ಪರಿಶಿಷ್ಟ ಪಂಗಡಗಳಿಗೆ ಸೇರಿದ ಜನರಿದ್ದರು. ಅದೇ ೨೦೦೧ರ ಗಣತಿಯಂತೆ ಈ ಗುಂಪಿಗೆ ಸೇರಿದ ಒಟ್ಟು ಜನಸಂಖ್ಯೆಯು ೧೭,೨೭೦ (೧೫,೬೮೯ ಗ್ರಾಮಾಂತರ ಹಾಗೂ ೧,೫೮೧ ನಗರ) ಕ್ಕೆ ಹೆಚ್ಚಳಗೊಂಡಿತು.

**ಭಾಷೆಗಳು :** ತಾಲೂಕಿನಲ್ಲಿ ವಿವಿಧ ಭಾಷೆಗಳನ್ನು ಮಾತೃಭಾಷೆಯನ್ನಾಗಿ ಹೊಂದಿರುವ ಜನರಿದ್ದಾರೆ. ೧೯೭೧ರ ಜನಗಣತಿಯಂತೆ ತಾಲೂಕಿನ ಒಟ್ಟು ಜನಸಂಖ್ಯೆಯಲ್ಲಿ (೧,೧೫,೩೮೧) ೧,೦೦,೪೬೩ (ಶೇ. ೮೭.೭) ಜನ ಕನ್ನಡ ಮಾತೃಭಾಷಿಕರು ೫೯೮ ಮಂದಿ ಉರ್ದು ಮಾತೃಭಾಷಿಕರು, ೧೯೬ ಜನ ತೆಲುಗು ಮಾತೃಭಾಷಿಕರು, ೨೪೪ ಮಂದಿ ಮರಾಠರು ಹಾಗೂ ೨೨೨ ಜನ ತುಳು ಮಾತೃಭಾಷಿಕರು ಇದ್ದರು. ಅದೇ ೨೦೦೧ರ ಜನಗಣತಿಯಂತೆ ತಾಲೂಕಿನಲ್ಲಿ ಒಟ್ಟು ಜನಸಂಖ್ಯೆಯಲ್ಲಿ(೨,೨೪,೨೫೪) ೧,೮೬,೨೨೪ ಕನ್ನಡ, ೧೩,೪೮೫ ಉರ್ದು, ೪,೧೫೧ ತೆಲುಗು, ೨,೯೩೧ ತಮಿಳು, ೧೭೯೫ ಮಲೆಯಾಳಿ, ೯೧೩ ಹಿಂದಿ, ೮೫೯ ನೇಪಾಳಿ, ೭೭೨ ಮರಾಠಿ, ೧೧,೫೫೮ ಟಿಬೆಟ್, ೪೮೯ ಕೊಡವ, ೨೪೯ ತುಳು, ೯೬ ಕೊಂಕಣಿ ಹಾಗೂ ಗುಜರಾತಿ ಮಾತನಾಡುವ ೧೧ ಮಂದಿ ಮಾತೃಭಾಷಿಕರು ಇದ್ದರು.

## ಧರ್ಮಗಳು

ತಾಲೂಕಿನಲ್ಲಿ ಹಿಂದೂ, ಜೈನ, ಇಸ್ಲಾಂ ಹಾಗೂ ಕ್ರೈಸ್ತ ಧರ್ಮಾವಲಂಬಿಗಳು ಬಹು ಹಿಂದಿನಿಂದಲೂ ಸಾಮರಸ್ಯದಿಂದ ಜೀವಿಸುತ್ತಿದ್ದಾರೆ. ಈ ಧರ್ಮಗಳಲ್ಲಿ ಮೊದಲಿನೆರಡು ಅನಾದಿ ಕಾಲದಿಂದಲೂ ಅಸ್ತಿತ್ವದಲ್ಲಿದ್ದರೆ, ಇಸ್ಲಾಂ ಹಾಗೂ ಕ್ರೈಸ್ತ ಧರ್ಮಗಳು

ಮಧ್ಯಯುಗದಲ್ಲಿ ತಾಲೂಕನ್ನು ಪ್ರವೇಶಿಸಿದ್ದಾಗಿವೆ. ತಾಲೂಕಿನಲ್ಲಿ ಹಿಂದೂ ಧರ್ಮಾವಲಂಬಿಗಳೇ ಅಧಿಕ ಸಂಖ್ಯೆಯಲ್ಲಿದ್ದು, ನಂತರದ ಸ್ಥಾನ ಇಸ್ಲಾಂ ಧರ್ಮದ್ದಾಗಿದ್ದು, ಮುಸ್ಲೀಮರು ವಿಶೇಷವಾಗಿ ನಗರಪ್ರದೇಶದಲ್ಲಿದ್ದಾರೆ. ಜೈನ ಹಾಗೂ ಕ್ರೈಸ್ತ ಧರ್ಮಾವಲಂಬಿಗಳು ತಾಲೂಕಿನಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿದ್ದಾರೆ. ೧೯೮೧ರ ಜನಗಣತಿ ಪ್ರಕಾರ ತಾಲೂಕಿನಲ್ಲಿ ೧,೩೭,೫೫೦ ಮಂದಿ ಹಿಂದು, ೯,೦೯೦ ಮಂದಿ ಮುಸ್ಲಿಂ, ೭,೬೮೧ ಮಂದಿ ಬೌದ್ಧ, ೬೭೬ ಮಂದಿ ಕ್ರಿಶ್ಚಿಯನ್, ೬೬ ಮಂದಿ ಜೈನ, ಏಳು ಮಂದಿ ಸಿಖ್, ೨೮ ಮಂದಿ ಇತರೇ ಧರ್ಮೀಯರಿದ್ದು, ಮೂರು ಜನ ಯಾವುದೇ ಧರ್ಮವನ್ನು ಸೂಚಿಸಿರಲಿಲ್ಲ. ಆದರೆ ೨೦೦೧ರ ಜನಗಣತಿ ಪ್ರಕಾರ, ತಾಲೂಕಿನಲ್ಲಿ ೧,೯೪,೪೪೩ ಹಿಂದು, ೧೪,೩೬೪ ಮಂದಿ ಮುಸ್ಲಿಂ, ೧೩,೫೯೧ ಮಂದಿ ಬೌದ್ಧ, ೯೨೬ ಮಂದಿ ಕ್ರಿಶ್ಚಿಯನ್, ೧೭೮ ಜನ ಜೈನ, ೩೧ ಮಂದಿ ಇತರೇ ಧರ್ಮೀಯರಿದ್ದರೆ, ೯೦೩ ಜನ ಯಾವುದೇ ಧರ್ಮವನ್ನು ವ್ಯಕ್ತಪಡಿಸಿರಲಿಲ್ಲ.

**ಹಿಂದೂ ಧರ್ಮ :** ಕರ್ನಾಟಕವು ಅನೇಕ ಧರ್ಮಗಳ ನೆಲೆಬೀಡಾಗಿದ್ದರೂ ಬಹುಪಾಲು ಹಿಂದೂ ಧರ್ಮೀಯರಾಗಿದ್ದಾರೆ. ಇವರು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯು ನೆಲೆಸಿದ್ದಾರೆ. 'ಹಿಂದೂ' ಎಂಬ ಪದವು ಸಿಂಧೂ ಪದದ ಮೂಲದಿಂದ ಉಗಮವಾಗಿದ್ದು, ವಿಶ್ವದ ಧರ್ಮಗಳ ಪೈಕಿ ಸನಾತನ ಅಥವಾ ಅತ್ಯಂತ ಪ್ರಾಚೀನ ಧರ್ಮವೆಂದು ಜನಪ್ರಿಯವಾಗಿದೆ. ಪ್ರಸಿದ್ಧ ಇತಿಹಾಸಕಾರ ವಿಲ್‌ಡ್ಯೂರಾಂಟ್ 'ಹಿಂದೂ ಧರ್ಮವು ವಿಶ್ವದ ಎಲ್ಲಾ ಧರ್ಮಗಳಿಗೆ ಮಾತೃಸ್ಥಾನದಲ್ಲಿದೆ' ಎಂದು ಅಭಿಪ್ರಾಯಪಟ್ಟಿದ್ದಾನೆ. ಹಿಂದೂ ಧರ್ಮವು ಕೇವಲ ಏಕೈಕ ಪ್ರವಾದಿಯಿಂದ ಪ್ರತಿಪಾದಿತವಾಗಿರದೇ ಹಲವಾರು ಋಷಿ ಮುನಿಗಳ ಅಧ್ಯಾತ್ಮಿಕ ಅನುಭವದ ಫಲವಾಗಿ ಅನಾದಿಕಾಲದಿಂದಲೂ ಆಚರಣೆಗೆ ಬಂದುದರಿಂದ ಈ ಧರ್ಮಕ್ಕೆ ಸನಾತನ ಧರ್ಮವೆಂದು ಕರೆಯಲಾಗುತ್ತದೆ. ವೇದಗಳನ್ನು ಅಪೌರುಷೇಯವೆಂದು ಪರಿಗಣಿಸಲಾಗಿದ್ದು, ದೇವಾನುದೇವತೆಗಳಿಂದ ಮೌಖಿಕವಾಗಿ ಬಂದಿತೆಂಬ ಅಭಿಪ್ರಾಯವೂ ಹಿಂದೂಗಳಲ್ಲಿದೆ. ಕೆಲವು ವಿದ್ವಾಂಸರ ಪ್ರಕಾರ ಹಿಂದೂ ಧರ್ಮವು ಕೇವಲ ಆಧ್ಯಾತ್ಮಗಳಿಂದ ಕೂಡಿದ ಧರ್ಮವಾಗಿರದೇ ಹೆಚ್ಚಾಗಿ ಮನುಕುಲದ ಉನ್ನತ ಆದರ್ಶಗಳನ್ನೊಳಗೊಂಡ ಜೀವನ ಮಾರ್ಗವಾಗಿದೆ.

ಹಿಂದೂ ಧರ್ಮದ ಪ್ರಮುಖ ಪಂಥಗಳಾದ ಅದ್ವೈತ, ವಿಶಿಷ್ಟಾದ್ವೈತ ಮತ್ತು ದ್ವೈತ ಕ್ರಿ.ಶ. ಒಂಭತ್ತನೇ ಶತಮಾನದ ನಂತರ ಪ್ರತಿಪಾದನೆಗೊಂಡವು. ಕ್ರಿ.ಶ. ಒಂಭತ್ತನೇ ಶತಮಾನದಲ್ಲಿ ಕೇರಳದ ಕಾಲಟಿಯಲ್ಲಿ ಜನಿಸಿದ ಆದಿಶಂಕರಾಚಾರ್ಯರು ಅದ್ವೈತ ಮತವನ್ನು ಪ್ರತಿಪಾದಿಸಿದರು. ಇವರು ಪ್ರಥಮ ಬಾರಿಗೆ ಆತ್ಮನಲ್ಲೇ ಪರಮಾತ್ಮನು ಅಸ್ತಿತ್ವದಲ್ಲಿರುವುದರಿಂದ "ಅಹಂ ಬ್ರಹ್ಮಾಸ್ಮಿನ್" ಹಾಗೂ 'ತತ್ವಮಸಿ' ತತ್ವಗಳನ್ವಯ ಅದ್ವೈತವನ್ನು ಬೋಧಿಸಿದರು. ದೇವಾನು ದೇವತೆಗಳ ಐಕ್ಯತೆಯನ್ನು ಸಾಮಾನ್ಯರಿಗೆ ದರ್ಶನ ಮಾಡಿಸಿದರು. ಆಕಾಶದಿಂದ ಭೂಮಿಗೆ ಬಿದ್ದ ಸಹಸ್ರಾರು ಮಳೆಯ ಹನಿಗಳು ಏಕರೂಪವಾಗಿ ಹರಿದು ಸಾಗರಕ್ಕೆ ಸೇರುವ ರೀತಿಯಲ್ಲಿ ಸರ್ವಶಕ್ತನಾದ ಬ್ರಹ್ಮನೊಬ್ಬನೇ ಸತ್ಯ, ಜಗತ್ತು ಮಿಥ್ಯೆ ಹಾಗೂ ಪುನರ್‌ಜನ್ಮವು ಸಹಜವಾದ ಪ್ರಕ್ರಿಯೆಯೆಂದು ಪ್ರತಿಪಾದಿಸಿದ

ಕಾರಣ ಈ ಪಂಥಕ್ಕೆ 'ಅದ್ವೈತ'ವೆಂಬ ಹೆಸರು ರೂಢಿಗೆ ಬಂದಿತು. ಎಲ್ಲಾ ಆತ್ಮರೂ ಏಕರೀತಿಯ ಮೋಕ್ಷವನ್ನು ಪಡೆಯುವರು ಎಂಬುದು ಆದಿಶಂಕರಾಚಾರ್ಯರ ದೃಢವಾದ ಅಭಿಪ್ರಾಯವಾಗಿತ್ತು. ಕ್ರಿ.ಶ. ೧೧ನೇ ಶತಮಾನದಲ್ಲಿ ತಮಿಳುನಾಡಿನ ಶ್ರೀಪೆರಂಬುದೂರಿನಲ್ಲಿ ಜನ್ಮತಾಳಿದ ರಾಮಾನುಜಾಚಾರ್ಯರು ಬ್ರಹ್ಮನು 'ಚಿತ್' ಮತ್ತು 'ಸಚಿತ್' ಎಂಬ ವಿಶೇಷವಾದ ಗುಣಗಳನ್ನು ಹೊಂದಿರುವುದರಿಂದ ಆತನ ಸಾಕ್ಷಾತ್ಕಾರವು ಸಾಧ್ಯವೇ ಹೊರತು ಆತನೊಂದಿಗೆ ಮಿಲನ ಸಾಧ್ಯವಿಲ್ಲವೆಂದು ಪ್ರತಿಪಾದಿಸಿದರು. ಈ ಪಂಥಕ್ಕೆ ವಿಶಿಷ್ಟಾದ್ವೈತವೆಂದು ಕರೆದು ಅದರ ಹಿಂಬಾಲಕರನ್ನು ಶ್ರೀವೈಷ್ಣವರೆಂದು ಪರಿಗಣಿಸಲಾಯಿತು. ಶ್ರೀವೈಷ್ಣವರಲ್ಲಿ ಆತ್ಮನು ಸ್ವಯಂ ಸಾಧನೆಯಿಂದ ಬ್ರಹ್ಮಜ್ಞಾನವನ್ನು ಪಡೆಯುವುದರ ಮೂಲಕ ಮೋಕ್ಷವನ್ನು ಗಳಿಸಬಹುದೆಂದು ರಾಮಾನುಜಾಚಾರ್ಯರು ಪ್ರತಿಪಾದಿಸಿದ್ದಾರೆ. ಕರ್ನಾಟಕದ ಉಡುಪಿಯ ಬಳಿಯ ಪಾಜಕ ಅಥವಾ ಬೆಳ್ಳೆಯಲ್ಲಿ ಜನ್ಮ ತಾಳಿದ ಮಧ್ವಾಚಾರ್ಯರು ಆತ್ಮ ಮತ್ತು ಪರಮಾತ್ಮರ ನಡುವೆ ಇರುವ ಪಂಚಬೇಧ ತಾರತಮ್ಯಗಳನ್ನು ಪ್ರತಿಪಾದಿಸಿದರು. ಈ ಕಾರಣದಿಂದಾಗಿ ಈ ಪಂಥಕ್ಕೆ 'ದ್ವೈತಮತ'ವೆಂದು ಕರೆಯಲಾಯಿತು. ಈ ಪಂಥದ ಪ್ರಕಾರ ಆತ್ಮ-ಪರಮಾತ್ಮನ ಸಂಬಂಧಗಳು ಸಂಪೂರ್ಣವಾಗಿ ದಾಸತ್ವದ ಸಂಕೇತವಾಗಿದ್ದು, ಸರ್ವಶಕ್ತನಾದ ವಿಷ್ಣುವಿನ ಹರಿ ಸರ್ವೋತ್ತಮತ್ವವನ್ನು ಮಧ್ವಾಚಾರ್ಯರು ಬೋಧಿಸಿದರು. ಅವರ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಯು ಅವನ ಮಟ್ಟಿಗೆ ಜ್ಞಾನ ಪರಿಪೂರ್ಣತೆಯನ್ನು ಹೊಂದಿರುತ್ತಾನೆ. ಯಾವುದೇ ಕಾರಣಕ್ಕೂ ಸರ್ವಗುಣ ಪರಿಪೂರ್ಣನಾದ ಬ್ರಹ್ಮನು (ಭಗವಂತನು) ಆತ್ಮನಿಗೆ ಸಮಾನನಾಗುವುದಿಲ್ಲ. ಆತ್ಮನು ಇಹ ಮತ್ತು ಪರಲೋಕಗಳಲ್ಲಿ ಪರಮಾತ್ಮನ ಅಧೀನನಾಗಿರುತ್ತಾನೆಂಬ ದಾಸತ್ವಭಾವವನ್ನು ಪ್ರಥಮ ಬಾರಿಗೆ ಪ್ರತಿಪಾದಿಸಿದರು. ಅಲ್ಲದೆ, ಆಯಾ ವ್ಯಕ್ತಿಯ ಸಾಧನೆಯ ಮೇರೆಗೆ ಯೋಗ್ಯತಾನುಸಾರ ಮೋಕ್ಷವು ಲಭಿಸುತ್ತದೆಂದೂ ಬೋಧಿಸಿದರು. ದ್ವೈತ ಧರ್ಮವು ದೃಢವಾಗಿ ಹೊಂದಿದ್ದ ದಾಸತ್ವಮನೋಭಾವದ ಫಲವಾಗಿ ಹರಿದಾಸ ಸಾಹಿತ್ಯವು ವಿಫುಲವಾಗಿ ಕರ್ನಾಟಕದಲ್ಲಿ ಬೆಳೆದು ಬರಲು ಸಾಧ್ಯವಾಯಿತು. ಈ ಮೂರು (ಅದ್ವೈತ, ವಿಶಿಷ್ಟಾದ್ವೈತ ಮತ್ತು ದ್ವೈತ) ಪಂಥಗಳು ಸಂಪೂರ್ಣವಾಗಿ ಪ್ರಾಚೀನ ಧಾರ್ಮಿಕ ಗ್ರಂಥಗಳಾದ ವೇದ, ಉಪನಿಷತ್ತು, ಅರಣ್ಯಕ, ಬ್ರಾಹ್ಮಣ, ರಾಮಾಯಣ, ಮಹಾಭಾರತ (ಭಗವದ್ಗೀತೆ) ಮುಂತಾದವುಗಳ ಅಧ್ಯಾತ್ಮಿಕ ಅಧ್ಯಯನದ ಪ್ರತಿರೂಪಗಳೇ ಆಗಿ ಪ್ರತಿಪಾದಿತವಾಗಿದ್ದು ಹಿಂದೂ ಧರ್ಮದ ಅಧ್ಯಾತ್ಮಿಕ ಬೆಳವಣಿಗೆಗೆ ದಾರಿದೀಪಗಳಾಗಿವೆ.

ಕರ್ನಾಟಕದಲ್ಲಿ ಕ್ರಿ.ಶ. ೧೨ನೇ ಶತಮಾನದಲ್ಲಿ ಜಗಜ್ಯೋತಿ ಬಸವಣ್ಣನವರು ಪ್ರತಿಪಾದಿಸಿದ ವೀರಶೈವ (ಶಕ್ತಿ ವಿಶಿಷ್ಟಾದ್ವೈತ) ಧರ್ಮವು ಹಿಂದೂ ಧರ್ಮದಲ್ಲಿ ಅಡಕವಾಗಿದ್ದ ಸತ್ವಸಾರಗಳನ್ನು ಸ್ಥಳೀಯ ಹಾಗೂ ಸರಳವಾದ ಕನ್ನಡ ಭಾಷೆಯಲ್ಲಿ ಬೋಧಿಸಿದ ಕಾರಣ ಜನಪ್ರಿಯವಾಯಿತು. ವೀರಶೈವ ಧರ್ಮವು ಸಾಮಾಜಿಕ ಜೀವನಕ್ಕೆ ಅವಶ್ಯಕವಾದ ನೀತಿ ಬೋಧನೆಗಳಿಂದ ಕೂಡಿದ್ದು, ಆಧ್ಯಾತ್ಮಿಕ ವಿಚಾರಗಳು ಸಂಸ್ಕೃತ ಭಾಷೆಗೆ ಬದಲಾಗಿ ಸರಳ ಕನ್ನಡ ಭಾಷೆಯಲ್ಲಿದ್ದು, ಕರ್ನಾಟಕದಲ್ಲಿ ಮಾತ್ರವಲ್ಲದೇ ಭಾರತದ ಇತರೆ ಪ್ರದೇಶಗಳಿಗೂ ಪಸರಿಸಿತು. ಈ ಧರ್ಮದಲ್ಲಿ ಬೆಳೆದು ಬಂದ

ವಚನ ಸಾಹಿತ್ಯವು ಕನ್ನಡ ಭಾಷೆ ಮತ್ತು ಸಾಹಿತ್ಯದ ಧೀರೋದಾತ್ತ ಅಭಿವೃದ್ಧಿಗೆ ಕಾರಣವಾಯಿತೆಂಬುದು ಹಲವಾರು ವಿದ್ವಾಂಸರ ಅಭಿಪ್ರಾಯವಾಗಿದೆ.

ಪಿರಿಯಾಪಟ್ಟಣ ತಾಲೂಕು ಪ್ರದೇಶವು ಇತರೆಡೆಗಳಂತೆ ಪ್ರಾಗ್ಐತಿಹಾಸ ಧರ್ಮ ಕಾಲದಿಂದಲೂ ಸ್ಥಳೀಯ ಜನಪದೀಯ ಧರ್ಮದ ತಳಹದಿಯ ಮೇಲೆ ರೂಪುಗೊಂಡದ್ದು. ಈ ಜನಪದೀಯ ಧರ್ಮ ಮೂಲದಲ್ಲಿ ಯಾವ ಶಾಸ್ತ್ರ, ಸಿದ್ಧಾಂತದ ಹಿನ್ನೆಲೆಯಲ್ಲಿ ರೂಪುಗೊಂಡಿತ್ತೆಂಬುದನ್ನು ಹೇಳಲು ಯಾವುದೇ ಲಿಖಿತಾಧಾರಗಳಿಲ್ಲ. ಆದರೂ ಇಂದಿಗೂ ರೂಢಿಯಲ್ಲಿರುವ ನಂಬಿಕೆ, ಆಚಾರ–ವಿಚಾರ, ಆರಾಧನಾ ವಿಧಿ–ವಿಧಾನಗಳು, ಈ ಹಿಂದೆ ಇದ್ದ ಜನಪದೀಯ ಧರ್ಮದ ಅವಶೇಷಗಳಂತಿವೆ. ತಾಲ್ಲೂಕಿನ ಹಲವಾರು ಕಡೆ ಕಂಡುಬಂದಿರುವ ಪ್ರಾಗ್‌ಶಿಲಾಸಮಾಧಿಗಳು ಅಂದಿನ ಜನಪದ ಧರ್ಮದ ಒಂದು ಭಾಗವೇ ಆಗಿತ್ತೆಂದು ಹೇಳಬಹುದಾಗಿದೆ. ಐತಿಹಾಸಿಕವಾಗಿ ಪಿರಿಯಾಪಟ್ಟಣವು 'ಸಿಂಗಪಟ್ಟಣ' ಎಂಬ ಹೆಸರಿದ್ದ ಕಾಲದಿಂದಲೂ ಕದಂಬ, ಚೋಳ, ಗಂಗ, ಹೊಯ್ಸಳ, ವಿಜಯನಗರ ಹಾಗೂ ಮೈಸೂರು ಅರಸರ ಆಳ್ವಿಕೆಗೆ ಒಳಪಟ್ಟಿದ್ದರೂ ಸ್ಥಳೀಯರೇ ಆದ ಚಂಗಾಳ್ವರು ಮತ್ತು ಕೊಂಗಾಳ್ವರು ಈ ನೆಲದ ಪ್ರಭುಗಳಾಗಿದ್ದರು. ಇವರು ಪ್ರಾರಂಭದಿಂದಲೂ ಕದಂಬ, ಗಂಗ ಹಾಗೂ ಚೋಳರ ಅಧೀನದಲ್ಲಿದ್ದವರು. ಆ ಕಾರಣದಿಂದ ಕದಂಬರ ಕಾಲದಲ್ಲಿ ಇವರು ತಮ್ಮ ಮೂಲ ಧರ್ಮವಾದ ಜೈನಧರ್ಮದ ಜೊತೆಗೆ ಶೈವಧರ್ಮವನ್ನೂ, ಚೋಳರ ಅಧೀನದಲ್ಲಿದ್ದಾಗ ಕಾಪಾಲಿಕಶೈವವನ್ನೂ ಅನುಸರಿಸಿಕೊಂಡು ಬಂದಂತೆ ಕಾಣುತ್ತದೆ.

ದಕ್ಷಿಣ ಕರ್ನಾಟಕದ ಪ್ರಮುಖ ಕಾಪಾಲಿಕ ನೆಲೆಗಳಲ್ಲಿ ಒಂದಾದ ಚುಂಚನಗಿರಿಯು ಚೋಳರ ಕಾಲದಲ್ಲಿ 'ವಿಕ್ರಮಚೋಳಮಂಡಲ' ಎಂಬ ಹೆಸರಿನಿಂದ ಪ್ರಸಿದ್ಧವಾಗಿತ್ತು. ಇವರ ಭೈರವೇಶ್ವರ ಸಂಸ್ಕೃತಿಯ ಹಾಸು ಬೀಸು ಚುಂಚನಗಿರಿಯಿಂದ ಹಿಡಿದು ಕೊಡಗಿನ ತನಕವೂ ವ್ಯಾಪಿಸಿತ್ತು ಎಂಬುದಕ್ಕೆ ಈ ವಲಯಗಳಲ್ಲಿ ಕಂಡು ಬರುವ ಭೈರವ ಗುಡಿಗಳು ಸಾಕ್ಷಿಯಾಗಿವೆ. ಇಂದಿನ ಹೊನ್ನೂರು, ಚೋಳರ ಕಾಲದಲ್ಲಿ ಭೈರವಕ್ಷೇತ್ರವಾಗಿತ್ತೆಂದು ತಿಳಿದು ಬಂದರೂ ಈಗ ಅದು ವೈಷ್ಣವಕ್ಷೇತ್ರವಾಗಿ ಮಾರ್ಪಟ್ಟು ಅಲ್ಲಿ ಭೈರವ ಸಂಸ್ಕೃತಿಯ ಪಳೆಯುಳಿಕೆಗಳು ಮಾತ್ರ ಕಂಡುಬರುತ್ತವೆ. ಅಲ್ಲದೆ ಇಂದಿನ ಬೆಟ್ಟದಪುರವೂ ಅಂದು ಭೈರವ ಸಂಸ್ಕೃತಿಯ ಕೇಂದ್ರವಾಗಿದ್ದುದಲ್ಲದೆ, ಬೆಟ್ಟದಪುರವನ್ನು 'ಭೈರವಪುರ' ಎಂಬುದಾಗಿ ಕರೆಯುತ್ತಿದ್ದರೆಂದು ಶಾಸನಾಧಾರಗಳಿಂದ ತಿಳಿದು ಬರುತ್ತದೆ. ಹೀಗೆ ತಾಲ್ಲೂಕಿನಲ್ಲಿ ಚೋಳರ ಕಾಲದಲ್ಲಿ ಕಾಪಾಲಿಕ ಪಂಥ ಪ್ರಚಲಿತವಾಗಿತ್ತೆಂದು ತಿಳಿಯಬಹುದಾಗಿದೆ.

ಕಾಪಾಲಿಕ ಪಂಥದ ಜೊತೆ ಜೊತೆಯಲ್ಲಿಯೇ ಕೌಳಧರ್ಮವೂ ಈ ಸುತ್ತಿನಲ್ಲಿ ಇತ್ತೆಂದು ಗುರುತಿಸಲಾಗಿದೆ. ಬೆಟ್ಟದಪುರದಲ್ಲಿರುವ ಇಂದಿನ ವಿರಕ್ತ ಮಠವು ಮೂಲದಲ್ಲಿ ಚೌಡೇಶ್ವರಿ ಮಠವಾಗಿದ್ದು ಕೌಳರ ಕಾರ್ಯಕ್ಷೇತ್ರವಾಗಿತ್ತೆಂದೂ ಪಿರಿಯಾಪಟ್ಟಣ, ತಂದ್ರೆ, ತಂದ್ರೆಗುಡಿಕೊಪ್ಪಲು, ದೊಡ್ಡಕಮರವಳ್ಳಿಗಳಲ್ಲಿ ಕಂಡು ಬರುವ ಸಪ್ತಮಾತೃಕೆಯರ

ಗುಡಿಗಳು ಕೌಳಧರ್ಮದ ಸುಳಿವನ್ನು ನೀಡುತ್ತವೆ. ಅಲ್ಲದೆ ತಾಲ್ಲೂಕಿನ ಕವಲನಹಳ್ಳಿಯು ಕೌಳ ಮೂಲದ ಹೆಸರಾಗಿದೆಯೆಂದು ಊಹಿಸಬಹುದಾಗಿದೆ. ಪಿರಿಯಾಪಟ್ಟಣದ ಗ್ರಾಮದೇವತೆ ಮಸಣಿಕಮ್ಮನ ಗುಡಿಯೂ ಮೂಲತಃ ಕೌಳಸಂಪ್ರದಾಯದವರ ನೆಲೆಯಾಗಿದ್ದಿತು. ಇಲ್ಲಿ ಮೂಲ ವಿಗ್ರಹದ ಜೊತೆಗೆ ಇನ್ನೂ ಆರು ವಿಗ್ರಹಗಳಿದ್ದು, ಇವನ್ನು ಸಪ್ತಮಾತೃಕೆಯರೆಂದು ಹೆಸರಿಸುತ್ತಿದ್ದು ಈಗಲೂ ಪೂಜೆ ನಡೆಯುತ್ತಿದೆ. ಇದರ ಬಗ್ಗೆ ಹೆಚ್ಚು ವಿಚಾರ ಮಾಡಬೇಕಿದೆ.

ಚಂಗಾಳ್ವರು ಮತ್ತು ಕೊಂಗಾಳ್ವರು ಚೋಳರ ಅಧೀನದಲ್ಲೂ ಇದ್ದ ಅರಸು ಮನೆತನಗಳು. ಇವರ ಹೆಸರುಗಳು ಒಂದೇ ಮೂಲದಿಂದ ಬಂದು ಎರಡು ಕವಲಾಗಿರುವಂತೆ ಕಾಣುತ್ತದೆ. ಈ ಎರಡು ಮನೆತನಗಳೂ ಭೈರವಾರಾಧನೆಯನ್ನು ಮಾಡುತ್ತಿದ್ದುದರ ಜೊತೆಗೆ ಜೈನಧರ್ಮವನ್ನೂ ಒಪ್ಪಿಕೊಂಡು ಅನುಸರಿಸಿಕೊಂಡು ಬಂದಂತೆ ಕಾಣುತ್ತದೆ. ಹುಣಸೂರು, ಎಡತೊರೆ, ಅರಕಲಗೂಡು, ಪಿರಿಯಾಪಟ್ಟಣ ಮತ್ತು ಕೊಡಗಿನ ಭಾಗಗಳಲ್ಲಿ ಇರುವ ಅಸಂಖ್ಯಾತ ಬಸದಿಗಳು ಇದಕ್ಕೆ ಸಾಕ್ಷಿಯಾಗಿವೆ. ಕೆಲವು ವಿದ್ವಾಂಸರು ಪುನ್ನಾಟವನ್ನು ಗುರುತಿಸುವಾಗ ಅದನ್ನು ಹೆಗ್ಗಡದೇವನಕೋಟೆ ತಾಲೂಕೆಂದಿದ್ದಾರೆ. ಆದರೆ ಕಾವೇರಿ–ಕಪಿನಿಗಳ ನಡುವಣ 'ಪುನ್ನಾಟ', ಹೆಗ್ಗಡದೇವನಕೋಟೆಯೂ ಸೇರಿದಂತೆ ಪಿರಿಯಾಪಟ್ಟಣ, ಹುಣಸೂರು, ಎಡತೊರೆ ಭಾಗಗಳನ್ನೆಲ್ಲ ಒಳಗೊಂಡಿದ್ದು, 'ಪುನ್ನಾಟ'ವು ಪಿರಿಯಾಪಟ್ಟಣ ತಾಲ್ಲೂಕಿನಲ್ಲಿರುವ ಪೂನಾಡಹಳ್ಳಿಯೇ ಹೌದೆಂಬುದಾಗಿ ವಿದ್ವಾಂಸರು ತರ್ಕಿಸಿದ್ದಾರೆ. ಅಲ್ಲದೆ ಚಂಗನಾಡಿನ ಕವಿಗಳಾದ ಮಂಗರಸ, ದೊಡ್ಡಯ್ಯ, ದೇವಪ್ಪ, ನಂಜುಂಡ, ಆದಿಯಪ್ಪ, ಜಯಕೀರ್ತಿ, ಕುಮುದೇಂದು – ಈ ಎಲ್ಲರೂ ಜೈನಕವಿಗಳೇ ಆಗಿದ್ದಾರೆ. ಬೇರೆ ಯಾವ ಧರ್ಮದ ಕವಿಗಳಾಗಲಿ ಕಾವ್ಯಗಳಾಗಲಿ ಕಂಡು ಬರದೇ ಇರುವ ಈ ಉದಾಹರಣೆ, ಈ ತಾಲೂಕಿನಲ್ಲಿನ ಜೈನಧರ್ಮದ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಪಿರಿಯಾಪಟ್ಟಣದಲ್ಲಿ ಇಂದಿಗೂ ಇರುವ ಜೈನಿಗರಬೀದಿ ಜೈನರ ಬೀದಿಯೇ ಆಗಿತ್ತು. ಹಿಂದೆ ಈ ಊರಿನಲ್ಲಿ ಅನಂತನಾಥ ತೀರ್ಥಂಕರನ ಬಸದಿ ಇತ್ತೆಂದು ತಿಳಿದು ಬರುತ್ತದೆ. ಆದರೆ ಇಂದು ಬಸದಿಯಾಗಲಿ, ವಿಗ್ರಹವಾಗಲಿ, ಬಸದಿ ಎಲ್ಲಿತ್ತೆಂದಾಗಲಿ ಗುರುತಿಸಿ ಹೇಳುವುದಕ್ಕೂ ಸಾಧ್ಯವಿಲ್ಲದಂತೆ ನಿಶ್ಶೇಷವಾಗಿದೆ. ಹೀಗೆ ಚಂಗಾಳ್ವರಿಗೆ ಚೋಳರ ಕಾಲದಲ್ಲಿದ್ದ ಯಾವುದೇ ವಿಧವಾದ ಧಾರ್ಮಿಕ ಕಟ್ಟುಕಟ್ಟಳೆಗಳು ಗಂಗರ ಕಾಲದಲ್ಲಿ ಇದ್ದಂತೆ ಕಾಣುವುದಿಲ್ಲ. ಕದಂಬರ ಕಾಲದಲ್ಲಿ ಜೈನ ಮತ್ತು ಶೈವಗಳು ಒಟ್ಟೊಟ್ಟಿಗೆ ಬೆಳೆದು ಬಂದಂತೆ ಗಂಗರ ಕಾಲದಲ್ಲೂ ಇದು ನಿರಾತಂಕವಾಗಿ ನಡೆದುಕೊಂಡು ಬಂದಂತೆ ಕಾಣುತ್ತದೆ. ಜೊತೆ ಜೊತೆಯಲ್ಲಿಯೇ ಶಂಕರಾಚಾರ್ಯರ ಅದ್ವೈತವೂ ಅಲ್ಲಲ್ಲಿ ಸೇರಿದಂತೆ ಕಾಣುತ್ತದೆ.

೧೨ನೇ ಶತಮಾನದ ಹೊತ್ತಿಗೆ ಚಂಗಾಳ್ವರು ಹೊಯ್ಸಳರ ಆಡಳಿತಕ್ಕೆ ಒಳಪಟ್ಟಿದ್ದರು. ಹೊಯ್ಸಳರು ಮೂಲತಃ ಜೈನಧರ್ಮಾವಲಂಬಿಗಳಾಗಿದ್ದರೂ ಆಕಸ್ಮಿಕವಾಗಿ ರಾಮಾನುಜಾಚಾರ್ಯರ ಶ್ರೀವೈಷ್ಣವ ಪಂಥವನ್ನು ಒಪ್ಪಿಕೊಂಡಿದ್ದರಿಂದ ಅವರ ಅನುಯಾಯಿಗಳಾದ ಚಂಗಾಳ್ವರು ಶ್ರೀ ವೈಷ್ಣವಧರ್ಮವನ್ನು ಅನಿವಾರ್ಯವಾಗಿಯಾದರೂ

ಒಪ್ಪಿಕೊಳ್ಳಬೇಕಾಗಿ ಬಂತೆಂದು ಕಾಣುತ್ತದೆ. ಇದು ಕಾರಣವಾಗಿ ಚಂಗನಾಡಿನಲ್ಲಿ ಚನ್ನಕೇಶವ ದೇವಾಲಯಗಳು ತಲೆಎತ್ತಿದವು.

ವಿಜಯನಗರದ ಅರಸರ ಅಧೀನಕ್ಕೆ ಚಂಗಾಳ್ವರು ಬಂದಮೇಲೆ ಅಂದರೆ ಕೃಷ್ಣದೇವರಾಯನ ಕಾಲದಲ್ಲಿ ಚಂಗಾಳ್ವರು ದ್ವೈತ ಹಾಗೂ ವೀರಶೈವ ಧರ್ಮಗಳಿಗೂ ಆಶ್ರಯ ಕೊಡಬೇಕಾಯಿತು. ಈ ಕಾಲದಲ್ಲಿ ವೆಂಕಟೇಶ್ವರ, ರಂಗನಾಥ ಹಾಗೂ ಶ್ರೀನಿವಾಸನ ದೇವಾಲಯಗಳು ತಲೆ ಎತ್ತಿದವು. ಹೊನ್ನೂರು, ಜವನೀಕುಪ್ಪೆ, ಮಾಕೋಡು, ಕಿತ್ತೂರು ಮುಂತಾದ ಕಡೆಗಳಲ್ಲಿ ವಿಜಯನಗರ ಕಾಲದ ದೇವಾಲಯಗಳಿವೆ. ಈ ಕಾಲದಲ್ಲಿ ಮುತ್ತೂರು ಮತ್ತು ಗುಂಡುರಾಜಪಟ್ಟಣಗಳಲ್ಲಿ ವೀರಶೈವರಿಗೂ ವೈಷ್ಣವರಿಗೂ ಭಿನ್ನಾಭಿಪ್ರಾಯಗಳು ಘರ್ಷಣೆಗಳು ನಡೆದಂತೆ ಕಾಣುತ್ತದೆ. ಇದಕ್ಕೆ ಭಗ್ನವಾಗಿರುವ ವಿಷ್ಣುವಿಗ್ರಹಗಳು ಸಾಕ್ಷಿಹೇಳುತ್ತಿವೆ. ಹೀಗೆಯೇ ಜೈನರೂ ಒಳಗೊಳಗೆ ತಮ್ಮ ಧರ್ಮಕ್ಕೆ ಆಶ್ರಯ ತಪ್ಪುತ್ತಿದೆಯೆಂದು ತಲ್ಲಣಗೊಂಡಂತೆಯೂ ಕಾಣುತ್ತಿದೆ. ಪಿರಿಯಾಪಟ್ಟಣದ ಕಾಳಗಕ್ಕೆ ಹುಣಸೂರು ತಾಲ್ಲೂಕಿನ ಹನಗೋಡು ಹಂಪೆಅರಸು ಮೈಸೂರಿನವರಿಗೆ ಸಹಾಯ ಮಾಡಲು ಇಂಥ ಧಾರ್ಮಿಕ ಸಂಘರ್ಷವೂ ಕಾರಣವಾಗಿರಬಹುದೆ? ಎಂದು ಅನುಮಾನಿಸಲು ಸಾಧ್ಯತೆಯಿದೆ.

ಸುಮಾರು ೧೪–೧೫ನೇ ಶತಮಾನದಲ್ಲಿ ವೀರಶೈವಧರ್ಮ ಚಂಗಾಳ್ವ ಭೂಮಿಯನ್ನು ಪ್ರವೇಶಿಸಿದೆ. ಬಹುಶಃ ಯಡಿಯೂರಿನಿಂದ ಹೊರಟ ಧರ್ಮಪ್ರಸಾರಕ ವಿರಕ್ತರಲ್ಲಿ ಕೆಲವರಾದರೂ ಪಿರಿಯಾಪಟ್ಟಣದ ಕಡೆಗೆ ಬಂದು ಚಂಗಾಳ್ವ ದೊರೆ, ಮತ್ತವನ ಪ್ರಜೆಗಳಲ್ಲಿ ಕೆಲವರನ್ನು ವೀರಶೈವಧರ್ಮಕ್ಕೆ ಮತಾಂತರ ಮಾಡಿದಂತೆ ತಿಳಿದು ಬರುತ್ತದೆ. ತಾಲೂಕಿನ ವೀರಶೈವರೆಲ್ಲರೂ ತಮ್ಮ ಮೂಲವನ್ನು ಹೇಳಿಕೊಳ್ಳುವಾಗ ಆಂಧ್ರದತ್ತ ಬೆರಳು ತೋರಿಸುವುದರಿಂದ ಬಹುಶಃ ವಿಜಯನಗರದ ಕಡೆಯಿಂದ ಇವರು ಇತ್ತಕಡೆಗೆ ಬಂದವರೆಂದು ಕಾಣುತ್ತದೆ. ಅದುವರೆವಿಗೂ ಚಂಗಾಳ್ವರು ಹೊಯ್ಸಳರಂತೆ

**ಯಂ ಶೈವಾಸ್ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ**

**ಬೌದ್ಧಾ ಬುದ್ಧ ಇತಿ ಪ್ರಮಾಣ ಪಟವಃ ಕರ್ತೇತಿ ನೈಯಾಯಿಕಾಃ**

**ಅರ್ಹನ್ನಿತ್ಯಥ ಜೈನ ಶಾಸನ ರತಾಃ ಕರ್ಮೇತಿ ಮೀಮಾಂಸಕಾಃ**

**ಸೋಽಯಂ ಮೋ ವಿಧ ಧಾತು ವಾಂಛಿತ ಫಲಂ ತ್ರೈಲೋಕ್ಯನಾಥೋ ಹರಿಃ ।**

ಎಂಬ ಸೂತ್ರಕ್ಕೆ ಬದ್ಧರಾಗಿದ್ದವರು ವೀರಶೈವರಾಗಿ ಧಾರ್ಮಿಕ ಕ್ಷೇತ್ರದಲ್ಲಿ ತಮ್ಮದೇ ಆದ ಒಂದು ನೆಲೆಯನ್ನು ಕಂಡುಕೊಳ್ಳಲು ಪ್ರಯತ್ನಿಸಿದಂತೆ ಕಾಣುತ್ತದೆ. ಇದೇ ಸಂದರ್ಭದಲ್ಲಿ ಬೆಟ್ಟದಪುರದ ಮಲ್ಲಿನಾಥ ತೀರ್ಥಂಕರನ ವಿಗ್ರಹಕ್ಕೆ ಬದಲಾಗಿ

ಮಲ್ಲಿಕಾರ್ಜುನಲಿಂಗದ ಪ್ರತಿಷ್ಠಾಪನೆಯಾಯಿತೆಂದು ತಿಳಿದುಬರುತ್ತದೆ. ದೇವಚಂದ್ರನ 'ರಾಜಾವಳಿ ಕಥೆ'ಯಲ್ಲಿಯೂ ಇದಕ್ಕೆ ಸಂಬಂಧಿಸಿದ ಸಾಕಷ್ಟು ಮಾಹಿತಿ ಲಭ್ಯವಿದೆ.

ಪಿರಿಯಾಪಟ್ಟಣ ತಾಲೂಕಿನ ವಿಚಾರಗಳನ್ನು ಹೇಳುವಾಗ ಮರೆಯದೆ ದಾಖಲಿಸಬೇಕಾದ ವಿಚಾರವೆಂದರೆ ಕಗ್ಗುಂಡಿಯಲ್ಲಿರುವ ಶರಣ ಹರಳಯ್ಯನ ಮಠ ಅಲ್ಲಿ ಪ್ರತಿವರ್ಷವೂ ಜಾತ್ರೆ ನಡೆಯುತ್ತಿದ್ದು ಮಾದಿಗ ಜನಾಂಗದವರು ಸಕ್ರಿಯವಾಗಿ ಇದರಲ್ಲಿ ಪಾಲುಗೊಳ್ಳುತ್ತಾರೆ. ಈ ಹರಳಯ್ಯನ ಹೆಸರಿನ ಹರಳಹಳ್ಳಿಯು ರಾವಂದೂರಿನ ಸಮೀಪದಲ್ಲಿದೆ. ಹರಳಯ್ಯನ ಸಮಾಧಿ ಅಥವಾ ಹರಳಯ್ಯ ಕುಳಿತಿದ್ದ ಸ್ಥಳ ಅರೇನಹಳ್ಳಿಯ ಸಮೀಪದಲ್ಲಿದೆ ಎಂದು ಹೇಳಲಾಗುತ್ತದೆ.

ಚಂಗಾಳ್ವರ ಕಟ್ಟಕಡೆಯ ಅರಸನಾದ ವೀರರಾಜನು ಮೈಸೂರಿನ ರಣಧೀರ ಕಂಠೀರವನ ಆಕ್ರಮಣವನ್ನು ಎದುರಿಸಲು ಇಕ್ಕೇರಿಯ ಪಾಳೆಯಗಾರರು, ಮಹಾರಾಷ್ಟ್ರದ ಷಹಾಜಿ ಮತ್ತು ಬಿಜಾಪುರದ ಸುಲ್ತಾನನ ಕಡೆಯ ರಣದುಲ್ಲಾಖಾನನ ನೆರವನ್ನು ಪಡೆದುದರ ಫಲವಾಗಿ ಮುಸ್ಲಿಮರು ಪಿರಿಯಾಪಟ್ಟಣ ತಾಲೂಕಿನಾದ್ಯಂತ ನೆಲೆಗೊಂಡರು. ಹೀಗಾಗಿ ಮುಸ್ಲಿಂ ಧರ್ಮವೂ ಇಲ್ಲಿ ತಳವೂರಿತು. ಕ್ರಿಶ್ಚಿಯನ್ನರಿಂದ ಕ್ರೈಸ್ತಧರ್ಮ ಹಾಗೂ ಇತ್ತೀಚೆಗಷ್ಟೆ ವಲಸೆಬಂದ ಟಿಬೇಟಿಯನ್ನರಿಂದ ಬೌದ್ಧಧರ್ಮದ ಮಹಾಯಾನ ಪಂಥವು ತಾಲೂಕಿನಲ್ಲಿ ಬೇರುಬಿಡುತ್ತಿವೆ. ಪಿರಿಯಾಪಟ್ಟಣ ತಾಲೂಕು ಇಷ್ಟೆಲ್ಲ ಧರ್ಮಗಳನ್ನು ತುಂಬಿಕೊಂಡಿದೆ. ಅಲ್ಲದೆ, ಸತ್ಯಸಾಯಿ ಪಂಥ, ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿಯ ವಿದ್ಯಾಲಯ ಅಯ್ಯಪ್ಪನ ಅನುಯಾಯಿಗಳೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಎಂದೂ ಧಾರ್ಮಿಕ ಘರ್ಷಣೆಗಳನ್ನು ಕಾಣದೆ, ಸಹಬಾಳ್ವೆಯ ಧರ್ಮಸಮನ್ವಯದ ನೆಲೆವೀಡು ಎನಿಸಿದೆ.

**ಬೌದ್ಧಧರ್ಮ :** ಪ್ರಾಚೀನ ಕಾಲಕ್ಕೆ ಸೇರಿದ ಬೌದ್ಧ ಕುರುಹುಗಳು ಈ ತಾಲೂಕಿನಲ್ಲಿ ಅಷ್ಟಾಗಿ ಕಂಡುಬಂದಿಲ್ಲ. ಆದರೆ ಟಿಬೆಟ್ ದೇಶದ ನಿರಾಶ್ರಿತ ಟಿಬೆಟಿಯನ್ನರಿಗೆ ತಾಲೂಕಿನ ಬೈಲಕುಪ್ಪೆಯಲ್ಲಿ ವಸಾಹತು ನಿರ್ಮಿಸಿಕೊಟ್ಟಿರುವ ಹಿನ್ನೆಲೆಯಲ್ಲಿ ಇಂದು ತಾಲೂಕಿನಲ್ಲಿ ೨೦೦೧ರ ಗಣತಿಯಂತೆ ೧೩,೩೯೧ ಮಂದಿ ಬೌದ್ಧ ಧರ್ಮೀಯರಿದ್ದು, ಅವರದೇ ಆದ ಬೌದ್ಧ ಮಂದಿರವನ್ನು ಕಲಾತ್ಮಕವಾಗಿ ನಿರ್ಮಿಸಿಕೊಂಡಿದ್ದಾರೆ. ಅದೂ ಕೂಡ ತಾಲೂಕಿನ ಪ್ರವಾಸಿ ಕೇಂದ್ರಗಳಲ್ಲೊಂದಾಗಿದೆ.

**ಜೈನ ಧರ್ಮ :** ನಾಡಿನ ಪ್ರಾಚೀನ ಧರ್ಮಗಳಲ್ಲಿ ಒಂದಾದ ಜೈನಧರ್ಮದ ಪುರಾತನ ಕುರುಹುಗಳು ತಾಲೂಕಿನ ಕಿತ್ತೂರು, ಕಂಡಕೂರು ಮುಂತಾದೆಡೆಗಳಲ್ಲಿ ಈಗಲೂ ಕಾಣಸಿಗುತ್ತವೆ. ಅವು ಪ್ರಮುಖ ಜೈನಕೇಂದ್ರಗಳಾಗಿದ್ದ ಅಂಶ, ಆಯಾ ಊರಲ್ಲಿ ಲಭಿಸಿರುವ ಶಾಸನ, ಮೂರ್ತಿಶಿಲ್ಪಗಳಿಂದ ಸ್ಪಷ್ಟವಾಗುತ್ತದೆ. ತಾಲೂಕಿನಲ್ಲಿ ರೂಢಿಯಲ್ಲಿದ್ದ ಜೈನಧರ್ಮವು ಇಂಗಳೇಶ್ವರ ಮೂಲ ದ್ರಾವಿಡ ಸಂಘಕ್ಕೆ ಸೇರಿದ್ದ ಅಂಶವೂ ಅದೇ ಶಾಸನಗಳಿಂದ ವೇದ್ಯವಾಗುತ್ತದೆ. ಆದರಿಂದು ತಾಲೂಕಿನಲ್ಲಿ ಜೈನಧರ್ಮಾವಲಂಬಿಗಳು ಕಡಿಮೆ

ಪ್ರಮಾಣದಲ್ಲಿದ್ದಾರೆ. ಆದಿನಾಥ ತೀರ್ಥಂಕರ ಸ್ವಾಮಿಯ ಬಸದಿಯನ್ನು ಇತ್ತೀಚಿಗೆ ದುರಸ್ತಿಗೊಳಿಸಿ ಪೂಜಾವ್ಯವಸ್ಥೆಯನ್ನು ಮಾಡಲಾಗಿದ್ದು, ತಾಲೂಕು ಕೇಂದ್ರ ನರಸೀಪುರದಲ್ಲಿ ಕೆಲವು ಜೈನ ಕುಟುಂಬಗಳಿವೆ.

**ಇಸ್ಲಾಂ :** ಮಹಮದ್ ಪೈಗಂಬರ್‌ನಿಂದ ಸ್ಥಾಪಿಸಲ್ಪಟ್ಟ ಇಸ್ಲಾಂ ಧರ್ಮವು ಅರೇಬಿಯಾದಲ್ಲಿ ಉದಯಿಸಿದ ತರುವಾಯ ಕರ್ನಾಟಕವನ್ನು ಕಡಲತೀರದ ಮೂಲಕ ಪ್ರವೇಶಿಸಿ ಕಾಲಕ್ರಮೇಣ ರಾಜ್ಯದ ಇತರೆ ಭಾಗಗಳಿಗೆ ವ್ಯಾಪಿಸಿತು. ಮೈಸೂರು ಜಿಲ್ಲೆಯಲ್ಲಿ ಹೈದರ್ ಅಲಿ ಮತ್ತು ಟಿಪ್ಪುಸುಲ್ತಾನರ ಆಳ್ವಿಕೆಗೂ ಮೊದಲಿನಿಂದಲೇ ಮುಸಲ್ಮಾನರು ಚದುರಿದಂತೆ ನೆಲೆಸಿದ್ದರು. ಹೈದರ್ ಮತ್ತು ಟಿಪ್ಪು ಸುಲ್ತಾನ್ ಆಡಳಿತಾವಧಿಯಲ್ಲಿ ಜಿಲ್ಲೆಯಲ್ಲಿ ರೇಷ್ಮೆ ಉದ್ಯಮವು ಸಕ್ರಿಯವಾಗಿ ಬೆಳೆದುಬಂದು ಮೈಸೂರು, ರೇಷ್ಮೆ ಸೀರೆಗಳಿಗೆ ತವರೂರಾಗಿದೆ. ಈ ಕ್ಷೇತ್ರದಲ್ಲಿ ಟಿಪ್ಪುಸುಲ್ತಾನನು ವಿಶೇಷ ಆಸ್ಥೆ ವಹಿಸಿದ ಕಾರಣ ಆರ್ಥಿಕ ಅಭಿವೃದ್ಧಿಯ ಜೊತೆಗೆ ಕೈಗಾರಿಕಾ ಬೆಳವಣಿಗೆಗೂ ನಾಂದಿಯಾಯಿತು. ಹೈದರ್–ಟಿಪ್ಪು ಕಾಲದಿಂದ ವಿವಿದೆಡೆ ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿ ನೆಲೆಸಿದ್ದಾರೆ. ತಾಲೂಕಿನಲ್ಲಿರುವ ದಖ್ಖನಿ ಮುಸ್ಲಿಮರ ಮನೆಮಾತು ಉರ್ದು ಆಗಿದೆ. ತಾಲೂಕು ಕೇಂದ್ರ ಪಿರಿಯಾಪಟ್ಟಣ ಸೇರಿದಂತೆ ತಾಲೂಕಿನ ವಿವಿದೆಡೆ್ಲ ಮಸೀದಿ, ದರ್ಗಾ ಹಾಗೂ ಮದರಸಾಗಳಿದ್ದು, ದರ್ಗಾಗಳಲ್ಲಿ ವಾರ್ಷಿಕ ಉರುಸನ್ನು ಆಚರಿಸಲಾಗುತ್ತದೆ.

**ಕ್ರೈಸ್ತಧರ್ಮ :** ಪೋರ್ಚುಗೀಸರ ಆಗಮನದೊಂದಿಗೆ ಕ್ರೈಸ್ತಧರ್ಮವು ಕರ್ನಾಟಕವನ್ನು ೧೬ನೇ ಶತಮಾನದಲ್ಲಿ ಪ್ರವೇಶಿಸಿತು. ಕ್ರೈಸ್ತಧರ್ಮದಲ್ಲಿ ರೋಮನ್ ಕ್ಯಾಥೋಲಿಕ್ ಮತ್ತು ಪ್ರಾಟೆಸ್ಟಂಟ್ ಎಂಬ ಎರಡು ಪಂಥಗಳಿವೆ. ಪೋರ್ಚುಗೀಸರಿಂದಾಗಿ ಕ್ಯಾಥೋಲಿಕ್ ಪಂಥವು ಹೆಚ್ಚು ಜನಪ್ರಿಯವಾಯಿತು. ಕರಾವಳಿಯ ಮಂಗಳೂರು, ಉಡುಪಿ, ಕುಂದಾಪುರ ಹಾಗೂ ಇತರೆ ಪ್ರದೇಶಗಳಿಗೆ ಕ್ರೈಸ್ತ ಧರ್ಮವು ಮೊದಲು ಪ್ರವೇಶಮಾಡಿದ ಕಾರಣ ಆ ಭಾಗದಲ್ಲಿ ಅವರ ಮಿಶನರಿ ಚಟುವಟಿಕೆಗಳು ತೀವ್ರಗತಿಯಿಂದ ನಡೆದು ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಕಾರಣವಾದುವು. ಬ್ಯಾಸೆಲ್ ಮಿಷನ್ ಸಂಸ್ಥೆಯು ನಡೆಸಿದ ಕಾರ್ಯಗಳ ಪರಿಣಾಮವಾಗಿ ಕರಾವಳಿಯು ಶಿಕ್ಷಣ ಅಭಿವೃದ್ಧಿಗೆ ಪ್ರಮುಖ ಕೊಡುಗೆಯನ್ನು ನೀಡಿತು. ಕಾಲಕ್ರಮೇಣ ಕ್ರೈಸ್ತ ಧರ್ಮವು ರಾಜ್ಯದ ಇತರೆ ಭಾಗಗಳಿಗೆ ಪ್ರಸರಿಸಿ ನಂತರ ಮೈಸೂರು ಜಿಲ್ಲೆಯಲ್ಲಿಯೂ ಜನಪ್ರಿಯವಾಯಿತು. ಈ ಜಿಲ್ಲೆಯಲ್ಲಿಯೂ ಬಾಸೆಲ್ ಮಿಷನ್, ಲಂಡನ್ ಮಿಷನ್ ಮತ್ತು ವೆಸ್ಲಿಯನ್ ಮಿಷನ್ ಪ್ರಾಟೆಸ್ಟಂಟ್ ಸಂಸ್ಥೆಗಳು ಕ್ರಿ.ಶ. ೧೯ನೇ ಶತಮಾನದಲ್ಲಿ ಚಟುವಟಿಕೆಯನ್ನು ಪ್ರಾರಂಭಿಸಿ ವಿವಿಧ ತಾಲೂಕುಗಳಲ್ಲಿ ಧರ್ಮಪ್ರಚಾರ ಹಾಗೂ ಶೈಕ್ಷಣಿಕ ಅಭಿವೃದ್ಧಿಗೆ ಕಾರಣವಾದುವು. ಹಳೆಯ ಮೈಸೂರು ರಾಜ್ಯದಲ್ಲಿ ಕ್ರಿ.ಶ. ೧೮೧೦ರಲ್ಲಿ ಲಂಡನ್ ಮಿಷನ್ ಸಂಸ್ಥೆಯು ಬೆಂಗಳೂರಿನಲ್ಲಿ ತನ್ನ ಶಾಖೆಗಳನ್ನು ಸ್ಥಾಪಿಸಿ ನಂತರ ಮೈಸೂರಿಗೂ ವಿಸ್ತರಿಸಿತು. ಪಿರಿಯಾಪಟ್ಟಣ ತಾಲೂಕಿನಲ್ಲಿ ಕ್ರೈಸ್ತರು ವಿರಳವಾಗಿ ನೆಲೆಸಿದ್ದು ತಾಲೂಕು ಕೇಂದ್ರ ಪಿರಿಯಾಪಟ್ಟಣ ಸೇರಿದಂತೆ ಇತರೆಡೆ ಇಗರ್ಜಿಗಳಿದ್ದು, ಶಿಕ್ಷಣ ಸಂಸ್ಥೆಗಳನ್ನೂ ನಡೆಸುತ್ತಿದ್ದಾರೆ.

**ಮಠಗಳು**

ತಾಲೂಕಿನ ಮಠಗಳ ಇತಿಹಾಸವನ್ನು ಸುಮಾರು ೧೦-೧೧ನೆಯ ಶತಮಾನದಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ಭಕ್ತವರ್ಗದವರು ಸನ್ಮಾರ್ಗದಲ್ಲಿ ಸಾಗಲು ಸ್ಫೂರ್ತಿ, ಪ್ರೇರಣೆ, ಮಾರ್ಗದರ್ಶನ ನೀಡುವುದು ಮಠಗಳ ಮೂಲಭೂತ ಕರ್ತವ್ಯವಾಗಿದೆ. ತಾಲೂಕಿನಲ್ಲಿ ಲಭಿಸಿರುವ ಚೋಳ, ಹೊಯ್ಸಳ, ವಿಜಯನಗರ ಹಾಗೂ ಮೈಸೂರು ಅರಸರ ಶಾಸನಗಳಿಂದ ಅವರು ಮಠಗಳಿಗೆ ನೀಡಿದ್ದ ಆಶ್ರಯ ಪ್ರೋತ್ಸಾಹಗಳು ಮನವರಿಕೆಯಾಗುತ್ತದೆ.

೧೨ನೆಯ ಶತಮಾನದಲ್ಲಿ ಬಸವಾದಿ ಶರಣ ಪರಂಪರೆಯು ತತ್ತ್ವ ಪ್ರಚಾರಕ್ಕಾಗಿ ಅನೇಕ ಶಿಷ್ಯರನ್ನು ನಾಡಿನಾದ್ಯಂತ ಕಳುಹಿಸಿತು. ಶೂನ್ಯಪೀಠಾಧ್ಯಕ್ಷ ಅಲ್ಲಮಪ್ರಭು ವಿರಕ್ತರು. ಈ ಪರಂಪರೆಗೆ ಸೇರಿದ ಅನೇಕ ಮಠಗಳು ನಮ್ಮ ನಾಡಿನ ಬೀದರಿನಿಂದ ದಕ್ಷಿಣದ ತುದಿಯವರೆಗೆ ಮಾತ್ರವಲ್ಲ ಆಂಧ್ರ ತಮಿಳುನಾಡುಗಳಲ್ಲಿಯೂ ಇರುವುದನ್ನು ಕಾಣುತ್ತೇವೆ. ಅನ್ನದಾಸೋಹದ ಜೊತೆಗೆ ಜ್ಞಾನ ದಾಸೋಹವನ್ನು ಉಣಬಡಿಸಿ ಜನರ ಸಾಂಸ್ಕೃತಿಕ ಸಂಪತ್ತನ್ನು ವೃದ್ಧಿಗೊಳಿಸುವ ಕೆಲಸವನ್ನು ಮಠಗಳು ಮಾಡುತ್ತಿವೆ. ಈ ಭವ್ಯ ಪರಂಪರೆಗೆ ಪಿರಿಯಾಪಟ್ಟಣ ತಾಲೂಕಿನ ಮಠಗಳೂ ಸೇರುತ್ತವೆ. ತಾಲೂಕಿನ ಅಂತಹ ಕೆಲ ಪ್ರಮುಖ ಮಠಗಳ ಪರಿಚಯ ಇಲ್ಲಿದೆ.

೧. **ಕಗ್ಗುಂಡಿ :** ಬಸವಾದಿ ಶರಣ ಪರಂಪರೆಯ ಶರಣ ಮಾದಾರ ಹರಳಯ್ಯನವರ ಮಠ ಇದೆ. ವರ್ಷದಲ್ಲಿ ಒಮ್ಮೆ ಜಾತ್ರೆ ನಡೆಯುತ್ತದೆ.

೨. **ದೊಡ್ಡಕಮರಹಳ್ಳಿ :** ಪಿರಿಯಾಪಟ್ಟಣ ಮತ್ತು ಕೊಡಗುಜಿಲ್ಲೆಯ ಗಡಿಯಲ್ಲಿದೆ. ಚೌಡೇಶ್ವರಿ ಮಠ ಎಂದು ಹೇಳುತ್ತಾರೆ. ಈಗ ಇದು ಪಾಳುಬಿದ್ದಿದೆ.

೩. **ದಿಂಡಗಾಡು :** ಬಸವಜ್ಯೋತಿಮಠ, ಇದು ಬೆಟ್ಟದಪುರ ಮಠದ ಶಾಖೆ ಎಂದು ಹೇಳಲಾಗಿದೆ. ಈ ಮಠವನ್ನು ಬಸವಜ್ಯೋತಿ ಮಠ ಎಂದು ಕರೆಯಲಾಗುತ್ತಿದೆ.

೪. **ಗವಿಸಿದ್ಧಲಿಂಗೇಶ್ವರ ತಮ್ಮಡಹಳ್ಳಿ (ಕಿತ್ತೂರು) :** ಕಿತ್ತೂರಿನ ಸಮೀಪದ ತಮ್ಮಡಹಳ್ಳಿ ಎಂಬ ಗ್ರಾಮದ ಸನಿಹದಲ್ಲಿನ ಗವಿಯಲ್ಲಿ ಸಿದ್ದಲಿಂಗೇಶ್ವರರ ತೋರುಗದ್ದುಗೆಯಿದೆ. ಗವಿಯು ನೆಲದ ಒಳಗಡೆ ಇದ್ದು, ಬೃಹತ್‌ಬಂಡೆಯನ್ನು ಹೊಂದಿದೆ. ಒಳಗಡೆ ಸಿದ್ಧಲಿಂಗೇಶ್ವರ ದೇವಾಲಯವಿದೆ. ಇಲ್ಲಿ ಸಿದ್ಧಲಿಂಗೇಶ್ವರರು ತಪಸ್ಸು ಮಾಡಿರಬಹುದೆಂದು ಹೇಳಲಾಗಿದೆ. ಕಾರಣ ಪಿರಿಯಪಟ್ಟಣವನ್ನು ಚಂಗಾಳ್ವರು ಆಳುತ್ತಿದ್ದ ಕಾಲದಲ್ಲಿ (ಹದಿನೈದನೆಯ ಶತಮಾನದಲ್ಲಿ) ಎಡೆಯೂರು ಸಿದ್ಧಲಿಂಗೇಶ್ವರರು ತಮ್ಮ ಶಿಷ್ಯರೊಡನೆ ಪ್ರಯಾಣ ಮಾಡುತ್ತಿದ್ದಾಗ ಇಲ್ಲಿ ತಂಗಿರಬಹುದು ಎನ್ನಲಾಗಿದೆ.

೫. **ಮರದೂರು :** ಇಲ್ಲಿದ್ದ ಸಿದ್ಧೇಶ್ವರಮಠ ಈಗ ಅಸ್ಥಿತ್ವದಲ್ಲಿ ಇಲ್ಲ. ಮಠದ ಭೂಮಿ ಪರಭಾರೆಯಾಗಿದ್ದು, ಮಠದ ಕಾವಲು ಎಂಬ ಜಾಗವಿದೆ. ಸಮೀಪದಲ್ಲಿ ಪ್ರಾಚೀನ ದೇವಾಲಯವಿದೆ.

೬. **ಅತ್ತಿಗೋಡು :** ಇಲ್ಲಿಯ ಮಹದೇಶ್ವರ ಮಠದ ಸ್ಥಾಪಕರು ಮಹಾಲಿಂಗವಡೆಯರು. ದೊಡ್ಡಅಪ್ಪಾಜಯ್ಯ, ಕುಳ್ಳ ಅಪ್ಪಾಜಯ್ಯ, ಉರಿಯಪ್ಪಯ್ಯನವರು ಹಿಂದಿನ ಪ್ರಮುಖ ಗುರುಗಳು. ಹಿಂದಿನವರ ಸಮಾಧಿಗಳು ಸಮೀಪದಲ್ಲಿವೆ. ಈಗ ಹಾಲಿ ಯಾರೂ ಪೀಠಾಧಿಪತಿಗಳಿಲ್ಲ. ಮಠವು ಮಹದೇಶ್ವರ ದೇವಾಲಯವಾಗಿದ್ದು ಅದಕ್ಕೆ ಭೂಮಿಯಿದೆ. ನಿತ್ಯ ಪೂಜೆ ಹಾಗೂ ವಿಶೇಷ ಕಾರ್ತಿಕ ಪೂಜೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

೭ಅ. **ಕನ್ನಡಮಠ :** ಕನ್ನಡಮಠ ಎನ್ನುವ ಹೆಸರು ಅಪರೂಪ. ಒಂದು ಭಾಷೆ ಹೆಸರಿನಿಂದ ಕರೆಸಿಕೊಳ್ಳುವ ಈ ಮಠ ನೆರೆಯ ವೀರಾಜಪೇಟೆ ತಾಲೂಕು ಅಮ್ಮತ್ತಿ ನಾಡು ಬೆಟ್ಟಗೇರಿ ಗ್ರಾಮದಲ್ಲಿದೆ. ಈ ಮಠಕ್ಕೆ ೧೮೦೯ರಲ್ಲಿ ಕೊಡಗಿನ ವೀರರಾಜೇಂದ್ರ ಒಡೆಯರಿಂದ ಜಹಗೀರು ನಿಬಂಧನೆ ಮೇರೆಗೆ ಕಂದಾಯ ರಹಿತವಾಗಿ ಧಾರ್ಮಿಕ ಮತ್ತು ದಾಸೋಹಗಳನ್ನು ನಡೆಸಿಕೊಂಡು ಹೋಗಲು ೧೯೩ ಎಕರೆ ಭೂಮಿಯನ್ನು ಕೊಡಲಾಗಿತ್ತು. ಕೊಡಗಿನ ರಾಜರು ಮೈಸೂರು ಸೀಮೆಗೆ ಬಂದಿರುವಾಗ ಪಿರಿಯಾಪಟ್ಟಣದಲ್ಲಿ ತಂಗುತ್ತಿದ್ದು, ಬೆಟ್ಟದಪುರದ ಮಠದ ಸ್ವಾಮಿಗಳಿಗೆ ಗುರುಶಿಷ್ಯ ಸಂಬಂಧ ಕಲ್ಪಿತವಾದ ಮೇಲೆ ಕನ್ನಡಮಠ ಬೆಟ್ಟದಪುರ ಮಠದ ಅಂಕಿತದಲ್ಲಿದೆ.

೮. **ನಿಡುಮಾಮಿಡಿಮಠ :** ಇದು ಪ್ರಾಚೀನವಾದ ಮಠ. ಈಗ ಪಿರಿಯಾಪಟ್ಟಣದ ದೊಡ್ಡ ಬೀದಿಯ ಕಂಠಿ ಪಾರ್ವತಮ್ಮನವರ ಕಲ್ಯಾಣ ಮಂಟಪವಾಗಿ ಬದಲಾಗಿದೆ.

೯. **ಜಪದಕಟ್ಟೆ ಮಠ :** ಇದೊಂದು ಸಾಂಸಾರಿಕ ಮಠ; ಹಳೆಯಕಾಲದ ಹಂಚಿನ ಮನೆಯಿದೆ. ಮಹದೇಶ್ವರ ದೇವಾಲಯವಿದೆ.

೧೦. **ಮಾಕೋಡುಮಠ :** ಇದು ಇತ್ತೀಚೆಗೆ ಗಂಗೂರು ವೀರಪ್ಪಾಚಾರ್‌ಗಾಗಿ ನಿರ್ಮಿಸಿದ ಮಠ. ಇದೊಂದು ವೀರಶೈವೇತರ ಮಠವಾಗಿದೆ.

೧೧. **ರಾವಂದೂರು ಮಠ :** ಇದು ಬೆಟ್ಟದಪುರದ ಶಾಖೆ ಎಂದು ಹೇಳುತ್ತಾರೆ. ಹಿಂದಿನ ಶ್ರೀಗಳ ಸಮಾಧಿಗಳು ಮಠದ ಆವರಣದಲ್ಲಿವೆ. ೧೯೬೫ ರಲ್ಲಿ ಚಿತ್ರದುರ್ಗದ ಶಿವಮೂರ್ತಿ ಮುರುಘರಾಜೇಂದ್ರಸ್ವಾಮಿ ಈಗಿನ ಮಠದ ಮೋಕ್ಷಪತಿ ಸ್ವಾಮಿ ಅವರಿಗೆ ಪಟ್ಟಾಭಿಷೇಕ ಮಾಡಿದ್ದಾರೆ. ಈ ಮಠವು ಊರಿನ ಹೊರ ವಲಯದ ಪ್ರಶಾಂತ ಸ್ಥಳದಲ್ಲಿದೆ.

೧೨. **ಬೆಟ್ಟದಪುರ ಮಠ :** ಈ ತಾಲೂಕಿನ ಪ್ರಸಿದ್ಧಮಠ ಮಾತ್ರವಲ್ಲ, ಮೈಸೂರು ಜಿಲ್ಲೆಯಲ್ಲಿಯೂ ಪ್ರಸಿದ್ಧವಾದ ಮಠ. ೧೯೭೯ರಲ್ಲಿ ಲಿಂಗೈಕ್ಯ ಚನ್ನವೀರದೇಶಿಕೇಂದ್ರ ಸ್ವಾಮಿಗಳು ತಮ್ಮ ಮಠವನ್ನು ಸ್ವತಂತ್ರ ವಿರಕ್ತಮಠ ವೆಂದು ಹೇಳಿದ್ದಾರೆ. ಇದೊಂದು ಬಸವ ಪರಂಪರೆಯ ಮಠ ಎನ್ನುವುದು ಸತ್ಯ. ಈ ಮಠದಮೂಲ ಆರಾಧ್ಯದೇವ ಸಿದ್ಧಲಿಂಗೇಶ್ವರ ಗದ್ದುಗೆಯಾಗಿರುತ್ತದೆ. ಈ ಮಠವು ಚಂಗಾಳ್ವರ ಕಾಲದಲ್ಲಿ ಅಂದರೆ ಎಡೆಯೂರು ಸಿದ್ಧಲಿಂಗೇಶ್ವರರ ಕಾಲದಲ್ಲಿ ಆರಂಭಗೊಂಡಿರಬಹುದೆಂದು ಹೇಳಬಹುದಾಗಿದೆ. ಮೂಲದಲ್ಲಿ ಇದು ಚೌಡೇಶ್ವರಿ ಮಠವಾಗಿದ್ದು ಆ ದೇವಿಗೆ ಸಂಬಂಧಿಸಿದ ಆರಾಧನಾ ಸಲಕರಣೆಗಳು ಈಗಲೂ ಈ ಮಠದಲ್ಲಿವೆ.

## ಪ್ರಮುಖ ಜಾತಿ ಹಾಗೂ ಬುಡಕಟ್ಟು ಸಮುದಾಯಗಳು

ಮಧ್ಯಕಾಲೀನ ಇತಿಹಾಸ ಕಾಲದಲ್ಲಿ ವರ್ಣಧರ್ಮ ವ್ಯವಸ್ಥೆಗೆ ಆಳುವ ಪ್ರಭುಗಳ ಮತ್ತು ವರ್ತಕರ ಬೆಂಬಲವಿರುತ್ತಿತ್ತು. ಇದರಿಂದ ಬ್ರಾಹ್ಮಣರು ವಿವಿಧ ರೀತಿಯ ಷಟ್ಕರ್ಮ ಇತ್ಯಾದಿಗಳನ್ನು ಮಾಡುತ್ತಿದ್ದು, ಜ್ಯೋತಿಷಿಗಳೂ ಕರಣಿಕರೂ ಆಗಿರುತ್ತಿದ್ದರು.

ಬ್ರಾಹ್ಮಣ ವರ್ಗದ ನಂತರ ಆಳುವ ವರ್ಗದವರು ಸಮಾಜದಲ್ಲಿ ಪ್ರತಿಷೆ«ಯ ಸ್ಥಾನವನ್ನು ಪಡೆದುಕೊಂಡಿದ್ದರು. ವರ್ಣವ್ಯವಸ್ಥೆಯಲ್ಲಿ ಕ್ಷತ್ರಿಯರೆಂಬ ಪ್ರತ್ಯೇಕವಾದ ಹಾಗೂ ವಿಶಿಷ್ಟವಾದ ಜಾತಿಯಿರಲಿಲ್ಲ. ಬೇರೆ ಬೇರೆ ಜಾತಿಯಿಂದ ಬಂದವರು ಆಳುವ ವರ್ಗದಲ್ಲಿದ್ದರು. ಇವರು ಸ್ವಸಾಮರ್ಥ್ಯದಿಂದ ರಾಜ್ಯವನ್ನು ಕಟ್ಟಿದ ಸಂದರ್ಭದಲ್ಲಿ ಪುರೋಹಿತ ವರ್ಗ ಶಾಸ್ತ್ರೀಯವಾಗಿ ಅಂತಹ ಮನೆತನಗಳಿಗೆ ಮನ್ನಣೆ ಕೊಟ್ಟಾಗ ಅದು ಕ್ಷತ್ರಿಯವರ್ಣದ ಸ್ಥಾನಮಾನವನ್ನು ಪಡೆದುಕೊಳ್ಳುತ್ತಿತ್ತು. ಆಗ ಅವರು ತಮ್ಮ ಹೆಸರುಗಳ ಮುಂದೆ ಒಡೆಯ, ಅರಸ, ಪ್ರಭು, ನಾಯಕ ಮೊದಲಾದ ಸ್ಥಾನಸೂಚಕ ಪದಗಳನ್ನು ಸೇರಿಸಿಕೊಳ್ಳುತ್ತಿದ್ದರು.

ಸಮಾಜದ ಮೂರನೆಯ ಶ್ರೇಣಿಗೆ ವ್ಯಾಪಾರಿವರ್ಗ ಸೇರಿದ್ದಿತು. ಪಿರಿಯಾಪಟ್ಟಣದ ಭಾಗದಲ್ಲಿ ವೈಶ್ಯರು, ಶೆಟ್ಟರು, ಬಣಜಿಗರು, ಶ್ರೇಷ್ಠಿಗಳು ಮುಂತಾದವರಿದ್ದರು. ಇವರು ಯಾವ ಯಾವ ವಸ್ತುಗಳನ್ನು ಮಾರುತ್ತಾರೆ ಎಂಬುದರ ಮೇಲೆ ಇವರಿಗೆ ಬೇರೆ ಬೇರೆ ಹೆಸರು ಇರುತ್ತವೆ. ಉದಾ : ಉಪ್ಪು ಮಾರುವವರು ಉಪ್ಪಲಿಗ ಶೆಟ್ಟರು, ಚಿನ್ನ ಬೆಳ್ಳಿ ಮುತ್ತು ರತ್ನ ವಜ್ರ ವೈಡೂರ್ಯಗಳನ್ನು ಮಾರುವವರು ಶ್ರೇಷ್ಠಿಗಳಾದರು. ದವಸ ಧಾನ್ಯಗಳು, ಬಟ್ಟೆ ಬರೆಗಳನ್ನು ಮಾರುತ್ತಿದ್ದವರು ವೈಶ್ಯರಾಗಿರುತ್ತಿದ್ದರು. ಗೃಹೋಪಯೋಗಿ ವಸ್ತುಗಳನ್ನು ಮಾರುವವರು ಶೆಟ್ಟರಾದರೆ, ಅರಿಸಿನ, ಕುಂಕುಮ, ಬಳೆ, ಮಣಿ ಕಾಚು ಮುಂತಾದವುಗಳನ್ನು ಮಾರುವವರು ಬಣಜಿಗರೆನಿಸಿಕೊಂಡಿದ್ದರು.

ಸಮಾಜದ ನಾಲ್ಕನೆಯ ಶ್ರೇಣಿ ಶೂದ್ರರದು. ಈ ವರ್ಗಕ್ಕೆ ವೀರಶೈವ, ಒಕ್ಕಲಿಗ, ಕುರುಬ, ಕುಂಬಾರ, ಉಪ್ಪಾರ, ಅಕ್ಕಸಾಲಿಗ, ತೊರೆಯರಿಂದ ದಲಿತರವರೆಗೂ ಸೇರುತ್ತದೆ.

ಪಿರಿಯಾಪಟ್ಟಣ ತಾಲೂಕಿನ ಬ್ರಾಹ್ಮಣರಲ್ಲಿ ಸ್ಮಾರ್ತ ಹಾಗೂ ಆಗಮಿಕ ಬ್ರಾಹ್ಮಣರಲ್ಲದೆ ಸಂಕೇತಿ ಬ್ರಾಹ್ಮಣರು ಎಂಬ ಒಂದು ವರ್ಗವಿದೆ. ಇವರು ಪೂರ್ವದಲ್ಲಿ ತಮಿಳುನಾಡಿನ ಸೆಂಕೋಟ್ಟೈನಿಂದ ಇತ್ತ ಕಡೆಗೆ ವಲಸೆ ಬಂದು ವ್ಯವಸಾಯವನ್ನು ಅವಲಂಬಿಸಿದರು. ಸೆಂಕೋಟ್ಟೈ ಪದದ ಅಪಭ್ರಂಶವೇ ಸಂಕೇತಿಯಾಗಿದೆ ಎಂದು ಹೇಳಿಕೊಳ್ಳುತ್ತಾರೆ. ಇವರು ಗಮಕ, ಸಂಗೀತ, ನೃತ್ಯ ಇತ್ಯಾದಿ ಕಲೆಗಳಲ್ಲಿ ವಿಶೇಷ ಆಸಕ್ತಿಯುಳ್ಳವರಾಗಿ ತಾಲೂಕಿನ ಸಾಂಸ್ಕೃತಿಕ ಹರಿಕಾರರೆನಿಸಿದ್ದಾರೆ.

ವ್ಯಾಪಾರಿ ವರ್ಗದಲ್ಲಿ ಬಣಜಿಗರು, ತೆಲುಗು ಬಣಜಿಗರು, ಶೆಟ್ಟರು ಶ್ರೇಷ್ಠಿಗಳು, ಕೋಮಟಿ ಶೆಟ್ಟರು, ವೀರಶೈವ ಶೆಟ್ಟರು, ಮುಂತಾದವರಿದ್ದಾರೆ. ಮಡಕೆ ಮಾರುವ ಕುಂಬಾರರನ್ನು ಕುಂಬಾರಶೆಟ್ಟರೆಂದೇ ಗುರುತಿಸಲಾಗಿದೆ. ಉಪ್ಪಲಿಗಶೆಟ್ಟರೂ ಇದೇ ಗುಂಪಿಗೆ ಬರುತ್ತಾರೆ.

ಗಂಗಡಿಕಾರ ಒಕ್ಕಲಿಗ, ಕುಂಚಿಟಿಗ ಒಕ್ಕಲಿಗ, ನಾಮಧಾರಿ ಗೌಡ, ದಾಸ ಒಕ್ಕಲಿಗ, ಕುರುಬ, ಉಪ್ಪಾರ, ತೊರೆಯ, ಬೆಸ್ತ, ಬೇಡ, ಅಗಸ, ದರ್ಜಿ, ಗಾಣಿಗ, ಗೊಲ್ಲ, ಈಡಿಗ, ಕುಂಬಾರ, ಮೇದ, ನಾಯಿಂದ, ದೇವಾಂಗ, ಪಾಂಚಾಳ, ಕಂಚುಗಾರ, ಅಕ್ಕಸಾಲಿಗ, ಬಡಗಿ, ಕಲ್ಕುಟಿಗ, ಚಮ್ಮಾರ ಮುಂತಾದ ಜಾತಿಗಳ ಜನರಿದ್ದಾರೆ. ಪರಿಶಿಷ್ಟ ಜಾತಿಯಲ್ಲಿ ಎಡಗೈ ಬಲಗೈ ಎಂಬ ಎರಡು ಪ್ರಭೇದಗಳವರಿದ್ದಾರೆ. ಬುಡಕಟ್ಟು ಜನಾಂಗಗಳಲ್ಲಿ ಬೆಟ್ಟಕುರುಬ, ಜೇನುಕುರುಬ, ಕಾಡುಕುರುಬ, ಸೋಲಿಗ, ಯರುವ, ಇರುಳಿಗ ಮುಂತಾದವರಿದ್ದಾರೆ. ರಾಜ್ಯದ ಅಥವಾ ಗ್ರಾಮದ ಯಾವುದೇ ಸಾಮಾಜಿಕ ಅಥವಾ ಯಾವುದೇ ಸಮಸ್ಯೆಗಳನ್ನು ಚರ್ಚಿಸಲು ಈ ಸಮಾಜದ ಎಲ್ಲ ಜಾತಿಯ ಮುಖಂಡರೂ, ಚಾವಡಿಯಲ್ಲಿ ಸೇರಿ ತೀರ್ಮಾನ ಕೈಗೊಳ್ಳುವ ಪದ್ಧತಿ ರೂಢಿಯಲ್ಲಿತ್ತು.

ಪಿರಿಯಾಪಟ್ಟಣ ತಾಲೂಕಿಗೆ ಮುಸ್ಲಿಮರ ಪ್ರವೇಶ ೧೬–೧೭ ನೇ ಶತಮಾನಗಳ ಅಂತರದಲ್ಲಾಯಿತು. ಕಂಠೀರವ ನರಸರಾಜ ಒಡೆಯರ ಕಾಲದಲ್ಲಿ ಬಿಜಾಪುರ ಮತ್ತು ಮೈಸೂರಿನ ನಡುವೆ ರಾಜಕೀಯ ಸಂಘರ್ಷ ಉಂಟಾಯಿತು. ಈ ಎರಡು ರಾಜ್ಯಗಳ ಯುದ್ಧಗಳಲ್ಲಿ ಪಿರಿಯಾಪಟ್ಟಣದ ಅರಸರು ಮೈಸೂರರಸರ ವಿರುದ್ಧವಾಗಿ ವಿಜಾಪುರದ ಮುಸ್ಲಿಂ ರಾಜರಿಗೆ ನೆರವಾಗಿ ನಿಂತರು. ಇದರಿಂದ ಅನೇಕ ಮುಸ್ಲಿಮರು ಪಿರಿಯಾಪಟ್ಟಣದಲ್ಲಿ ನೆಲೆನಿಂತರು. ಇವರಲ್ಲಿ ಹೆಚ್ಚು ಜನ ಸೈನ್ಯದಲ್ಲಿ ಸೇವೆ ಸಲ್ಲಿಸಿದವರು. ಪಿರಿಯಾಪಟ್ಟಣದ ಕಾಳಗದಲ್ಲಿ ವೀರರಾಜನ ಪರವಾಗಿ ಮೈಸೂರು ಅರಸರ ವಿರುದ್ಧವಾಗಿ ಹೋರಾಡಿದ ವೀರ ಪೈಗೂರ್ ಫಕೀರನ ಹೆಸರು ಅಜರಾಮರವಾಗಿದೆ (ಹುಣಸೂರು ಕಡೆಯಿಂದ ಪಿರಿಯಾಪಟ್ಟಣಕ್ಕೆ ಹೋಗುವಾಗ ಊರು ಒಂದು ಕಿ. ಮೀ. ದೂರವಿದೆ ಎನ್ನುವಾಗ ಬಲಭಾಗಕ್ಕೆ ಬಾಲಬಾಯಿ ತೋಪು ಎಂದು ಕರೆಯುವ ಸ್ಥಳವಿದೆ. ಇಲ್ಲಿ

ಈ ಫಕೀರನ ಸಮಾಧಿ ಇದೆ. ಇಲ್ಲಿನ ಮುಸ್ಲಿಮರು ಈ ಫಕೀರನನ್ನು ಹಜರತ್ ಭೋಲೆ ಬಾಲೆ ಷಾ ಖಾದ್ರಿ ಚಿಶ್ತಿ ಎಂದು ಕರೆಯುವುದಲ್ಲದೆ ಈ ಷಹೀದ್ (ಹುತಾತ್ಮ) ನ ಸ್ಮರಣಾರ್ಥವಾಗಿ ಪ್ರತಿವರ್ಷ ಉರುಸ್ ನಡೆಸುತ್ತಾರೆ. ಈ ವೀರನ ಸ್ಮರಣಾರ್ಥವಾಗಿ 'ಮಜ್ಜಣಕುಣಿತ' ಎಂಬ ಜನಪದ ನೃತ್ಯವನ್ನು ಉಪ್ಪಾರಗೇರಿಯ ದ್ಯಾವಪ್ಪನವರ ಮನೆತನದವರು ಬಾಬಯ್ಯನ ಹಬ್ಬದಂದು ಇಂದಿಗೂ ನಡೆಸಿಕೊಂಡು ಬಂದಿದ್ದಾರೆ). ಇದಲ್ಲದೆ ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಕಾಲದಲ್ಲಿ ಮುಸ್ಲಿಮರು ಈ ಪ್ರದೇಶಕ್ಕೆ ಹೆಚ್ಚಾಗಿ ಬರತೊಡಗಿದರು. ಪಿರಿಯಾಪಟ್ಟಣ, ಅರೇನಹಳ್ಳಿ, ಪಾರೇಕೊಪ್ಪಲು, ರಾವಂದೂರು, ಹಳಗನಹಳ್ಳಿ ಮುಂತಾದ ಕಡೆಗಳಲ್ಲಿ ಇವರು ದಟ್ಟವಾಗಿದ್ದು ಇಲ್ಲೆಲ್ಲ ಮಸೀದಿಗಳನ್ನು ಕಟ್ಟಿಸಿದ್ದಾರೆ. ಪಿರಿಯಾಪಟ್ಟಣದಲ್ಲಿ ಈ ಹಿಂದೆ ಅರಬ್ಬರು ಇದ್ದರೆಂದು ಹಿರಿಯರು ಹೇಳುತ್ತಾರೆ. ಹುಣಸೂರು ತಾಲೂಕಿನ ಅರಬ್ಬಿತಿಟ್ಟು ಇದನ್ನೇ ಸೂಚಿಸುತ್ತದೆ. ಆದರೆ ಈಗ ಅವರೇನಾದರು? ಎಲ್ಲಿ ಹೋದರು? ಎಂಬ ಯಾವ ವಿಷಯವೂ ತಿಳಿಯುವುದಿಲ್ಲ. ಕ್ರೈಸ್ತರು ಇತ್ತೀಚಿಗಷ್ಟೆ ತಾಲೂಕಿನಲ್ಲಿ ಶಾಲಾಕಾಲೇಜುಗಳನ್ನು ಕಟ್ಟಿ ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳುತ್ತಿದ್ದಾರೆ. ವಲಸೆ ಬಂದ ಟಿಬೇಟಿಯನ್ನರೂ ಈ ತಾಲೂಕಿನ ಬೈಲುಕುಪ್ಪೆಯಲ್ಲಿ ತಳವೂರಿದ್ದಾರೆ.

ಜಾತಿವಾರು ಜನಗಣತಿಯನ್ನು ೧೯೪೧ರವರೆಗೆ ನಡೆಸಲಾಗುತ್ತಿದ್ದುದ್ದರಿಂದ ಆವರೆಗಿನ ಜಾತಿವಾರು ಜನಸಂಖ್ಯಾ ವಿವರ ಲಭಿಸುತ್ತದೆ. ಆದರೆ ಅಲ್ಲಿಂದೀಚೆಗೆ ಜಾತಿವಾರು ಜನಸಂಖ್ಯಾ ವಿವರ ಲಭಿಸುವುದಿಲ್ಲ. ಆದರೂ ೧೯೭೨, ೧೯೮೪ ಹಾಗೂ ೧೯೯೨ರಲ್ಲಿ ರಚಿತಗೊಂಡಿದ್ದ ಹಿಂದುಳಿದ ವರ್ಗಗಳ ಆಯೋಗಗಳು ಸಮೀಕ್ಷೆ ನಡೆಸಿ ಜಾತಿವಾರು ಜನಸಂಖ್ಯಾ ವಿವರವನ್ನು ಒದಗಿಸಿವೆ. ತಾಲೂಕಿನಲ್ಲಿ ವಾಸಿಸುತ್ತಿರುವ ವಿವಿಧ ಜಾತಿ ಹಾಗೂ ಬುಡಕಟ್ಟುಗಳಿಗೆ ಸೇರಿದ ಜನರ ರೀತಿ, ನೀತಿ, ಜೀವನಕ್ರಮ, ಸಂಪ್ರದಾಯ ಹಾಗೂ ಆಯಾ ಜಾತಿಗಳವರು ಅನುಸರಿಸುವ ವಿವಿಧ ಸಂಸ್ಕಾರಗಳ ಬಗ್ಗೆ ಮಾಹಿತಿಯನ್ನಿಲ್ಲಿ ನೀಡಲಾಗಿದೆ.

**ಅಗಸ** : ಮಡಿವಾಳ, ಧೋಬಿ, ಎಂದೆಲ್ಲಾ ಕರೆಯಲ್ಪಡುವ ಇವರು ಸಮಾಜದ ವಿವಿಧ ವರ್ಗದವರಿಗೆ ಬಟ್ಟೆ ಒಗೆದು ಮಡಿ ಮಾಡಿಕೊಡುವ ಸಾಂಪ್ರದಾಯಕ ವೃತ್ತಿಯವರು. ಊರಹಬ್ಬ, ಗ್ರಾಮದೇವತೆಯ ಜಾತ್ರೆ ಸಂದರ್ಭದಲ್ಲಿ ನಡೆಮುಡಿ ಸೇವೆ ಹಾಗೂ ಪಂಜು ಸೇವೆಗಳನ್ನೂ ಮಾಡುತ್ತಾರೆ. ಇವರಲ್ಲಿ ಬೆಳ್ಳಿಕುಲ, ನಾಗರಕುಲ, ಸಿದ್ಧೇಶ್ವರಕುಲ ಹಬ್ಬೆಕುಲ ಮುಂತಾದ ಒಳಪಂಗಡಗಳಿದ್ದು, ಹೆಚ್ಚಿನವರು ಕನ್ನಡ ಮಾತನಾಡುತ್ತಾರೆ. ಮಾಂಸಾಹಾರಿಗಳಾದ ಇವರಲ್ಲಿ ವಧುದೆರೆ (ತೆರ) ರೂಢಿಯಲ್ಲಿದ್ದು, ಜಂಗಮರು ಇವರ ಜನಾಂಗದ ವಿವಾಹಗಳನ್ನು ನಡೆಸಿಕೊಡುತ್ತಾರೆ. ಹನುಮಂತ, ಹಿರಿಯಮ್ಮ ಹಾಗೂ ಹುಣಸಮ್ಮನನ್ನು ಆರಾಧಿಸುವ ಇವರು ಗೌರಿ ಹಬ್ಬದ ಸಂದರ್ಭದಲ್ಲಿ ಭೂಮಿದೇವರ ಹೆಸರಲ್ಲಿ ತಮ್ಮ ವೃತ್ತಿಗೆ ಸಂಬಂಧಿಸಿದ ಸಲಕರಣೆಗಳನ್ನು ಪೂಜಿಸುತ್ತಾರೆ. ಶರಣ ಮಡಿವಾಳ ಮಾಚಿದೇವ ಹಾಗೂ ಮಲ್ಲಿಗೆ ಮಾದೇವಿಯರನ್ನು ಪೂಜ್ಯಭಾವದಿಂದ ಸ್ಮರಿಸುವ ಇವರಲ್ಲಿ ಸತ್ತವರನ್ನು ಹೂಳುವ ಸಂಪ್ರದಾಯವಿದ್ದು, ಪೂರ್ವಿಕರಿಗೆ ಮಹಾಲಯ

ಅಮಾವಾಸ್ಯೆ ಸಂದರ್ಭದಲ್ಲಿ ಎಡೆ ಇಟ್ಟು ಪೂಜಿಸಲಾಗುತ್ತದೆ. ಇವರು ತಮ್ಮೊಳಗಿನ ವ್ಯಾಜ್ಯವನ್ನು ಜಾತಿ ಮುಖಂಡರ ಮುಂದಾಳತ್ವದಲ್ಲೇ ಬಗೆಹರಿಸಿಕೊಳ್ಳುತ್ತಿದ್ದರು. ಆದರೆ ಇಂದು ಇವರೂ ಸಾಮಾಜಿಕ ಪರಿವರ್ತನೆಗೆ ಒಳಗಾಗುವ ಮೂಲಕ ಸಾಕಷ್ಟು ಪರಿವರ್ತಿತರಾಗಿ ಕುಲಕಸುಬಿನ ಜೊತೆಗೆ ಇತರೇ ವೃತ್ತಿಗಳನ್ನೂ ಅವಲಂಭಿಸಿದ್ದಾರೆ.

**ಅರಸು :** ಜಿಲ್ಲೆಯ ವಿವಿಧ ಭಾಗಗಳೂ ಸೇರಿದಂತೆ ಈ ತಾಲೂಕಿನಲ್ಲೂ ಸಾಕಷ್ಟು ಸಂಖ್ಯೆಯಲ್ಲಿರುವ ಅರಸು ಜಾತಿಯವರು ಕ್ಷತ್ರಿಯ ಕುಲದ ರಾಜಪಿಂಡೆ ಶಾಖೆಗೆ ಸೇರಿದವರಾಗಿದ್ದು, ಮೈಸೂರು ಒಡೆಯರ್ ರಾಜಮನೆತನವೂ ಇದೇ ಮೂಲದ್ದಾಗಿದೆ. ಆತ್ರೇಯ, ವಶಿಷ್ಠ, ವಿಶ್ವಾಮಿತ್ರ ಮುಂತಾದ ಗೋತ್ರಗಳನ್ನುಳ್ಳ ಇವರು ತಮ್ಮನ್ನು ಬ್ರಹ್ಮಕ್ಷತ್ರಿಯರೆಂದು ಗುರುತಿಸಿಕೊಳ್ಳುತ್ತಿದ್ದು, ಕನ್ನಡ ಇವರ ಮಾತೃಭಾಷೆ. ಬಾಲ್ಯದಲ್ಲೇ ಉಪನಯನಾನಂತರ ಜನಿವಾರ ಧರಿಸುವ ಇವರಲ್ಲಿ ಶೈವ, ವೈಷ್ಣವ, ಜೈನ ಧರ್ಮೀಯರಿದ್ದರೂ ವಿವಾಹ ಸಂಬಂಧದಲ್ಲಿ ಇದು ಅಡ್ಡಿಯಾಗುವುದಿಲ್ಲ. ಆದರೂ ವಿವಾಹದಲ್ಲಿ ಸಾಮಾನ್ಯವಾಗಿ ವೈದಿಕ ವಿಧಾನವನ್ನೇ ಇವರು ಅನುಸರಿಸುತ್ತಾರೆ. ಉಪನಯನದ ಸಮಯದಲ್ಲಿ ಬಿಲ್ಲಿನ ತುದಿಗೆ ಮೌರ್ವಿ (ರೇಷ್ಮೆಯ ವಸ್ತ್ರ)ಯನ್ನು ಬಿಗಿದು ಮಾಡುವ ಅಂಬಿನಕಡ್ಡಿ (ಬಾಣ) ಆಚರಣೆಯು ವಿಶಿಷ್ಟವಾಗಿರುತ್ತದೆ. ಬ್ರಾಹ್ಮಣರ ಪೌರೋಹಿತ್ಯದಲ್ಲಿ ನಡೆಯುವ ಮದುವೆಯಲ್ಲಿ ವರನು ಮದುವೆ ಮುಗಿಯುವವರೆಗೂ ಖಡ್ಗ ಇಲ್ಲವೇ ಚಾಕುವನ್ನು ಜೊತೆಯಲ್ಲಿಟ್ಟುಕೊಂಡಿರುವ ಸಂಪ್ರದಾಯವಿದೆ. ವಿಧವೆಯರಿಗೆ ಮರುವಿವಾಹಕ್ಕೆ ಆಸ್ಪದವಿರುವುದಿಲ್ಲ. ಹಬ್ಬ-ಹರಿದಿನಗಳನ್ನು ಧಾರ್ಮಿಕ ಶ್ರದ್ಧೆಯಿಂದ ಆಚರಿಸುವ ಇವರಿಗೆ ದಸರೆ ದೊಡ್ಡ ಹಬ್ಬವಾಗಿದ್ದು, ಆ ಸಂದರ್ಭದಲ್ಲಿ ಕಾಳಿ, ಲಕ್ಷ್ಮಿ ಹಾಗೂ ಸರಸ್ವತಿಯರನ್ನು ವಿಧಿಬದ್ಧವಾಗಿ ಪೂಜಿಸುತ್ತಾರೆ. ಮಾವತ್ತೂರು ಮಾಸ್ತಮ್ಮ ಹಾಗೂ ಮೂಗೂರು ತಿಬ್ಬಾದೇವಿಯರ ಜಾತ್ರೆಗಳಿಗೆ ವಿಶೇಷ ಮಹತ್ವ ನೀಡುವ ಇವರು ಮಂಟೇಸ್ವಾಮಿ ಶಿಷ್ಯರಾದ ರಾಚಪ್ಪಾಜಿ, ಸಿದ್ದಪ್ಪಾಜಿ ಗದ್ದುಗೆಗಳಿಗೂ ನಡೆದುಕೊಳ್ಳುತ್ತಿದ್ದು, ಬೊಪ್ಪಗೌಡನಪುರದಲ್ಲಿರುವ ಮಂಟೇಸ್ವಾಮಿ ಮಠವು ಅರಸು ಜನಾಂಗದವರ ಸುಬರ್ದಿನಲ್ಲಿದೆ. ಇವರಲ್ಲಿ ಸತ್ತವರನ್ನು ಚಿತೆಗೆ ಅರ್ಪಿಸುವ ಸಂಪ್ರದಾಯವಿದ್ದು, ಹತ್ತು ದಿನಗಳ ಸೂತಕದ ನಂತರ ೧೨ನೇ ದಿನ ಶ್ರಾದ್ಧವನ್ನು ಆಚರಿಸಲಾಗುತ್ತದೆ.

**ಈಡಿಗ :** ಹಳೇಪೈಕಾ ಎಂದೂ ಕರೆಯಲ್ಪಡುವ ಇವರು ಸೇಂದಿ ಇಳಿಸುವ ಕಾಯಕದವರಾಗಿದ್ದು, ಇವರಲ್ಲಿ ಮಡಿ (ಸಾಚಾ) ಈಡಿಗ, ಬೆಲ್ಲದ ಈಡಿಗ, ಏಣಿ ಈಡಿಗ, ದಂಡು ಈಡಿಗ ಮುಂತಾದ ಪಂಗಡಗಳಿದ್ದು, ನಾಲ್ಕು ಗೋತ್ರಗಳಲ್ಲಿ ಕಾರಣ್ಯ ಮತ್ತು ವಾತ್ಸಲ್ಯ ಗೋತ್ರದವರನ್ನು ಸಾಸಿವೆಯವರೆಂದೂ ಕೌಂಡಿಣ್ಯ ಹಾಗೂ ಕಮಂಡಲ ಗೋತ್ರದವರನ್ನು ಬೊಡ್ಡೆಯವರೆಂದೂ ಕರೆಯಲಾಗುತ್ತದೆ. ಸಾಸಿವೆಯವರು ವಿಷ್ಣು ಆರಾಧಕರಾದರೆ, ಬೊಡ್ಡೆಯವರು ಶಿವಾರಾಧಕರು. ಇವರಲ್ಲಿ ವಧುದೆರೆ (ತೆರ)ಯಾಗಿ ೧೮ ರೂ.ಗಳನ್ನು ಪಾವತಿಸುವುದು ರೂಢಿಯಲ್ಲಿತ್ತು. ಇವರು ಕಾಟಮೇಶ್ವರ, ಎಲ್ಲಮ್ಮ ಮಾತಂಗಿ ಹಾಗೂ ಸುರಭಂಡೇಶ್ವರಿ ಮುಂತಾದ ದೇವರುಗಳನ್ನು ವಿಶೇಷವಾಗಿ

ಪೂಜಿಸುತ್ತಾರೆ. ಇವರಲ್ಲಿ ಸತ್ತವರನ್ನು ತಲೆಯು ದಕ್ಷಿಣಕ್ಕಿರುವಂತೆ ಮಲಗಿಸಿ, ಹೂಳುವ ಸಂಪ್ರದಾಯವಿದ್ದು, ೧೦ ದಿನಗಳ ಸೂತಕವನ್ನು ಆಚರಿಸಲಾಗುತ್ತದೆ.

**ಉಪ್ಪಾರ :** ಉಪ್ಪಲಿಗ ಎಂದೂ ಕರೆಯಲ್ಪಡುವ ಇವರು ತಾಲೂಕಿನಲ್ಲಿ ಸಾಕಷ್ಟು ಸಂಖ್ಯೆಯಲ್ಲಿದ್ದು, ಇವರನ್ನು ಮೇಲು ಸಕ್ಕರೆಯವರು, ಸಗರ, ಭಗೀರಥ ವಂಶಜ, ಕರೆಬಂಡಿಯವರು ಎಂದೂ ಕರೆಯುವುದುಂಟು. ಕನ್ನಡ ಮಾತನಾಡುವ ಇವರ ಹೆಸರು, ಶೆಟ್ರು ಹಾಗೂ ಗೌಡ ಎಂದು ಅಂತ್ಯಗೊಳ್ಳುತ್ತದೆ. ಹಿಂದೆ ಉಪ್ಪು ತಯಾರಿಕೆ ಇವರ ಕುಲಕಸುಬಾಗಿದ್ದು, ನಂತರದಲ್ಲಿ ಇಟ್ಟಿಗೆ, ಸುಣ್ಣದ ತಯಾರಿಕೆ, ಕೃಷಿ ಮುಂತಾದ ವೃತ್ತಿಗಳಿಗೆ ತೊಡಗಿಸಿಕೊಂಡಿದ್ದಾರೆ. ಇವರಲ್ಲಿ ಗಾರೆಉಪ್ಪಾರ, ಸಾದಉಪ್ಪಾರ, ಸುಣ್ಣಉಪ್ಪಾರ ಮುಂತಾದ ಪಂಗಡಗಳಿವೆ. ಅಲ್ಲದೇ ಕಲ್ಲುಕುಟ್ಟಿಗ/ಜನಿವಾರ ಉಪ್ಪಾರ ಎಂಬ ಪಂಗಡವೂ ಇದ್ದು, ಅವರು ಜನಿವಾರ ಧರಿಸುತ್ತಾರೆ. ಅಗಿಲ, ಆಲೆ, ಆನೆ, ಅರಸು, ಕೆಂಡ ಮುಂತಾದ ಬೆಡಗುಗಳು ಇವರಲ್ಲಿದ್ದು, ನೇರಿಲಫಾರಿನವರು ಗೋಪಾಲದೇವರೊಕ್ಕಲು, ಮಾರಿವೊಕ್ಕಲು, ಸಿದ್ದಪ್ಪಾಜಿಒಕ್ಕಲು, ಮಾದೇಶ್ವರನೊಕ್ಕಲು, ಮುಂತಾದ ಗುಂಪುಗಳೂ ಇವೆ. ಇವರಲ್ಲಿ ಧರ್ಮಾಚರಣೆಗಳನ್ನು ಜಾತಿಯ ದೇವರಗುಡ್ಡರೇ ನೆರವೇರಿಸಿದರೂ, ವಿವಾಹ ಸಂದರ್ಭದಲ್ಲಿ ಬ್ರಾಹ್ಮಣರನ್ನು ಪೌರೋಹಿತ್ಯಕ್ಕೆಂದು ಕರೆಸಲಾಗುತ್ತದೆ. ತೆರನೀಡುವ ಪದ್ಧತಿ ಇವರಲ್ಲಿದ್ದು, ಚನ್ನಕೇಶವ, ನಂಜುಂಡೇಶ್ವರ, ಹುರಕಟ್ಟೇಶ್ವರ, ವೆಂಕಟರಮಣ, ಅಂಕಮ್ಮ, ಸಿದ್ದಪ್ಪಾಜಿ, ಬಿಳಿಗಿರಿರಂಗ, ಮಹದೇಶ್ವರ ಮುಂತಾದ ದೇವರುಗಳನ್ನು ಆರಾಧಿಸುತ್ತಾರೆ. ಜಾತಿವ್ಯಾಜ್ಯ, ತೀರ್ಮಾನಿಸಲು ಕಟ್ಟೇಮಠ ಇದ್ದು, ಶೆಟ್ಟಿ ಅಥವಾ ಯಜಮಾನ ಅದರ ಮುಖ್ಯಸ್ಥನಾಗಿರುತ್ತಾನೆ. ಇವರಲ್ಲಿ ಸತ್ತವರನ್ನು ಹೂಳುವ ಪದ್ಧತಿಯಿದ್ದು, ಮಹದೇಶ್ವರ ಹಾಗೂ ಸಿದ್ಧಪ್ಪಾಜಿಯ ಹೆಸರಲ್ಲಿ ಬಾಲಕರನ್ನು ದೇವರಗುಡ್ಡರಾಗಿ ಬಿಡುವ ಸಂಪ್ರದಾಯವಿದೆ.

**ಒಕ್ಕಲಿಗ :** ಗೌಡರು ಎಂದೂ ಕರೆಯಲ್ಪಡುವ ಇವರು ಮೂಲತಃ ಕೃಷಿಕರು. ಇವರಲ್ಲಿ ಗಂಗಡಿಕಾರ, ಮೊರಸು, ನಾಮಧಾರಿ, ಕುಂಚಿಟಿಗ, ರೆಡ್ಡಿ ಮುಂತಾದ ಪ್ರಭೇಧಗಳಿದ್ದರೂ, ತಾಲೂಕಿನಲ್ಲಿ ವಿಶೇಷವಾಗಿ ಗಂಗಡಿಕಾರ ಒಕ್ಕಲಿಗರು ಕಂಡುಬರುತ್ತಾರೆ. ಅಲ್ಲಲ್ಲಿ ತಮಿಳುನಾಡು ಮೂಲದ ವೆಲ್ಲಾಳಗೌಂಡರೂ ಕಾಣಸಿಗುತ್ತಾರೆ. ಗಂಗಡಿಕಾರ ಒಕ್ಕಲಿಗರ ಮಾತೃಭಾಷೆ ಕನ್ನಡವಾಗಿದ್ದು, ಇವರಲ್ಲಿ ಪೆಟ್ಟಿಗೆಯವರು ಹಾಗೂ ಬುಜ್ಜಣಿಗೆಯವರು ಎಂಬ ಎರಡು ಉಪಪಂಗಡಗಳಿದ್ದು, ವಿವಾಹ ಸಂದರ್ಭದಲ್ಲಿ ಇವರು ಕ್ರಮವಾಗಿ ಬಿದಿರಿನ ಪೆಟ್ಟಿಗೆ ಹಾಗೂ ಬಿದಿರಿನ ಬುಟ್ಟಿಯನ್ನು ಉಪಯೋಗಿಸುವುದರಿಂದ, ಆ ಹೆಸರುಗಳು ಬಂದಿವೆ. ಪೆಟ್ಟಿಗೆಯವರನ್ನು ವೀಳ್ಯದ ಗುಂಪೆಂದೂ, ಬುಜ್ಜಣಿಗೆಯವರನ್ನು ಧಾರೆಗುಂಪೆಂದೂ ಕರೆಯಲಾಗುತ್ತಿತ್ತು. ಬ್ರಾಹ್ಮಣರ ಪೌರೋಹಿತ್ಯದಲ್ಲಿ ಗಂಡಿನ ಮನೆ ಮುಂದೆ ಇವರ ವಿವಾಹ ಜರುಗುತಿದ್ದು, ಸಾಮಾನ್ಯವಾಗಿ ಸತ್ತವರನ್ನು ಹೂಳಲಾಗುತ್ತಾದರೂ, ಸುಡುವುದೂ ಉಂಟು. ಧಾರ್ಮಿಕ ಆಚರಣೆಯ ಹಿನ್ನೆಲೆಯಲ್ಲಿ ಮುಳ್ಳುಜನ (ಶೈವ ಭಕ್ತರು) ಹಾಗೂ ದಾಸಜನ (ವಿಷ್ಣುಜನ), ನಾಮಧಾರಿ ಒಕ್ಕಲಿಗರೂ ಕಂಡುಬರುತ್ತಾರೆ. ಚೇಳೂರು ಒಕ್ಕಲಿಗರೆಂಬ ಇನ್ನೊಂದು ಪ್ರಬೇಧವೂ ಇದ್ದು ಅವರು ಸಂಪೂರ್ಣ ಸಸ್ಯಹಾರಿಗಳಾಗಿದ್ದಾರೆ.

**ಕುರುಬ :** ಈ ತಾಲೂಕೂ ಸೇರಿದಂತೆ ಜಿಲ್ಲೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಕಂಡು ಬರುವ ಇವರನ್ನು ಕುರುಬರು, ಹಾಲುಮತಸ್ಥರು ಮುಂತಾಗಿ ಕರೆಯಲಾಗುತ್ತದೆ. ಕುರಿಸಾಕಣೆಯನ್ನು ಕುಲಕಸುಬನ್ನಾಗಿಸಿಕೊಂಡಿದ್ದ ಇವರಿಗೆ ಅದು ಇಂದು ಉಪಕಸುಬಾಗಿದೆ. ಕುರುಬರೇ ಅಧಿಕ ಸಂಖ್ಯೆಯಲ್ಲಿರುವ ಗ್ರಾಮಗಳು ತಾಲೂಕಿನಲ್ಲಿವೆ. ಇವರಲ್ಲಿ ಹಾಲು–ಹಂಡೆ–ಕಂಬಳಿ–ಹಳೇ–ಸಾದ–ಕುಂಚಿ–ಮುಳ್ಳು ಕುರುಬ ಮುಂತಾದ ಒಳಪಂಗಡಗಳಿದ್ದು, ಅವರು ಕುಲದೇವರಿಗೆ ನಡೆದುಕೊಳ್ಳುವ ಪೂಜಾದಿನವನ್ನು ಆಧರಿಸಿದ ಅದಿತ್ಯವಾರದವರು, ಬೇಸ್ತವಾರದವರು ಹಾಗೂ ಸೋಮವಾರದವರು ಎಂದೂ, ಕಂಕಣವನ್ನಾಧರಿಸಿ ಹತ್ತಿಕಂಕಣದವರು, ಉಣ್ಣೆಕಂಕಣದವರು, ಎಂದೂ ವರ್ಗೀಕರಿಸುವುದುಂಟು. ಕುರುಬರಲ್ಲಿ ದೊಡ್ಡವ್ವನ ಮಕ್ಕಳು ಹಾಗೂ ಚಿಕ್ಕವ್ವನ ಮಕ್ಕಳು ಎಂಬ ಎರಡು ಸಾಲುಗಳಿದ್ದು, ಅಸಂಖ್ಯಾತ ಬೆಡಗುಗಳಿವೆ. 'ವಿವಾಹ' ಸಂದರ್ಭದಲ್ಲಿ ವಧುವಿಗೆ ೩೨ ರೂಪಾಯಿಗಳ ತೆರ ನೀಡುವ ಸಂಪ್ರದಾಯ ಇವರಲ್ಲಿತ್ತು. ಅವರ ಜಾತಿಯವರೇ ಆದ ಒಡೆಯರು ಧಾರ್ಮಿಕ ಆಚರಣೆಗಳಲ್ಲಿ ಪೌರೋಹಿತ್ಯ ವಹಿಸುತ್ತಾರೆ. ತಮ್ಮೊಳಗಿನ ವ್ಯಾಜ್ಯವನ್ನು ಇವರು ಯಜಮಾನನ (ಬುದ್ಧಿವಂತ) ಮೂಲಕ ಬಗೆಹರಿಸಿಕೊಳ್ಳುತ್ತಾರೆ. ಎಲ್ಲಾ ಹಿಂದೂ ದೇವಾನುದೇವತೆಗಳನ್ನು ಪೂಜಿಸುವ ಇವರು ಮೈಲಾರ, ಬ್ಯಾಟರಾಯ, ಬೀರದೇವರು, ಎಲ್ಲಮ್ಮ ಹಾಗೂ ಲಕ್ಷ್ಮೀದೇವಿಯರನ್ನು ವಿಶೇಷವಾಗಿ ಪೂಜಿಸುತ್ತಾರೆ. ತಮ್ಮ ದೇವರುಗಳಿಗೆಂದು ನಿಗಧಿತ ಸಮಯದಲ್ಲಿ ಜಾತ್ರೆ/ ಪರಿಷೆಗಳನ್ನು ಸಂಘಟಿಸುತ್ತಾರೆ. ಆ ಸಂದರ್ಭದಲ್ಲಿ ಕವಡೆಗಳಿಂದ ಕೂಡಿದ ಕರಿಯ ಕಂಬಳಿ ಹೊದ್ದು, ತಲೆಗೆ ಕರಡಿ ಚರ್ಮದ ಟೊಪ್ಪಿಗೆ ಧರಿಸಿದ, ಮೈಲಾರ ಒಕ್ಕಲಿಗೆ ಸೇರಿದ ಗೊರವರು ಕೈಯಲ್ಲಿರುವ ವಾದ್ಯ ನುಡಿಸುತ್ತಾ ಒಗ್ಗಡಿಸುತ್ತಾ ಕುಣಿದು, ಭಕ್ತಾದಿಗಳಿಂದ ಕಾಣಿಕೆ ಪಡೆಯುತ್ತಾರೆ. ನೆರೆಯ ಹೆಮ್ಮರಗಾಲದಲ್ಲಿ (ನಂಜನಗೂಡು ತಾ.) ಜರುಗುವ ಬೀರದೇವರ ಜಾತ್ರೆ ಈ ಜನಾಂಗದ ಪ್ರಮುಖ ಜಾತ್ರೆಯಾಗಿದ್ದು, ಇಲ್ಲಿಯ ಕುರುಬರೂ ಹೋಗುತ್ತಾರೆ. ಇವರಲ್ಲಿ ದೇವರಗುಡ್ಡರನ್ನು ಬಿಡುವ ಸಂಪ್ರದಾಯವಿದ್ದು, ಸತ್ತವರನ್ನು ದಕ್ಷಿಣದೆಡೆ ತಲೆ ಇಟ್ಟು ಹೂಳುವ ಸಂಪ್ರದಾಯವಿದೆ. ಆದರೆ ಕುರುಬ ಒಡೆಯನನ್ನು ಲಿಂಗಾಯಿತ ಪದ್ಧತಿಯಂತೆ ಶವಸಂಸ್ಕಾರ ಮಾಡಲಾಗುತ್ತದೆ. ಬೀರದೇವರ ಸಮ್ಮುಖದಲ್ಲಿ ಇವರು ಮಾಡುವ ಡೊಳ್ಳಿನ ಕುಣಿತ, ನಾಡಿನ ಪ್ರಧಾನ ಜಾನಪದ ಕಲೆಗಳಲ್ಲೊಂದಾಗಿದೆ.

**ಕುಂಬಾರ :** ಗ್ರಾಮೀಣ ಸಮುದಾಯದಲ್ಲಿ ಪ್ರಮುಖ ಜನಾಂಗವಾಗಿದ್ದ ಇವರು ಮಡಕೆ–ಕುಡಿಕೆ ಹೆಂಚು ಮುಂತಾದ ಮಣ್ಣಿನ ಸಾಮಗ್ರಿಗಳನ್ನು ಮಾಡುವ ಕಾಯಕದವರಾಗಿದ್ದು, ತಾಲೂಕಿನಲ್ಲೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಆದರೆ, ಸ್ಟೀಲ್, ಅಲ್ಯೂಮೀನಿಯಂ ಹಾಗೂ ಇಂಡ್ಯಾಲಿಯಂ ಪಾತ್ರೆಗಳ ಆಗಮನದಿಂದಾಗಿ ಕುಂಬಾರಿಕೆ ವೃತ್ತಿಯಿಂದು ಕ್ಷೀಣಿಸಿದೆ. ಗುಂಡಯ್ಯ ಅಥವಾ ಗುಂಡಬ್ರಹ್ಮಯ್ಯನನ್ನು ಇವರು ತಮ್ಮ ಮೂಲಪುರುಷನೆಂದು ಭಾವಿಸಿದ್ದು, ಅವರಲ್ಲಿ ಗುಂಡಬ್ರಹ್ಮ ಹಾಗೂ ಶಾಲಿವಾಹನ ಎಂಬ ಎರಡು ವರ್ಗಗಳಿವೆ. ಕನ್ನಡ ಮಾತನಾಡುವ ಇವರಲ್ಲಿ ಕಸ್ತೂರಿ, ನಾಗರ, ಸಂಪಿಗೆ, ಮುಂತಾದ ಬೆಡಗುಗಳಿದ್ದು,

ವಧುವಿಗೆ ತೆರ ನೀಡುವ ಸಂಪ್ರದಾಯವಿದೆ. ಹುಟ್ಟು–ಸಾವಿನ ಸಂದರ್ಭದಲ್ಲಿ ಹತ್ತು ದಿನಗಳ ಸೂತಕವನ್ನು ಆಚರಿಸಲಾಗುತ್ತದೆ. ಇವರಲ್ಲಿ ಶಿವ ಹಾಗೂ ವಿಷ್ಣು ಆರಾಧಕರಿದ್ದು, ಕುಂಬೇಶ್ವರ (ಕಳಸ) ಕುಲದೈವವಾಗಿದ್ದು, ಸತ್ತವರನ್ನು ಮಲಗಿಸಿದ ಭಂಗಿಯಲ್ಲಿ ಹೂಳುವ ಸಂಪ್ರದಾಯವಿದ್ದು, ಪ್ರತಿ ವರ್ಷ ಮಹಾಲಯ ಅಮಾವಾಸ್ಯೆಯಂದು ಪೂರ್ವಿಕರಿಗೆ ಎಡೆ ಇಡುವ ಸಂಪ್ರದಾಯವಿದೆ. ಗೌರಿ–ಗಣೇಶ ಹಬ್ಬದ ಸಂದರ್ಭದಲ್ಲಿ ಗೌರಿ–ಗಣೇಶ ಮೂರ್ತಿಗಳನ್ನು ಸಿದ್ಧಪಡಿಸಿ ಮಾರುವುದರಿಂದ ಇವರಿಗೆ ಹೆಚ್ಚಿನ ಆದಾಯ ಇತ್ತೀಚಿನವರೆಗೆ ಲಭಿಸುತ್ತಿತ್ತು. ತಮ್ಮೊಳಗಿನ ವ್ಯಾಜ್ಯಗಳನ್ನು ಕುಲದ ಯಜಮಾನನ ಸಮ್ಮುಖದಲ್ಲಿ ಬಗೆಹರಿಸಿಕೊಳ್ಳುವ ಸಂಪ್ರದಾಯವಿಂದು ಕಡಿಮೆಯಾಗಿದೆ.

**ಕ್ಷೌರಿಕ :** ನಾಪಿತ, ಕೆಲಸಿ, ಹಜಾಮ, ನಾಯಿಂದ, ನಯನ ಕ್ಷತ್ರಿಯ ಎಂದೂ ಕರೆಯಲ್ಪಡುವ ಇವರು ಕ್ಷೌರಿಕ ಕಾಯಕದವರಾಗಿದ್ದು, ಜೊತೆಗೆ ಡೋಲು, ಭಜಂತ್ರಿ, ನಾಗಸ್ವರ, ಮುಂತಾದ ವಾದ್ಯಗಳನ್ನು ಧಾರ್ಮಿಕ ಉತ್ಸವ, ವಿವಾಹ ಸಂದರ್ಭಗಳಲ್ಲಿ ನುಡಿಸುತ್ತಿದ್ದು, ಕನ್ನಡ–ತೆಲುಗು ಮಾತನಾಡುವವರೂ ಇವರಲ್ಲಿದ್ದಾರೆ. ತೆಲುಗು ಮಾತನಾಡುವವರಲ್ಲಿ ನಾಡಿಗರು, ರೆಡ್ಡಿ, ಭೂಮಿ, ಗುಂಡ್ಲ–ಜಾಟ ಹಾಗೂ ಕೂಡಿಪಾಟಿಯಾ ಎಂಬ ಉಪಪಂಗಡಗಳಿವೆ. ಇವರಲ್ಲಿ ಚಿಟ್ಲು, ಗುರ್‍ರಂ, ಜಾಂಬ, ಕಣಗಿಲ ಮುಂತಾದ ಬೆಡಗುಗಳಿವೆ. ಅದೇ ಕನ್ನಡ ಮಾತನಾಡುವವರಲ್ಲಿ ಮರಸು, ಉಪ್ಪಿನ ಹಾಗೂ ಶೀಲವಂತ ಎಂಬ ಉಪಪಂಗಡಗಳಿದ್ದು, ಐದೈದು ಗೋತ್ರದ ಐದು ಗುಂಪುಗಳಿವೆ. ಸಗೋತ್ರ ವಿವಾಹಕ್ಕೆ ಆಸ್ಪದವಿಲ್ಲ. ವಧುವಿಗೆ ತೆರ ನೀಡುವ ಪದ್ಧತಿ ಇದ್ದು, ಶಿವ–ವಿಷ್ಣು ಉಪಾಸಕರಾದ ಇವರ ಧರ್ಮಾಚರಣೆಗಳಲ್ಲಿ ಬ್ರಾಹ್ಮಣರು ಪೌರೋಹಿತ್ಯ ವಹಿಸುತ್ತಾರೆ. ತಮ್ಮೊಳಗಿನ ವ್ಯಾಜ್ಯಗಳನ್ನು ಪರಿಹರಿಸಿಕೊಳ್ಳಲು ಅವರದೇ ಆದ ಕಟ್ಟೆಮನೆ ಇರುತ್ತದೆ. ನಮ್ಮಾಳ್ವರು ಇವರ ಮೂಲಗುರುಗಳಾಗಿದ್ದು, ಮೇಲುಕೋಟೆ, ತಿರುಪತಿ ಹಾಗೂ ಶ್ರೀರಂಗಮ್‌ನ ಗುರುಗಳಿಗೆ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಇವರಲ್ಲಿ ಸತ್ತವರನ್ನು ಸಾಮಾನ್ಯವಾಗಿ ಹೂಳಲಾಗುತ್ತಿದ್ದು, ಹನ್ನೊಂದು ದಿನಗಳ ಸೂತಕ, ಶ್ರಾದ್ಧ ಆಚರಿಸುವುದರ ಜೊತೆಗೆ ಮಹಾಲಯ ಅಮಾವಾಸ್ಯೆ ಸಂದರ್ಭದಲ್ಲಿ ಪೂರ್ವಿಕರಿಗೆ ಎಡೆ ಇಡುವ ಸಂಪ್ರದಾಯವಿದೆ.

**ಗಾಣಿಗ :** ಗಾಣದಿಂದ ಎಣ್ಣೆಯನ್ನು ಉತ್ಪಾದಿಸುವುದು ಇವರ ಸಾಂಪ್ರದಾಯಕ ವೃತ್ತಿಯಾದರೂ ಬೇಸಾಯವನ್ನೂ ಮಾಡುತ್ತಿದ್ದು, ತಾಲೂಕಿನಲ್ಲಿ ವಿರಳವಾಗಿ ನೆಲೆಸಿದ್ದಾರೆ. ಇವರಲ್ಲಿ ಜ್ಯೋತಿನಗರ, ಸಜ್ಜನ ಹಾಗೂ ಜ್ಯೋತಿಪಾದ ಎಂಬ ಮೂರು ಪ್ರಮುಖ ವರ್ಗಗಳಿದ್ದು, ಗಾಣಕ್ಕೆ ಜೋಡೆತ್ತು ಬಳಸುವವರನ್ನು ಹೆಗ್ಗಾಣಿಗರೆಂದೂ, ಒಂಟಿಎತ್ತು ಬಳಸುವವರನ್ನು ಕಿರುಗಾಣಿಗರೆಂದೂ ಕರೆಯಲಾಗುತ್ತಿತ್ತು. ಆದರೆ ಎಣ್ಣೆಮಿಲ್‌ಗಳಿಂದಾಗಿ ಇಂದು ಗಾಣಗಳು ಕಣ್ಮರೆಯಾಗಿವೆ. ಗಾಣಿಗಸೆಟ್ಟರೆಂದೂ ಕರೆಯಲ್ಪಡುವ ಇವರಲ್ಲಿ ಲಿಂಗಧಾರಿ ಸಜ್ಜನರು ಸಸ್ಯಹಾರಿಗಳು. ಉಳಿದವರು ವಿಷ್ಣುಭಕ್ತರಾಗಿದ್ದು, ವಿಶೇಷ ಸಂದರ್ಭಗಳಲ್ಲಿ ದಾಸಯ್ಯನನ್ನು ಮನೆಗೆ ಆಹ್ವಾನಿಸುವುದುಂಟು. ಇವರಲ್ಲಿ ಸತ್ತವರನ್ನು ಸಾಮಾನ್ಯವಾಗಿ ಹೂಳಲಾಗುತ್ತದೆ.

**ತಮ್ಮಡಿ :** ಶಿವಾರಾಧಕರಾದ ಇವರು ವಿರಳವಾಗಿ ತಾಲೂಕಿನ ಕೆಲವೆಡೆಯಲ್ಲಿ ವಾಸಿಸುತ್ತಿದ್ದು, ಗುಡಿಯ ಶಿವಾರ್ಚನೆ ಹಾಗೂ ಹೂಒದಗಿಸುವ ಕಾಯಕದವರಾಗಿದ್ದಾರೆ. ಕನ್ನಡ ಮಾತನಾಡುವ ಇವರಲ್ಲಿ ಕಾಶ್ಯಪ, ಕೌಶಿಕ, ಅಗಸ್ತ್ಯ ಮುಂತಾದ ಗೋತ್ರಗಳಿದ್ದು, ಬಾಲಕರಿಗೆ ಲಿಂಗದೀಕ್ಷೆ ನೀಡಿ ಜನಿವಾರ–ಶಿವಲಿಂಗಗಳನ್ನು ಧರಿಸಲಾಗುತ್ತದೆ. ಅದರಿಂದಾಗಿ ಇವರನ್ನು ಶಿವದ್ವಿಜರೆಂದೂ ಕರೆಯಲಾಗುತ್ತದೆ. ಹಿಂದೂ ಹಬ್ಬ ಹರಿದಿನಗಳನ್ನೆಲ್ಲ ಆಚರಿಸುವ ಇವರಿಗೆ ಅವರದೇ ಪುರೋಹಿತವರ್ಗವಿದೆ. ಸತ್ತವರನ್ನು ಅವರ ಆರ್ಥಿಕ ಸ್ಥಾನಮಾನದನ್ವಯ ಹೂಳುವುದೋ ಇಲ್ಲವೇ ಸುಡುವುದೋ ರೂಢಿಯಲ್ಲಿದ್ದು, ಆಗ ೧೦ ದಿನಗಳ ಸೂತಕವನ್ನು ಆಚರಿಸಲಾಗುತ್ತದೆ. ಇವರಲ್ಲಿ ಮಾಸಿಕ ಹಾಗೂ ವಾರ್ಷಿಕ ಶ್ರಾದ್ಧಾಚರಣೆ ರೂಢಿಯಲ್ಲಿದ್ದು, ಮಹಾಲಯ ಅಮಾವಾಸ್ಯೆಯ ಸಮಯದಲ್ಲಿ ಪೂರ್ವಿಕರನ್ನು ಆರಾಧಿಸಲಾಗುತ್ತದೆ. ಇದೇ ರೀತಿ ಸತ್ತ ಮಹಿಳಾ ಪೂರ್ವಿಕರನ್ನು ಶ್ರಾವಣ ಶುಕ್ರವಾರದಂದು ಆರಾಧಿಸುವ ವಿಶಿಷ್ಟ ಸಂಪ್ರದಾಯ ಇವರಲ್ಲಿದೆ.

**ದೇವಾಂಗ (ನೇಕಾರ):** ನೇಕಾರಿಕೆ ಇವರ ಸಾಂಪ್ರದಾಯಕ ವೃತ್ತಿಯಾಗಿದ್ದು, ಕನ್ನಡ ಹಾಗೂ ತೆಲುಗು ಮಾತೃಭಾಷಿಕರಿದ್ದಾರೆ. ಇವರಲ್ಲಿ ಅನೇಕ ಬೆಡಗು, ಒಳಪಂಗಡಗಳಿದ್ದು, ವಧುತೆರೆ ತೀರಾ ಇತ್ತೀಚಿನವರೆಗೆ ತೆಲುಗು ದೇವಾಂಗ ಜನಾಂಗದಲ್ಲಿತ್ತು. ಉಪನಯನ, ಜನಿವಾರ ಧಾರಣೆಗಳನ್ನು ಅನುಸರಿಸುವ ಇವರು ಹುಟ್ಟು–ಸಾವಿನ ಸಂದರ್ಭಗಳಲ್ಲಿ ಹತ್ತು ದಿನಗಳ ಸೂತಕವನ್ನು ಆಚರಿಸುತ್ತಾರೆ. ಇವರಲ್ಲಿ ಕೆಲವರು ಲಿಂಗಧಾರಿಗಳೂ ಹೌದು. ತೆಲುಗು ದೇವಾಂಗರು ಸಸ್ಯಹಾರಿಗಳು. ರಾಮಲಿಂಗ, ಚೌಡೇಶ್ವರಿ ಹಾಗೂ ಬನಶಂಕರಿ ಇವರ ಕುಲದೇವರುಗಳಾಗಿದ್ದು, ಜಾತಿ ಪುರೋಹಿತರೇ ಇವರಿಗಿದ್ದಾರೆ. ಇವರಲ್ಲಿ ಸತ್ತವರನ್ನು ಸಾಮಾನ್ಯವಾಗಿ ಹೂಳಲಾಗುತ್ತದೆ. ೧೧ನೇ ದಿವಸ, ಮಾಸಿಕ ಹಾಗೂ ವಾರ್ಷಿಕ ಶ್ರಾದ್ಧಗಳನ್ನು ಆಚರಿಸಲಾಗುತ್ತದೆ. ಸೆಟ್ಟು ಆಥವಾ ಯಜಮಾನನ ನೇತೃತ್ವದಲ್ಲಿ ಜಾತಿಯ ಒಳಜಗಳಗಳನ್ನು ಕಟ್ಟೆಮನೆಯಲ್ಲೇ ಹಿಂದೆ ತೀರ್ಮಾನಿಸಲಾಗುತ್ತಿತ್ತು.

**ಬ್ರಾಹ್ಮಣ :** ತಾಲೂಕಿನಲ್ಲಿ ಬಹು ಹಿಂದಿನಿಂದಲೂ ಬ್ರಾಹ್ಮಣರು ವಾಸಿಸುತ್ತಿದ್ದು, ಅಗ್ರಹಾರಗಳನ್ನು ಬ್ರಾಹ್ಮಣರಿಗೆ ದತ್ತಿ ನೀಡಿದ್ದ ಅಂಶ ಆಯಾ ಕಾಲದ ಶಾಸನಗಳಿಂದ ವೇದ್ಯವಾಗುತ್ತದೆ. ಆದರೆ ಇಂದು ತಾಲೂಕಿನಲ್ಲಿ ಬ್ರಾಹ್ಮಣರು ಅತ್ಯಲ್ಪ ಸಂಖ್ಯೆಯಲ್ಲಿದ್ದಾರೆ. ಸ್ಮಾರ್ತ, ವೈಷ್ಣವ ಹಾಗೂ ಶ್ರೀವೈಷ್ಣವ ಪಂಥಕ್ಕೆ ಸೇರಿದ ಇವರಲ್ಲಿ ಕನ್ನಡ, ತಮಿಳು ಹಾಗೂ ತೆಲುಗು ಮಾತನಾಡುವವರಿದ್ದಾರೆ. ಈ ಪಂಥಗಳಲ್ಲಿ ಅನೇಕ ಒಳಪಂಗಡಗಳಿವೆ. ಆದಿಶಂಕರರ ಅನುಯಾಯಿಗಳಾದ ಸ್ಮಾರ್ತರಲ್ಲಿರುವ ಉಪಪಂಗಡಗಳಲ್ಲಿ ಮೂಗೂರು ಕರ್ನಾಟರು ಅಥವಾ ಹಳೇ ಕರ್ನಾಟಕ ಬ್ರಾಹ್ಮಣರು ನರಸೀಪುರ ತಾಲೂಕು ಸೇರಿದಂತೆ ಜಿಲ್ಲೆಯ ದಕ್ಷಿಣ ಭಾಗದಲ್ಲಿ ಅಧಿಕ ಸಂಖ್ಯೆಯಲ್ಲಿದ್ದಾರೆ. ಈಶ್ವರನನ್ನು ಪೂಜಿಸುವ ಆಗಮಿಕರು, ತಾಲೂಕಿನಲ್ಲಿ ಅಲ್ಪಸಂಖ್ಯೆಯಲ್ಲಿದ್ದು, ಇವರ ಮನೆಮಾತು ಕನ್ನಡ–ತಮಿಳು ಆಗಿದೆ. ಉಪನಯನದ ನಂತರ ಶಿವದೀಕ್ಷೆಯನ್ನು ಸ್ವೀಕರಿಸುವ ಇವರು ವೈದಿಕ ಆಚರಣೆಯನ್ನು ಅನುಸರಿಸುತ್ತಾರೆ. ವೈಷ್ಣವ ಧರ್ಮೀಯರೂ ತಾಲೂಕಿನಲ್ಲಿದ್ದಾರೆ.

ರಾಮಾನುಜ ಸಿದ್ಧಾಂತದ ಅನುಯಾಯಿಗಳಾದ ಶ್ರೀವೈಷ್ಣವರ ಮಾತೃಭಾಷೆ ತಮಿಳಾಗಿದ್ದು, ಇವರಲ್ಲೂ ಅನೇಕ ಉಪಪಂಗಡಗಳಿವೆ.

ಎಲ್ಲಾ ಗುಂಪಿನ ಬ್ರಾಹ್ಮಣರಲ್ಲಿ ಅನೇಕ ಗೋತ್ರ–ಪ್ರವರಗಳಿದ್ದು, ಸಗೋತ್ರಿಯರ ನಡುವೆ ವಿವಾಹಕ್ಕೆ ಆಸ್ಪದವಿರುವುದಿಲ್ಲ. ಎಲ್ಲಾ ಪಂಥದ ಬ್ರಾಹ್ಮಣರೂ ೧೬ ನಿತ್ಯ ಸಂಸ್ಕಾರ ಹಾಗೂ ೨೪ ನೈಮಿತ್ತಿಕ ಸಂಸ್ಕಾರಗಳನ್ನು ಅನುಸರಿಸುವುದು ಹಿಂದೆ ಕಡ್ಡಾಯವಾಗಿತ್ತು. ವಿಧವೆಯರಿಗೆ ಹಿಂದೆ ಇದ್ದ ನಿಷಿದ್ಧಗಳು ಇಂದು ಕಣ್ಮರೆಯಾಗಿವೆ. ಆಹಾರ ತರಕಾರಿ ಸೇವನೆಯಲ್ಲಿ ಅನೇಕ ಕಟ್ಟುಪಾಡುಗಳಿದ್ದವಾದರೂ ಇಂದು ಸಡಿಲಗೊಂಡಿವೆ. ಇವರ ವಿವಾಹಾಚರಣೆಗಳು ವೈದಿಕ ಮಾದರಿಯಲ್ಲೇ ಜರುಗುತ್ತವೆ. ವಿವಾಹ ವಿಚ್ಛೇದನ ಹಾಗೂ ವಿಧವಾ ವಿವಾಹಗಳಿಗೆ ಸಾಂಪ್ರದಾಯಿಕ ನಿಷೇಧವಿದ್ದು, ಹಿಂದೆ ಬಳಕೆಯಲ್ಲಿದ್ದ ವರದಕ್ಷಿಣೆಯನ್ನು ಈಗ ಸಾರ್ವತ್ರಿಕವಾಗಿ ಕಾನೂನುಬಾಹಿರವೆಂದು ಘೋಷಿಸಲಾಗಿದೆ. ಆದರೆ, ಇತ್ತೀಚೆಗೆ ಈ ಆಚರಣೆಗಳು ಪರಿವರ್ತಿತ ಪರಿಸರಕ್ಕನುಗುಣವಾಗಿ ಸಡಿಲಗೊಂಡಿರುವುದು ಗಮನಾರ್ಹವಾಗಿದೆ. ಇವರಲ್ಲಿ ಸತ್ತವರನ್ನು ಚಿತೆಗೇರಿಸಿ ಹತ್ತುದಿನಗಳ ಸೂತಕವನ್ನೂ ೧೩ ದಿನಗಳ ಪರ್ಯಂತ ವಿಧಿವತ್ತಾದ ಶ್ರಾದ್ಧವನ್ನೂ ಆಚರಿಸಲಾಗುತ್ತದೆ. ಅಲ್ಲದೇ ಸತ್ತವರ್ಷ ಮಾಸಿಕ ತಿಥಿಯನ್ನೂ ನಂತರ ವಾರ್ಷಿಕ ತಿಥಿಯನ್ನೂ ಆಚರಿಸಲಾಗುತ್ತದೆ. ಬಹುತೇಕ ವೇದಾಧ್ಯಯನ, ಬೋಧನಾ, ಯಜ್ಞಯಾಗಾದಿಗಳನ್ನು ನಡೆಸುವುದನ್ನೇ ಸಾಂಪ್ರದಾಯಕ ವೃತ್ತಿಯನ್ನಾಗಿ ಹಿಂದೆ ಹೊಂದಿದ್ದ ಇವರು ಪ್ರಸ್ತುತ, ಇತರೆ ಜಾತಿಗಳಂತೆ ಸಾಮಾಜಿಕ ಪರಿವರ್ತನೆಗೆ ಒಳಗಾಗಿ ವಿವಿಧ ರಂಗಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

**ಮರಾಠರು :** ಮೂಲತಃ ಮಹಾರಾಷ್ಟ್ರ ಕಡೆಯಿಂದ ಷಹಾಜಿ–ಶಿವಾಜಿ ಕಾಲದಲ್ಲಿ ಈ ಭಾಗಕ್ಕೆ ವಲಸೆ ಬಂದವರಾಗಿದ್ದು, ಬೇಸಾಯ, ದರ್ಜಿಕಾಯಕ, ವ್ಯಾಪಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರಲ್ಲಿ ಸೂರ್ಯವಂಶ, ಸೋಮವಂಶ, ಯದುವಂಶ ಹಾಗೂ ಶೇಷವಂಶಗಳೆಂಬ ನಾಲ್ಕು ವಂಶಗಳಿದ್ದು, ಪವಾರ್, ಭೋಸ್ಲೆ, ರಾಹುತ್ ಮುಂತಾದ ೯೬ ದೇವಕ (ಕುಲ)ಗಳಿವೆ. ಅರೇರ್ ಎಂದೂ ಕರೆಯಲ್ಪಡುವ ಇವರ ಮಾತೃಭಾಷೆ ಮರಾಠಿಯಾಗಿದ್ದು, ಬಾಲಕರಿಗೆ ಉಪನಯನ ಮಾಡಿ ಜನಿವಾರ ಧರಿಸುವ ಸಂಪ್ರದಾಯವಿದೆ. ಇವರ ಧಾರ್ಮಿಕ ಆಚರಣೆಗಳಲ್ಲಿ ಬ್ರಾಹ್ಮಣರು ಪೌರೋಹಿತ್ಯ ವಹಿಸುತ್ತಿದ್ದು, ವಿಧವಾ ವಿವಾಹ ಹಾಗೂ ವಿಚ್ಛೇದನಗಳಿಗೆ ಇವರಲ್ಲಿ ಅವಕಾಶವಿಲ್ಲ. ಶಿವನನ್ನು ಖಂಡೋಬ ಹಾಗೂ ಬೈರೋಬ ರೂಪದಲ್ಲಿ ಆರಾಧಿಸುವ ಇವರು ವಿಠೋಬ, ಅಂಬಾಭವಾನಿ, ತುಳಜಾಭವಾನಿ ಮುಂತಾದ ದೇವರುಗಳನ್ನು ಪೂಜಿಸುತ್ತಾರೆ. ಸತ್ತವರನ್ನು ಸುಡುವ ಸಂಪ್ರದಾಯವಿದ್ದು, ಹತ್ತು ದಿನಗಳ ಸೂತಕವನ್ನು ಆಚರಿಸಲಾಗುತ್ತದೆ. ಮಹಾಲಯ ಅಮಾವಾಸ್ಯೆ ಸಮಯದಲ್ಲಿ ಪೂರ್ವಿಕರ ಹೆಸರಲ್ಲಿ ಎಡೆ ಇಟ್ಟು ಪೂಜಿಸಲಾಗುತ್ತದೆ.

**ಮಾದಿಗ :** ತಾಲೂಕಿನ ಎಲ್ಲಾ ಭಾಗಗಳಲ್ಲೂ ಹರಡಿಕೊಂಡಿರುವ ಇವರನ್ನು ಪದ್ಮಜಾತಿ, ಜಾಂಬವ, ಮಾತಂಗ, ಬೆಂಗಾರ ಹಾಗೂ ಎಡಗೈನವರೆಂದೂ ಕರೆಯಲಾಗುತ್ತಿದ್ದು, ಮಾತಂಗಿ ಹಾಗೂ ಮಾರಮ್ಮ ಇವರ ಕುಲದೇವತೆಯರು. ಇವರಲ್ಲಿ ತಣಿಗೆ ಬುವ್ವದವರು ಹೆಡಿಗೆ ಬುವ್ವದವರು, ಮೊರದ ಬುವ್ವದವರು ಹಾಗೂ ಡಕ್ಕಲಿಗರು ಎಂಬ ಉಪಪಂಗಡಗಳಿವೆ. ಜಾಂಬವರು ಇವರ ಪುರೋಹಿತವರ್ಗವಾಗಿದ್ದು, ಮಠವನ್ನೂ ಹೊಂದಿದ್ದಾರೆ. ಇವರಲ್ಲಿ ಬೆಳ್ಳಿ, ಕಸಬ, ಬೇಲ, ಹನುಮಂತ, ಮುಂತಾದ ಅನೇಕ ಬೆಡಗುಗಳಿವೆ. ತೆರಪದ್ಧತಿಯೂ ಇದ್ದು, ನೀಲಗಾರರು ಹಾಗೂ ಜೋಗಿಗಳನ್ನು ದೇವರ ಹೆಸರಲ್ಲಿ ಬಿಡುವ ಸಂಪ್ರದಾಯವಿದೆ. ಶರಣ ಹರಳಯ್ಯನನ್ನು ವಿಶೇಷ ಭಕ್ತಿಭಾವದಿಂದ ಕಾಣುವ ಇವರಲ್ಲಿ ಸತ್ತವರನ್ನು ಹೂಳುವ ಪದ್ಧತಿ ಇದ್ದು, ಮೂರು ಇಲ್ಲವೇ ಹತ್ತು ದಿನಗಳ ಸೂತಕವನ್ನು ಆಚರಿಸಲಾಗುತ್ತದೆ. ಯುಗಾದಿ, ವಿನಾಯಕಚೌತಿ ಹಾಗೂ ಮಹಾಲಯ ಅಮಾವಾಸ್ಯೆಗಳಂದು ಸ್ಮಶಾನಕ್ಕೆ ಹೋಗಿ ಸಮಾಧಿಗೆ ಪೂಜೆ-ಎಡೆ ಸಲ್ಲಿಸಿ, ಮನೆಗೆ ಬಂದು ಕಳಸ ಪೂಜಿಸುವುದು ಅಲ್ಲಲ್ಲಿ ಕಂಡುಬರುತ್ತದೆ. ಚರ್ಮದ ಕಾಯಕ ಇವರ ಕುಲಕಸುಬಾಗಿದ್ದು, ಕೃಷಿ ಕಾರ್ಮಿಕರಾಗಿ ಕೂಡ ಹೊಲದಲ್ಲಿ ದುಡಿಯುತ್ತಾರೆ. ಇವರು ತಮಟೆ ರಾಮಡೋಲುಗಳನ್ನು ಲಯಬದ್ಧವಾಗಿ ಬಾರಿಸುವಲ್ಲಿ ನಿಷ್ಣಾತರು.

**ಮೇದ :** ಗವರಿಗ, ಗೌರಿಮಕ್ಕಳು ಎಂದೂ ಕರೆಯಲ್ಪಡುವ ಇವರು ಬೊಂಬು ಬಿದಿರುಗಳಿಂದ ವಿವಿಧ ಗೃಹೋಪಯೋಗಿ ವಸ್ತುಗಳನ್ನು ತಯಾರಿಸುವ ಕಾಯಕದವರಾಗಿದ್ದು, ಸಾಮಾನ್ಯವಾಗಿ ನಗರಪ್ರದೇಶಗಳಲ್ಲಿ ವಾಸಿಸುತ್ತಾರೆ. ಕನ್ನಡ-ತೆಲುಗು ಭಾಷೆಗಳನ್ನಾಡುವ ಇವರಲ್ಲಿ ಹಲವಾರು ಪಂಗಡಗಳಿದ್ದರೂ, ತಾಲೂಕಿನಲ್ಲಿ ಗವರಿಗರು ಮಾತ್ರ ಇದ್ದಾರೆ. ಇವರಲ್ಲಿ ಬೆಳ್ಳಿಕುಲ ಹಾಗೂ ನಾಗರಕುಲ ಎಂಬ ಪಂಗಡಗಳಿದ್ದು, ಬ್ರಾಹ್ಮಣ ಪುರೋಹಿತರು ವಿವಾಹ ನಡೆಸಿಕೊಡುತ್ತಿದ್ದು, ವಧುವಿಗೆ ತೆರ ನೀಡುವ ಪದ್ಧತಿ ಇದೆ. ಇವರಲ್ಲಿ ದೀಪಾವಳಿಯ ಮಾರನೆಯ ದಿನ ಕಾಡಿಗೆ ಹೋಗಿ ಬೊಂಬು ಬಿದಿರಿನ ಮೇಳೆಯನ್ನು ಪೂಜಿಸಿ ಬರುವ ಸಂಪ್ರದಾಯ ಹಿಂದೆ ಇತ್ತು. ಆದರೆ ಈಗ ಮಹಾನವಮಿಯ ಸಂದರ್ಭದಲ್ಲಿ ಆಯುಧಪೂಜೆಯಂದು ತಮ್ಮ ಕಸುಬಿಗೆ ಸಂಬಂಧಿಸಿದ ಉಪಕರಣಗಳನ್ನು ಪೂಜಿಸುವುದು ಸಾಮಾನ್ಯವಾಗಿದೆ. ಹಿರಿಯಮ್ಮ ಹಾಗೂ ಲಕ್ಷ್ಮೀದೇವಿಯರನ್ನು ಪೂಜಿಸುವ ಇವರು ಕಾಡಿಗೆ ಹೋದಾಗ ಹುಲಿ ಹಾಗೂ ಇತರ ಕ್ರೂರ ಪ್ರಾಣಿಗಳಿಂದ ತಮಗೆ ತೊಂದರೆಯಾಗದಿರಲೆಂಬ ಉದ್ದೇಶದಿಂದ ಗಿಡದ ಮುತ್ತರಾಯನನ್ನು ಕಾಲಕಾಲಕ್ಕೆ ಪೂಜಿಸುವ ಪದ್ಧತಿ ಇತ್ತು. ಅಲ್ಲದೆ ಈ(ವೀ)ರಗಾರರನ್ನು ವರ್ಷದಲ್ಲೊಮ್ಮೆ ಪೂಜಿಸುವ ಇವರಲ್ಲಿ ಸತ್ತವರನ್ನು ಹೂಳುವ ಸಂಪ್ರದಾಯವಿದೆ. ಇವರಲ್ಲೂ ಬಾಲಕರನ್ನು ದೇವರಗುಡ್ಡರನ್ನಾಗಿ ಮೀಸಲು ಬಿಡುವ ಪದ್ದತಿ ಇದ್ದು, ತಮ್ಮೊಳಗಿನ ವ್ಯಾಜ್ಯಗಳನ್ನು ಜಾತಿ ಕಟ್ಟೆಮನೆಗಳಲ್ಲಿ ಯಜಮಾನನ ಸಮ್ಮುಖದಲ್ಲಿ ಬಗೆಹರಿಸಿಕೊಳ್ಳುವ ಸಂಪ್ರದಾಯವಿದೆ.

**ಮೊದಲಿಯಾರ್ :** ತಮಿಳುನಾಡು ಮೂಲದ ಇವರು ವಲಸೆ ಬಂದಿರುವ ಕೃಷಿಕವರ್ಗದವರಾಗಿದ್ದು, ವೆಲ್ಲಾಳ ಜಾತಿಗೆ ಸೇರಿದವರಾಗಿದ್ದು, ಧರ್ಮಾಚರಣೆಗಳಲ್ಲಿ

ಬ್ರಾಹ್ಮಣರು ಪೌರೋಹಿತ್ಯ ವಹಿಸುತ್ತಾರೆ. ಇವರಲ್ಲಿ ಶೈವ–ವೈಷ್ಣವ ಧರ್ಮೀಯರಿದ್ದು, ಆಂತರಿಕ ಬಿಕ್ಕಟ್ಟನ್ನು ಪರಿಹರಿಸಿಕೊಳ್ಳಲು, ಜಾತಿ ಪಂಚಾಯಿತಿ ಇದ್ದು, ಸತ್ತವರನ್ನು ಸುಡಲಾಗುತ್ತಾದರೂ, ಕೆಲವೊಮ್ಮ ಆಸೀನ ಭಂಗಿಯಲ್ಲಿ ಹೂಳಲಾಗುತ್ತದೆ. ಇವರಲ್ಲೂ ಹನ್ನೊಂದನೇ ದಿನ ಹಾಗೂ ವಾರ್ಷಿಕ ಶ್ರಾದ್ಧಗಳನ್ನು ಆಚರಿಸಲಾಗುತ್ತದೆ. ತಲಕಾಡಿನ ಸುತ್ತಮುತ್ತ ವಾಸಿಸುವ ವೆಲ್ಲಾಳಗೌಂಡರು ತಮಿಳು ಮೂಲದವರಾದರೂ, ಕನ್ನಡ ಬಲ್ಲವರಾಗಿದ್ದು, ಬೇಸಾಯ ಮಾಡುತ್ತಾರೆ. ಅವರು ಆರಾಧಿಸುವ ಪ್ರಧಾನ ದೇವತೆಯನ್ನು ಆಧರಿಸಿದ ಕೋರ, ಕೂಟ, ಪಿರನ್‌ಕೂಟ, ಪೆರಲನ್ ಕೂಟ, ಕೊಡೆಕೂಟ, ಕೊಣ್ಣನು ಕೂಟ ಮುಂತಾದ ಉಪಪಂಗಡಗಳು ಇವರಲ್ಲಿವೆ. ಆಡಿಹಬ್ಬ ಹಾಗೂ ತಮಿಳು ಹೊಸವರ್ಷ ಇವರ ವಿಶೇಷ ಹಬ್ಬಗಳಾಗಿದ್ದು, ೧೭ ರಿಂದ ೨೫ ರೂ.ಗಳನ್ನು ತೆರ ನೀಡುವ ಸಂಪ್ರದಾಯ ಇವರಲ್ಲಿದ್ದು, ಸತ್ತವರನ್ನು ಅಗ್ನಿಸಂಸ್ಕಾರ ಮಾಡಲಾಗುತ್ತಿದ್ದು, ಅವಿವಾಹಿತರಾದಲ್ಲಿ ಹೂಳುವ ಸಂಪ್ರದಾಯವಿದೆ. ಒಳಜಗಳವನ್ನು ತೀರ್ಮಾನಿಸಲು ಇವರಲ್ಲಿ ಜಾತಿ ಪಂಚಾಯಿತಿ ಇದೆ.

**ಯಾದವ :** ಗೊಲ್ಲ, ಕೃಷ್ಣ ಗೊಲ್ಲ ಎಂದೂ ಕರೆಯಲ್ಪಡುವ ಇವರು ಒಂದು ಕಾಲದಲ್ಲಿ ಅಲೆಮಾರಿಗಳಾಗಿದ್ದು, ಪಶುಸಂಗೋಪನೆಯಲ್ಲಿ ನಿರತರಾಗಿದ್ದವರು. ಇವರಲ್ಲಿ ಯರ ಅಥವಾ ಕಿತ್ತಾರಿ, ಪುನುಗು ಅಥವಾ ಕುಡಿ, ಪೈತಾಳಿ, ಕರ್ನೇ, ಪುನಿ ಅಥವಾ ಪುಜೆ, ಬೀಗಮುದ್ರೆ ಅಥವಾ ಬೊಕ್ಕಸ, ಕಂಚು, ರಾಚ, ಮುಷ್ಟಿ ಮುಂತಾದ ಉಪಪಂಗಡಗಳಿದ್ದು, ಒಂಟಿ ಚಪ್ಪರದವರು ಹಾಗೂ ರೆಂಡು ಚಪ್ಪರದವರು ಎಂಬ ಎರಡು ಮುಖ್ಯ ಪ್ರಬೇಧಗಳಿವೆ. ಇವರಲ್ಲಿ ಹಲವಾರು ಬೆಡಗುಗಳಿದ್ದು, ಕೃಷ್ಣ, ಮಾರಮ್ಮ, ಎಲ್ಲಮ್ಮ, ಗಂಗಮ್ಮ, ಮುಂತಾದ ದೇವಾನುದೇವತೆಗಳನ್ನು ಆರಾಧಿಸುತ್ತಾರೆ. ತೆರ ನೀಡುವ ಪದ್ಧತಿ ಇವರಲ್ಲಿದೆ. ಸತ್ತ ಬ್ರಹ್ಮಚಾರಿಗಳನ್ನು ಈರಗಾರರೆಂದು ಪರಿಗಣಿಸಿ, ಕುದುರೆಸವಾರರಂತೆ ಕೆತ್ತಿದ ವೀರಗಲ್ಲು ನಿಲ್ಲಿಸಿ, ವಿಶೇಷ ದಿನಗಳಲ್ಲಿ ಪೂಜಿಸಲಾಗುತ್ತದೆ. ಸಂಕ್ರಾಂತಿ ಹಬ್ಬದಂದು ಕಾಟಮರಾಯನನ್ನು ಪೂಜಿಸುವ ಇವರಲ್ಲಿ ದೇವರಿಗೆ ದಾಸಯ್ಯಗಳನ್ನು ಬಿಡುವ ಸಂಪ್ರದಾಯವಿದೆ. ಇವರಲ್ಲಿ ಒಳಜಗಳ ತೀರ್ಮಾನಿಸಲು ಕಟ್ಟೇಮನೆಗಳಿದ್ದು, ಸತ್ತವರನ್ನು ಸಾಮಾನ್ಯವಾಗಿ ಹೂಳಲಾಗುತ್ತದೆ.

**ಲಿಂಗಾಯತ :** ವೀರಶೈವರು ಎಂದು ಕರೆಯಲ್ಪಡುವ ಶಿವಲಿಂಗಧಾರಿಗಳಾದ ಇವರಲ್ಲಿ ಜಂಗಮ, ಆರಾಧ್ಯ, ಬಣಜಿಗ (ಶೆಟ್ಟಿ) ಶಿವಾಚಾರಿ, ಗೌಡ, ನೊಣಬ, ಸಾದರು ಮುಂತಾದ ಒಳಪಂಗಡಗಳಿದ್ದು, ತಾಲೂಕಿನಲ್ಲಿ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಕನ್ನಡ ಮಾತನಾಡುವ ಇವರು ಕೃಷಿ, ವ್ಯಾಪಾರ ಸೇರಿದಂತೆ, ವಿವಿಧ ವೃತ್ತಿಗಳಲ್ಲಿ ತೊಡಗಿದ್ದಾರೆ. ತಾವು ಪೂಜಿಸುವ ಇಷ್ಟಲಿಂಗವನ್ನು ಕೊರಳಲ್ಲಿ ಧರಿಸುವ ಇವರು ಪಂಚಾಚಾರ–ಅಷ್ಟಾವರಣ ಹಾಗೂ ಷಟ್‌ಸ್ಥಳ ಆಚರಣೆಯಲ್ಲಿ ನಿಷ್ಠೆಯುಳ್ಳವರಾಗಿದ್ದು, ಯಾಗ–ಯಜ್ಞ, ಉಪವಾಸ, ತಪಸ್ಸು ಮುಂತಾದವನ್ನು ಸಾಂಪ್ರದಾಯಿಕವಾಗಿ ಇವರು ನಂಬುವುದಿಲ್ಲ. ಹುಟ್ಟು, ಮುಟ್ಟು, ಮರಣ ಸಂದರ್ಭಗಳಲ್ಲಿ ಸೂತಕ ಆಚರಣೆ ಅಗತ್ಯವಿಲ್ಲವೆಂದು ಹೇಳಲಾಗುತ್ತಾದರೂ ರೂಢಿಯಲ್ಲಿದೆ. ಮರಣಾನಂತರ ಜೀವಾತ್ಮವು

ವಿಶ್ವಾತ್ಮದಲ್ಲಿ ಒಂದಾಗುವುದರಿಂದ ಮರಣೋತ್ತರ ಕ್ರಿಯಾವಿಧಿಗಳ ಅಗತ್ಯವಿಲ್ಲವೆಂಬ ನಂಬಿಕೆಯೂ ಇವರಲ್ಲಿದೆ. ವೈದಿಕ ವಿಧಾನಕ್ಕಿಂತ ಸ್ವಲ್ಪ ಭಿನ್ನವಾದ ವಿವಾಹ ಪದ್ಧತಿಯನ್ನು ಅನುಸರಿಸುವ ಇವರು ಅಗ್ನಿಗೆ ಬದಲು ಪಂಚಕಳಸ ಪೂಜಿಸುತ್ತಿದ್ದು, ವೀರಭದ್ರನ ಒಕ್ಕಲಿನವರು ಗುಗ್ಗಲ ಸೇವೆಯನ್ನು ಮಾಡುತ್ತಾರೆ. ಲಿಂಗದವೀರ ಎಂಬ ಧಾರ್ಮಿಕ ವಿಧಿಯು ಲಿಂಗಾಯತ ಹಾಗೂ ಕುರುಬರಿಬ್ಬರಲ್ಲೂ ರೂಢಿಯಲ್ಲಿದೆ. ಜಂಗಮರನ್ನು ಗುರುಗಳನ್ನಾಗಿ ಹೊಂದಿರುವ ವೀರಶೈವರಲ್ಲಿ ಸತ್ತವರನ್ನು ಸಾಮಾನ್ಯವಾಗಿ ಉತ್ತರಮುಖವಾಗಿ ಕೂರಿಸಿ ಸಮಾಧಿ ಮಾಡಲಾಗುತ್ತದೆ. ಹನ್ನೊಂದನೆಯ ದಿನ ಶಿವಗಣಾರಾಧನೆಯನ್ನು ಆಚರಿಸಲಾಗುತ್ತದೆ. ಇವರಲ್ಲಿ ಆರಾಧ್ಯರು ವೇದ ಹಾಗೂ ಪಂಚಾಚಾರ್ಯರಲ್ಲಿ ನಿಷ್ಠೆಯುಳ್ಳವರಾಗಿದ್ದು, ಪಂಚಾಚಾರ್ಯರ ಜಯಂತಿಯನ್ನೂ, ಉಳಿದವರು ಬಸವೇಶ್ವರ ಜಯಂತಿ, ಶಿವರಾತ್ರಿ ಹಬ್ಬಗಳನ್ನೂ ಸಂಭ್ರಮದಿಂದ ಆಚರಿಸುತ್ತಾರೆ.

**ವಡ್ಡ :** ಕೆರೆ, ಬಾವಿ, ರಸ್ತೆ, ಮುಂತಾದ ಕಾಮಗಾರಿಗಳಲ್ಲಿ ದುಡಿಯುವ ಇವರು ತೆಲುಗು ಭಾಷಿಕರಿದ್ದು, ಕಲ್ಲು/ಊರು, ಮಣ್ಣು/ಬೈಲು/ದೇಶ ಹಾಗೂ ಉಪ್ಪುವಡ್ಡ ಎಂಬ ಪ್ರಬೇಧಗಳಿವೆ. ಅಲ್ಲದೇ ಬಂಡಿವಡ್ಡ, ಹಂಡಿವಡ್ಡ, ಉಳುವಡ್ಡ, ಪುಟ್ಗೋಸಿವಡ್ಡ, ಕಟ್ಟೆವಡ್ಡ ಎಂಬ ಉಪಪಂಗಡಗಳಿವೆ. ಆಂಧ್ರ ಮೂಲದವರಾದ ಇವರಲ್ಲಿ ಹಲವಾರು ಬೆಡಗುಗಳಿದ್ದು, ಏಳು ರೂ.ಗಳಿಂದ ೫೦ ರೂ.ವರೆಗೆ ತೆರ ನೀಡುವ ಪದ್ಧತಿ ಇದ್ದು, ಮಹಿಳೆಯರು ಸೆರಗು ಬಿಗಿಯುವ ವಿಧಾನಕ್ಕೆ ಗೊಬ್ಬೆ ಸೆರಗು ಎಂದು ಕರೆಯಲಾಗುತ್ತದೆ. ಇವರಲ್ಲಿ ವಿವಾಹ ಸಂದರ್ಭದಲ್ಲಿ ಬಾಸಿಂಗ ಧರಿಸುವ ಸಂಪ್ರದಾಯವಿಲ್ಲ. ಗರ್ಭಿಣಿ ಹೆಂಗಸಿನ ಪತಿಯಾದವನು ಕೆರೆವೊಡ್ಡು ಕೀಳುವಂತಿಲ್ಲ. ಶವಹೊರುವಂತಿಲ್ಲ. ಸಿದ್ಧರಾಮದೇವರು ಹಾಗೂ ಶಿರಾ (ತುಮಕೂರು ಜಿಲ್ಲೆ)ದ ಕರಿಯಮ್ಮ ದೇವರನ್ನು ಪೂಜಿಸುವ ಇವರಲ್ಲಿ ಒಳವ್ಯಾಜ್ಯಗಳನ್ನು ಬಗೆಹರಿಸಲು ಜಾತಿಪಂಚಾಯಿತಿಗಳಿದ್ದು, ಸತ್ತವರನ್ನು ಹೂಳಲಾಗುತ್ತದೆ.

**ವಿಶ್ವಕರ್ಮ :** ಪಂಚಾಳರೆಂದೂ ಕರೆಯಲ್ಪಡುವ ಇವರಲ್ಲಿ ಬಡಗಿ, ಕಮ್ಮಾರ, ಕುಂಬಾರ, ಅಕ್ಕಸಾಲಿ ಹಾಗೂ ಕಂಚುಗಾರ ಎಂಬ ಪಂಚಕರ್ಮದವರಿದ್ದು, ವಿಶ್ವಕರ್ಮ ಅಥವಾ ವಿಶ್ವಬ್ರಹ್ಮನ ಪಂಚಮುಖಗಳಿಂದ ಮನು, ಮಯ, ತ್ವಷ್ಟ, ಶಿಲ್ಪ ಹಾಗೂ ವಿಶ್ವಜ್ಞ (ದೈವಜ್ಞ)ರು ಜನಿಸಿದರೆಂಬ ಅಭಿಪ್ರಾಯವಿದ್ದು, ಅವರ ವಂಶಸ್ಥರೇ ಈ ಪಂಚಾಳರೆಂದು ನಂಬಲಾಗಿದೆ. ಈ ಐದು ಗೋತ್ರಗಳನ್ನು ೧೨೫ ಗೋತ್ರಗಳಾಗಿ ಪುನರ್ ವಿಭಜಿಸಲಾಗಿದ್ದು, ಇವರಲ್ಲಿ ಕನ್ನಡ, ತೆಲುಗು, ತಮಿಳು ಮಾತನಾಡುವವರಿದ್ದಾರೆ. ಕಮ್ಮಟೇಶ್ವರ–ಕಾಳಿಕಾದೇವಿಯರು ಇವರ ಕುಲದೇವರುಗಳಾಗಿದ್ದು, ಬಾಲಕರಿಗೆ ಉಪನಯನ ಮಾಡಿ ಜನಿವಾರಧಾರಣೆ ಮಾಡಲಾಗುತ್ತದೆ. ವೈದಿಕ ಪದ್ಧತಿಯಂತೆ ಇವರಲ್ಲಿ ವಿವಾಹ ವಿಧಿಯನ್ನು ಸ್ವಜಾತಿಯ ಪುರೋಹಿತರೇ ನಡೆಸುತ್ತಾರೆ. ಹುಟ್ಟು–ಸಾವುಗಳಲ್ಲಿ ಸೂತಕವನ್ನು ಆಚರಿಸಲಾಗುತ್ತಿದ್ದು, ಇವರಲ್ಲಿ ಸತ್ತವರಿಗೆ ಅಗ್ನಿಸಂಸ್ಕಾರ ಮಾಡಲಾಗುತ್ತದೆ. ತಮ್ಮ ವೃತ್ತಿಗೆ ಸಂಬಂಧಿಸಿದ ಸಲಕರಣೆಗಳನ್ನು ಅಮಾವಾಸ್ಯೆಯಂದು ಪೂಜಿಸುವ ಇವರಲ್ಲಿ

ಹೆಸರಾಂತ ಶಿಲ್ಪಿಗಳು ಕಲಾವಿದರೂ ಆಗಿಹೋಗಿದ್ದಾರೆ. ಇವರು ತಾಲ್ಲೂಕಿನಲ್ಲಿ ವಿರಳವಾಗಿ ಕಂಡುಬರುತ್ತಾರೆ.

**ವೈಶ್ಯ :** ಕೊಮ್ಮಟಿ, ಶ್ರೇಷ್ಠಿ, ಶೆಟ್ಟರು ಎಂದೂ ಕರೆಯಲ್ಪಡುವ ಇವರು ಪ್ರಧಾನವಾಗಿ ವರ್ತಕ ಜನಾಂಗದವರಾಗಿದ್ದು, ತಾಲ್ಲೂಕಿನಲ್ಲಿ ವಿರಳವಾಗಿ ನೆಲೆಸಿದ್ದಾರೆ. ತೆಲುಗು ಇವರ ಮಾತೃಭಾಷೆಯಾದರೂ, ಕನ್ನಡದಲ್ಲೇ ವ್ಯವಹರಿಸುತ್ತಾರೆ. ಇವರಲ್ಲಿ ಗವರೆ, ತುಪ್ಪದ ಹಾಗೂ ತ್ರೈವರ್ಣಿಕ್ ಎಂಬ ಪಂಗಡಗಳಿದ್ದರೂ, ತಾಲ್ಲೂಕಿನಲ್ಲಿರುವವರು ಗವರೆಗಳಾಗಿದ್ದಾರೆ. ವೈದಿಕ ಪದ್ಧತಿಯನ್ನು ಅನುಸರಿಸುವ ಇವರಲ್ಲಿ ೧೦೨ ಗೋತ್ರಗಳಿದ್ದು, ಧರ್ಮಾಚರಣೆಗಳಿಗೆ ಬ್ರಾಹ್ಮಣರನ್ನು ಕರೆಸುತ್ತಾರೆ. ಇವರಲ್ಲಿ ಸತ್ತವರನ್ನು ವೈದಿಕ ಪದ್ಧತಿಯಲ್ಲಿ ಅಗ್ನಿಸಂಸ್ಕಾರ ಮಾಡಲಾಗುತ್ತದೆ. ಕುಲದೇವತೆಯು ಕನ್ನಿಕಾಪರಮೇಶ್ವರಿಯಾಗಿದ್ದು, ಜಾತಿಪಂಚಾಯಿತಿ ಇವರಲ್ಲೂ ರೂಢಿಯಲ್ಲಿವೆ.

**ಹೊಲೆಯ :** ಈಗ ಆದಿಕರ್ನಾಟಕರೆಂದೂ ಕರೆಯಲ್ಪಡುವ ಇವರು ೧೮ ಪಣಕ್ಕೆ ಸೇರಿದ್ದು, ಬಲಗೈನವರೆಂದೂ ಕರೆಯಲಾಗುತ್ತದೆ. ಮನೆಯಲ್ಲಿ ಕನ್ನಡ ಮಾತನಾಡುವ ಇವರು ಹಿಂದೆ ಗ್ರಾಮದ ಹೊರಭಾಗದಲ್ಲಿ ವಾಸಿಸುತ್ತಿದ್ದರು. ಇವರಲ್ಲಿ ಅತ್ತಿಕುಲ, ಆನೆಕುಲ, ಆಲೆಕುಲ ಮುಂತಾದ ಬೆಡಗುಗಳೂ ಇವೆ. ಹನ್ನೆರಡೂವರೆ ರೂಪಾಯಿಗಳ 'ವಧುತೆರ'ವು ಇವರಲ್ಲಿ ರೂಢಿಯಲ್ಲಿದ್ದು, ಕನ್ಯೆಯನ್ನು ಮದುವೆಯಾಗುವ ವಿಧುರನು 'ಸವತಿಹಣ' ಎಂದು ಹೆಚ್ಚಿನ ವಧುತೆರ ನೀಡಬೇಕಾಗಿತ್ತು. ಇವರಲ್ಲಿ ಶಿವಾರಾಧಕರು ನಂಜುಂಡೇಶ್ವರ, ಚೌಡೇಶ್ವರಿ, ಮಾಸ್ತಮ್ಮ, ಸಿದ್ದಪ್ಪಾಜಿಯನ್ನು ಪೂಜಿಸುತ್ತಿದ್ದು, ತಮ್ಮಡಿಗಳು ಅವರ ಗುರುಗಳಾದರೆ, ವೈಷ್ಣವಾರಾಧಕರಿಗೆ ಸಾತಾನಿಗಳು ಗುರುಗಳಾಗಿರುತ್ತಾರೆ. ಸಾಮಾನ್ಯವಾಗಿ ಇವರಲ್ಲಿ ಸತ್ತವರ ತಲೆಯನ್ನು ದಕ್ಷಿಣಕ್ಕಿರುವಂತೆ ಮಲಗಿಸಿ ಹೂಳಲಾಗುತ್ತದೆ. ಆದರೆ ಕೆಲವೊಮ್ಮೆ ವಯಸ್ಸಾದವರನ್ನು ಸುಡುವುದೂ ಉಂಟು. ಸಾಂಪ್ರದಾಯಿಕವಾಗಿ ಕೃಷಿ ಕಾರ್ಮಿಕರಾಗಿರುವ ಇವರಲ್ಲಿ ಒಳಜಗಳಗಳನ್ನು ಹಿರಿಯರನ್ನೊಳಗೊಂಡ ಜಾತಿ ಪಂಚಾಯತಿಯಲ್ಲಿ ಗೊತ್ತುಗಾರನ ಸಮ್ಮುಖದಲ್ಲಿ ಬಗೆಹರಿಸಲಾಗುತ್ತದೆ.

## ಬುಡಕಟ್ಟು ಜನ ಮತ್ತು ಅವರ ಅಭಿವೃದ್ಧಿ

ತಾಲ್ಲೂಕಿನ ಪಶ್ಚಿಮ ಭಾಗದಲ್ಲಿ ಕೊಡಗು ಜಿಲ್ಲೆಯ ಗಡಿಗೆ ಅಂಟಿಕೊಂಡಿರುವ ಕಾಡಂಚಿನ ಊರುಗಳಾದ ಅಬ್ಬಳತಿ, ಮುತ್ತೂರು ಕಾಲೋನಿ, ಲಿಂಗಾಪುರ, ಆಯಿರಬೀಡು, ಬೆಮ್ಮತ್ತಿ, ದೊಡ್ಡಹೊಸೂರು, ಗರಗೂರು, ಗುಡ್ಡೇನಹಳ್ಳಿ, ಇಟ್ಟಗಳ್ಳಿ, ಕೊಪ್ಪ, ಕೂರ್ಗಲ್ಲು ಮುಂತಾದ ಊರುಗಳಲ್ಲಿ ಜೇನುಕುರುಬ, ಕಾಡು ಕುರುಬ, ಬೆಟ್ಟ ಕುರುಬ, ಸೋಲಿಗ ಮತ್ತು ಡೋಂಗ್ರಿ ಮುಂತಾದ ಬುಡಕಟ್ಟು ಜನರು ವಾಸಿಸುತ್ತಿದ್ದಾರೆ. ೨೦೦೧ರ ಜನಗಣತಿಯಂತೆ ತಾಲ್ಲೂಕಿನಲ್ಲಿ ೩,೫೬೭ ಬುಡಕಟ್ಟು ಜನರಿದ್ದಂತೆ ತಿಳಿದು ಬರುತ್ತದೆ. ಇವರಲ್ಲಿ ಸುಮಾರು ೨೮೦ ಕುಟುಂಬಗಳು ಸ್ವಂತ ಜಮೀನನ್ನು ಹೊಂದಿದ್ದು ಬೇಸಾಯ ಮಾಡುತ್ತಾರೆ. ಉಳಿದವರಲ್ಲಿ ಜೇನುಕುರುಬರು ಜೇನು ಸಂಗ್ರಹಿಸುತ್ತಾರೆ. ಸೋಲಿಗರು ಬಿದಿರಿನಲ್ಲಿ

ಬುಟ್ಟಿ ತಯಾರು ಮಾಡುತ್ತಾರೆ. ಡೋಂಗ್ರಿ ಜನಾಂಗ ಹಳೆ ಪ್ಲಾಸ್ಟಿಕ್ ಸಂಗ್ರಹಿಸಿ ತಮ್ಮ ಪ್ಲಾಸ್ಟಿಕ್ ಕಾರ್ಖಾನೆಯಲ್ಲಿ ಬಿಂದಿಗೆ, ಬುಟ್ಟಿ, ಬೇಸಿನ್ ಮತ್ತು ಪ್ಲಾಸ್ಟಿಕ್ ಹೂಗಳ ಮಾಲೆ ತಯಾರು ಮಾಡಿ ಮಾರಾಟ ಮಾಡುತ್ತಾರೆ. ಮರದ ತೊಗಟೆ ಮೇಲೆ ಹಾಗೂ ಕಲ್ಲು ಬಂಡೆಯ ಮೇಲೆ ಇರುವ ಹೂಗಳನ್ನು ಸಂಗ್ರಹಿಸುವುದು ಮತ್ತು ಮೀನು ಬೇಟೆ ವೃತ್ತಿಯನ್ನು ಈ ಎಲ್ಲ ಬುಡಕಟ್ಟು ಜನಾಂಗದವರು ಮಾಡುತ್ತಾರೆ. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿದ್ದ ಜೇನುಕುರುಬರ ೩೦ ಹಾಡಿಗಳಲ್ಲಿ ೧,೧೪೮ ಕುಟುಂಬಗಳಿದ್ದು, ೫,೭೮೩ ಜನಸಂಖ್ಯೆಯನ್ನು ಹೊಂದಿದ್ದರೆ, ೪೨ ಸೋಲಿಗ ಕುಟುಂಬ (೧೭೬ ಜನರು) ಹಾಗೂ ಡೋಂಗ್ರಿ ಒಂದು ಕುಟುಂಬ (೧೧ ಜನ) ಇತ್ತೆಂದು ತಿಳಿದುಬರುತ್ತದೆ.

**ಅಭಿವೃದ್ಧಿಗಾಗಿ ಸರ್ಕಾರದ ಯೋಜನೆಗಳು**

**ವಸತಿ :** ಕರ್ನಾಟಕ ಸರ್ಕಾರವು ಬುಡಕಟ್ಟು ಜನರಿಗಾಗಿ ರಾಣಿಗೇಟ್, ಮುತ್ತೂರು ಮತ್ತು ಅಬ್ಬಳತಿಯಲ್ಲಿ ನೂರಾರು ಮನೆಗಳನ್ನು ನಿರ್ಮಿಸಿಕೊಟ್ಟಿದೆ. ಅಲ್ಲದೆ ಹಳೆಮನೆಗಳ ದುರಸ್ತಿಗಾಗಿ ಹಣ ಸಹಾಯ ನೀಡುತ್ತದೆ. ಹೀಗಾಗಿ ಗುಡಿಸಲುಗಳಲ್ಲಿ ವಾಸಿಸುತ್ತಿದ್ದ ಬುಡಕಟ್ಟು ಜನ ಈಗ ಸರ್ಕಾರ ನಿರ್ಮಾಣ ಮಾಡಿಕೊಟ್ಟ ಮನೆಗಳಲ್ಲಿ ವಾಸಮಾಡುತ್ತಿದ್ದು, ಕುಡಿಯುವ ನೀರಿನ ಸೌಲಭ್ಯಗಳನ್ನು ಮಾಡಿಕೊಂಡಿದ್ದಾರೆ.

**ಕೃಷಿ ಇಲಾಖೆಯಿಂದ ಬೇಸಾಯಕ್ಕಾಗಿ ಸಹಾಯ :** ತಾಲೂಕಿನ ಕೃಷಿ ಇಲಾಖೆ ಪ್ರತಿವರ್ಷ ಇಬ್ಬರಿಗೆ ಒಂದು ಹೆಕ್ಟೇರಿಗೆ ರೂ. ೨,೮೦೦ ಗೆ ಸಮನಾದ ಬಿತ್ತನೆ ಬೀಜ ಮತ್ತು ಗೊಬ್ಬರ ಕೊಡುತ್ತದೆ. ಅಲ್ಲದೆ ಬೆಳೆರಕ್ಷಣೆಗೆ ಔಷಧಿ ಸ್ಪ್ರೇಯರ್‌ಗಳನ್ನು ಶೇ. ೭೫ರ ಪ್ರಮಾಣದಲ್ಲಿ ಸಹಾಯಧನದ ಮೂಲಕ ನೀಡುತ್ತದೆ ಮತ್ತು ಪ್ರತಿವರ್ಷ ಇಬ್ಬರಿಗೆ ನೀರೆತ್ತುವ ಡೀಸಲ್ ಮೋಟಾರ್ ನೀಡುತ್ತದೆ.

**ಸಮಾಜಕಲ್ಯಾಣ ಇಲಾಖೆಯಲ್ಲಿ ದೊರೆಯುವ ಸಹಾಯ ಸೌಲಭ್ಯಗಳು :** ಸರ್ಕಾರ ಈಗ ಬುಡಕಟ್ಟು ಜನರಿಗೆ ಸಮಾಜ ಕಲ್ಯಾಣ ಇಲಾಖೆಯ ಮೂಲಕ ದೊಡ್ಡ ಪ್ರಮಾಣದ ಸಹಾಯವನ್ನು ಒದಗಿಸುತ್ತಿದೆ. ಇದರಲ್ಲಿ ರೇಷ್ಮೆ ಮತ್ತು ಶುಂಠಿ ಬೆಳೆಗೆ ಬೇಕಾಗುವ ಕೃಷಿ ಪರಿಕರಗಳನ್ನು ಪೂರ್ಣವಾಗಿ ಪುಕ್ಕಟ್ಟೆ ಒದಗಿಸುತ್ತದೆ. ಡೀಸಲ್ ಮತ್ತು ಸೀಮೆಎಣ್ಣೆಯಿಂದ ಓಡುವ ನೀರೆತ್ತುವ ಯಂತ್ರಗಳು, ಔಷಧಿ ಸಿಂಪಡಿಸುವ ಸ್ಪ್ರೇಯರ್‌ಗಳು ಹಸುಗಳು ಮತ್ತು ಎತ್ತುಗಳನ್ನು ಈ ಇಲಾಖೆ ಒದಗಿಸುತ್ತದೆ. ಅಲ್ಲದೆ, ಆಲನಕಟ್ಟೆ, ಬೋರನಕಟ್ಟೆ ಎಂಬ ಎರಡು ಗ್ರಾಮಗಳನ್ನು ಈ ಇಲಾಖೆ ದತ್ತು ತೆಗೆದುಕೊಂಡಿದ್ದು, ಈ ಗ್ರಾಮಗಳ ಸಂಪೂರ್ಣ ಅಭಿವೃದ್ಧಿ ಈ ಇಲಾಖೆಯ ಹೊಣೆ ಆಗಿರುತ್ತದೆ.

**ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಮಾಜ ಕಲ್ಯಾಣ ಇಲಾಖೆಯ ಯೋಜನೆಗಳು :** ಜೇನುಕುರುಬರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಮಾಜ ಕಲ್ಯಾಣ ಇಲಾಖೆ ದೊಡ್ಡ ಪ್ರಮಾಣದ ಯೋಜನೆಗಳನ್ನು ಯೋಜಿಸುತ್ತಿದ್ದು ಅವು ವೈವಿಧ್ಯಮಯವಾಗಿವೆ. ತಾಲ್ಲೂಕಿನಲ್ಲಿ ಒಟ್ಟು

ಎಂಟು ಅಂಗನವಾಡಿ ಶಿಶುವಿಹಾರಗಳನ್ನು ಇಲಾಖೆ ನಡೆಸುತ್ತಿದೆ. ಮಕ್ಕಳಿಗೆ ಬಟ್ಟೆ, ಪುಸ್ತಕ, ಲೇಖನ ಸಾಮಗ್ರಿ ಹಾಗೂ ವಿದ್ಯಾರ್ಥಿ ವೇತನ ಕೊಡುತ್ತಿದೆ. ಶಾಲಾ ಮಕ್ಕಳ ಪೋಷಕರಿಗೆ ಒಂದು ಮಗುವಿಗೆ ವಾರ್ಷಿಕ ರೂ. ೨೦೦ ರಂತೆ ಪ್ರೋತ್ಸಾಹಧನ ನೀಡುತ್ತಿದೆ.

ವಿದ್ಯಾರ್ಥಿಗಳಿಗೆ ದೊರೆಯುವ ವಿದ್ಯಾರ್ಥಿವೇತನದ ವಿವರ : ೧ನೇ ತರಗತಿಯಿಂದ ೪ನೇ ತರಗತಿಯವರಿಗೆ ಓದುವ ಮಕ್ಕಳಿಗೆ ವಾರ್ಷಿಕ ೧೦೦ ರೂಪಾಯಿ ವಿದ್ಯಾರ್ಥಿ ವೇತನ, ೫ ರಿಂದ ೭ನೇ ತರಗತಿಯವರೆಗೆ ಓದುವ ಮಕ್ಕಳಿಗೆ ವಾರ್ಷಿಕ ೧೫೦ ರೂಪಾಯಿ ವಿದ್ಯಾರ್ಥಿ ವೇತನ, ೮ ರಿಂದ ೧೦ನೇ ತರಗತಿಯವರೆಗೆ ಓದುವ ಮಕ್ಕಳಿಗೆ ವಾರ್ಷಿಕ ೨೦೦ ರೂಪಾಯಿ ವಿದ್ಯಾರ್ಥಿ ವೇತನ, ಪಿ.ಯು.ಸಿ. ಓದುವ ಮಕ್ಕಳಿಗೆ ವಾರ್ಷಿಕ ೨೫೦ ರೂಪಾಯಿ ವಿದ್ಯಾರ್ಥಿ ವೇತನ.

ಇದಲ್ಲದೆ ದೊಡ್ಡ ಹೊಸೂರು, ಮುತ್ತೂರು ಕಾಲೋನಿ ಮತ್ತು ಅಬ್ಬಳತಿಯಲ್ಲಿ ಬುಡಕಟ್ಟು ಜನರಿಗಾಗಿ ತಲಾ ನೂರು ವಿದ್ಯಾರ್ಥಿಗಳಿಗೆ ಸೌಲಭ್ಯ ಇರುವ ಆಶ್ರಮ ಶಾಲೆಗಳಿವೆ. ಇತ್ತೀಚೆಗೆ ಪ್ರತಿಭಾವಂತ ಮಕ್ಕಳನ್ನು ಆರಿಸಿ ಮೊರಾರ್ಜಿ ನವೋದಯ ಶಾಲೆಗೆ ಕಳುಹಿಸಲಾಗುತ್ತಿದೆ. ಮೈಸೂರಿನ ರಾಮಕೃಷ್ಣ ಆಶ್ರಮಕ್ಕೆ ಪ್ರತಿವರ್ಷ ಇಬ್ಬರು ಮಕ್ಕಳನ್ನು ಆರಿಸಿ ಕಳುಹಿಸಲಾಗುತ್ತಿದೆ. ಪ್ರವಾಸಕ್ಕಾಗಿ ಮಕ್ಕಳಿಗೆ ಆಗುವ ಎಲ್ಲ ವೆಚ್ಚವನ್ನು ಇಲಾಖೆ ಭರಿಸುತ್ತಿದೆ. ತಾಂತ್ರಿಕ ಮತ್ತು ವೈದ್ಯಕೀಯ ಕಾಲೇಜಿನಲ್ಲಿ ಓದುತ್ತಿರುವ ಮಕ್ಕಳಿಗೆ ಪೂರ್ತಿ ಪುಸ್ತಕಗಳನ್ನು ಪೂರೈಸುತ್ತಿದೆ.

**ಪ್ರತಿಭಾವಂತ ಬುಡಕಟ್ಟು ಮಕ್ಕಳಿಗೆ ಪುರಸ್ಕಾರ :** ಸಮಾಜ ಕಲ್ಯಾಣ ಇಲಾಖೆ ಪ್ರತಿವರ್ಷ ತಾಲ್ಲೂಕಿನಲ್ಲಿ ಎಸ್.ಎಸ್.ಎಲ್.ಸಿ.ಯಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾದ ಬುಡಕಟ್ಟು ವಿದ್ಯಾರ್ಥಿಗಳಿಗೆ ೫೦೦ ರೂಪಾಯಿ, ಪಿ.ಯು.ಸಿ.ಯಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾದವರಿಗೆ ೭೫೦ ರೂಪಾಯಿಗಳು ಹಾಗೂ ಪದವಿಯಲ್ಲಿ ಮೊದಲದರ್ಜೆ ಪಡೆದವರಿಗೆ ೧೦೦೦ ರೂಪಾಯಿ ಪ್ರತಿಭಾಪುರಸ್ಕಾರ ನೀಡುತ್ತಿದೆ. ಇದಲ್ಲದೆ ಜಿಲ್ಲಾ ಮಟ್ಟದಲ್ಲೂ ಪುರಸ್ಕಾರ ಪ್ರತ್ಯೇಕವಾಗಿ ದೊರೆಯುತ್ತದೆ.

ಮಕ್ಕಳ ವಿದ್ಯಾಭ್ಯಾಸವಲ್ಲದೆ ಓದು ಮುಗಿಸಿ ತರಬೇತಿಗಾಗಿ ಪ್ರಯತ್ನಿಸುವ ಅಭ್ಯರ್ಥಿಗಳಿಗೆ ಇಲಾಖೆ ಪೂರ್ಣ ಸಹಾಯ ಮಾಡುತ್ತಿದೆ. ಉಪಾಧ್ಯಾಯರ ತರಬೇತಿ (D.Ed.,) ನರ್ಸಿಂಗ್, ಡ್ರೈವಿಂಗ್ ಮುಂತಾದ ತರಬೇತಿ, ಇಂಗ್ಲೀಷ್ ಭಾಷಾ (Spoken English) ಕಲಿಕೆ, ಕಂಪ್ಯೂಟರ್, ಗಗನಸಖಿ ಇತ್ಯಾದಿ ತರಬೇತಿ ಕೋರ್ಸುಗಳಲ್ಲಿ ಹಲವಾರು ಮಕ್ಕಳು ಅಭ್ಯಾಸಮಾಡುತ್ತಿದ್ದಾರೆ.

**ಸ್ವಯಂ ಉದ್ಯೋಗಕ್ಕಾಗಿ ತರಬೇತಿ :** ಇವೆಲ್ಲದರ ಮೇಲೆ ಇಲಾಖೆ ಸ್ವಂತ ಉದ್ಯೋಗ ಮಾಡಲು ಇಚ್ಛಿಸಿ ತರಬೇತಿ ಪಡೆಯಲು ಬಯಸುವ ಯುವಕ ಯುವತಿಯರಿಗೆ ಪ್ರತಿ ತಿಂಗಳು ೫೦೦ ರೂಪಾಯಿ ಶಿಷ್ಯವೇತನ ಕೊಟ್ಟು ತರಬೇತಿಗಾಗಿ ಒಳ್ಳೆಯ

ಕಂಪನಿಗಳಿಗೆ ಕಳುಹಿಸಿಕೊಡುತ್ತಿದೆ. ಮೇಣದ ಬತ್ತಿ ಮತ್ತು ಅಗರಬತ್ತಿ ತಯಾರಿಕೆ, ಟೈಲರಿಂಗ್, ಮರಗೆಲಸ ಮುಂತಾದ ಬಾಬುಗಳಲ್ಲಿ ಯುವಕ ಯುವತಿಯರು ತರಬೇತು ಪಡೆಯುತ್ತಿದ್ದಾರೆ. ಇದಲ್ಲದೆ, ತಾಲೂಕಿನ ಬುಡಕಟ್ಟು ಜನರ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆಗಾಗಿ ಒಂದು ಸಂಚಾರಿ ಆರೋಗ್ಯ ಘಟಕ ಇದ್ದು ಇದರಲ್ಲಿ ಒಬ್ಬ ವೈದ್ಯ, ಒಬ್ಬ ನರ್ಸು ಹಾಗೂ ಇತರ ಸಿಬ್ಬಂದಿ ಇರುತ್ತಾರೆ. ಈ ಘಟಕ ಪ್ರತಿಗ್ರಾಮಕ್ಕೆ ಭೇಟಿ ನೀಡಿ ಈ ಜನರ ರೋಗ ರುಜಿನಗಳ ಬಗ್ಗೆ ತಪಾಸಣೆ ನಡೆಸಿ ಚಿಕಿತ್ಸೆ ನೀಡುತ್ತಿದೆ. ಅಲ್ಲದೆ, ಈ ಇಲಾಖೆ ಜಮೀನಿನ ತಕರಾರುಗಳನ್ನು ಬಗೆಹರಿಸಲು ಬೇಕಾದ ವೆಚ್ಚವನ್ನು ಮತ್ತು ಸಲಹೆ–ಸಹಕಾರಗಳನ್ನು ಸಂಬಂಧಪಟ್ಟವರಿಗೆ ನೀಡುತ್ತದೆ. ಮಕ್ಕಳ ಕಲ್ಯಾಣ ಕೇಂದ್ರಗಳು ಕಾನೂನು ಶಿಬಿರ ನಡೆಸಿ ಜನರಿಗೆ ಕಾನೂನು ತಿಳುವಳಿಕೆ ನೀಡುತ್ತಿವೆ.

**ಜೀವನಾವರ್ತ ಸಂಪ್ರದಾಯಗಳು**

**ಜನನ :** ಮೊದಲ ಹೆರಿಗೆ ತವರು ಮನೆಯಲ್ಲಿ ನಡೆಯುತ್ತದೆ. ಹುಟ್ಟಿದ ಮಗುವನ್ನು ಮೊರದಲ್ಲಿ ಮಲಗಿಸುವುದು ಇಂದಿಗೂ ರೂಢಿಯಲ್ಲಿರುವ ಸಂಪ್ರದಾಯ. ಹೆರಿಗೆ ಆದ ಅನಂತರ ತಾಯಿಗೆ ಸ್ನಾನ ಮಾಡಿಸಿ ಹೊಟ್ಟೆಕಟ್ಟುತ್ತಾರೆ. ಆನಂತರ ಎರಡು ಮೂರು ದಿನಗಳವರೆಗೆ ಮಗುವಿಗೆ ತಾಯಿ ಎದೆ ಹಾಲನ್ನು ಕುಡಿಸುವುದಿಲ್ಲ. ಬದಲಾಗಿ ಹರಳೆಣ್ಣೆಯನ್ನು ಬಾಯಿಗೆ ಊಡಿ, ಈಗಾಗಲೇ ಹಾಲುಣಿಸುತ್ತಿರುವ ತಾಯಿಯಿಂದ ಹಾಲು ಪಡೆದು ಕುಡಿಸುತ್ತಾರೆ. ಆದರೆ ಇತ್ತೀಚೆಗೆ ಈ ಪದ್ಧತಿ ಬದಲಾಗಿ ತಾಯಿ ಹಾಲನ್ನೇ ಕೊಡುವುದು ರೂಢಿಗೆ ಬರುತ್ತಿದೆ. ಆನಂತರ ಬಾಣಂತಿಯನ್ನು ಬೆಚ್ಚಗಿನ ಕೋಣೆಯಲ್ಲಿ ಶೀತವಾಗದ ರೀತಿಯಲ್ಲಿ ಮಲಗಿಸುತ್ತಾರೆ.

ಮಗುವು ಜನಿಸಿದ ಮೂರು, ಒಂಬತ್ತು ಅಥವಾ ಹನ್ನೆರಡನೇ ದಿನಕ್ಕೆ ಸೂತಕ ಕಳೆಯುತ್ತಾರೆ. ಆ ಸಮಯದಲ್ಲಿ ಮನೆಯ ಕಸ, ದುಂಬು, ಧೂಳು ಹೊಡೆದು, ಸುಣ್ಣ ಬಣ್ಣವನ್ನು ಬಳಿದು ಮನೆಯನ್ನು ತೊಳೆದು ದೇವತಾಕಾರ್ಯಗಳನ್ನು ಮಾಡುತ್ತಾರೆ. ಆ ದಿನ ಸೂಲಗಿತ್ತಿಗೆ ಎಲೆ, ಅಡಿಕೆ, ಹಣ್ಣು, ಹಣವನ್ನು ನೀಡಿ ಗೌರವದಿಂದ ಕಳುಹಿಸಿಕೊಡುತ್ತಾರೆ.

**ಗುಣಿ ಮುಚ್ಚುವುದು :** ಸೂತಕವನ್ನು ಕಳೆಯುವ ದಿನದಂದು ಮನೆಯ ಹಜಾರದ ಮಧ್ಯಭಾಗದಲ್ಲಿ ಸಗಣಿಯಿಂದ ಸಾರಿಸಿ ರಂಗೋಲಿಯಿಂದ ಶೃಂಗರಿಸಿ ಗೊಬ್ಬಳಿ ಮರದಿಂದ ಹಿಡಿದು ತಂದ ಒಂದು ಹಾತೇಹುಳದ ಜಾತಿಗೆ ಸೇರಿದ (ಅಥವಾ ಮನೆಗಳಲ್ಲಿರುವ ಜಿರಲೆ) ಒಂದು ಹುಳುವನ್ನು ಅಲ್ಲಿ ಪೂಜೆ ಮಾಡಿ ಅನಂತರ ಒಂದು ಗುಳಿ ಮಾಡಿ ಆ ಹುಳುವನ್ನು ಅದರಲ್ಲಿ ಹಾಕಿ ಮುಚ್ಚುತ್ತಾರೆ. ಬಳಿಕ ಅಲ್ಲಿದ್ದವರಿಗೆಲ್ಲ ಸಿಹಿಯನ್ನು ಹಂಚುತ್ತಾರೆ. ಇದಕ್ಕೆ ಗುಣಿ ಮುಚ್ಚುವುದು ಎಂದು ಕರೆಯುತ್ತಾರೆ.

**ನಾಮಕರಣ :** ಮಗುವು ಹುಟ್ಟಿದ ಇಪ್ಪತ್ತೇಳನೇ ದಿನ ಅಥವಾ ಎರಡು ತಿಂಗಳಿಗೆ ನಾಮಕರಣ ಮಾಡುವ ಸಂಪ್ರದಾಯ ಇತ್ತು. ಆದರೆ ಕೆಲವರು ಮಗು–ಬಾಣಂತಿಯನ್ನು

ಗಂಡನ ಮನೆಗೆ ಕಳುಹಿಸುವ ಸಂದರ್ಭದಲ್ಲಿಯೇ ಎರಡೂ ಆಚರಣೆಗಳನ್ನು ಇಂದು ರೂಢಿಸಿಕೊಂಡಿದ್ದಾರೆ. ಇದು ಚೊಚ್ಚಲ ಹೆರಿಗೆಯಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ಹೆಸರಿಡುವ ದಿನದಂದು ಗಂಡನ ಮನೆಯವರು ಐದು ಅಥವಾ ಒಂಭತ್ತು ಜನ ಮುತ್ತೈದೆಯರೊಂದಿಗೆ ಐದು ದೊಡ್ಡಚ್ಚು ಬೆಲ್ಲ, ಐದು ಕಟ್ಟು ವೀಳ್ಯೇದೆಲೆ, ಅಡಕೆ, ಮಗುವಿಗೆ ಅಂಗಿ, ಚಿನ್ನದ ಉಂಗುರ, ಬೆಳ್ಳಿ ಉಡುದಾರ, ಟೋಪಿ, ಕಾಲುಚೀಲ ಇತ್ಯಾದಿಗಳನ್ನು ತರುತ್ತಾರೆ. ಈ ಉಡುಗೆ ತೊಡುಗೆಗಳಿಂದ ಮಗುವನ್ನು ಶೃಂಗರಿಸಿ ಅಲಂಕಾರ ಮಾಡಿದ ತೊಟ್ಟಿಲಲ್ಲಿ ಮಲಗಿಸುತ್ತಾರೆ. ಅನಂತರ ಮಗುವಿನ ಬಾಯಿಗೆ ಬಜೆ ಬೆಣ್ಣೆಯನ್ನು ಊಡಿ ತಂದೆಯ ಮನೆದೇವರ ಹೆಸರನ್ನು ಕಿವಿಯಲ್ಲಿ ಹೇಳಲಾಗುತ್ತದೆ. ಬಳಿಕ ತಮಗೆ ಇಷ್ಟಬಂದ ಹೆಸರನ್ನು ಇಡುತ್ತಾರೆ. ಇವೆಲ್ಲಕ್ಕೂ ಮುಂಚಿತವಾಗಿ ಜೋಯಿಸರ ಬಳಿ ಹೋಗಿ ಒಳ್ಳೆಯದಿನ ಮತ್ತು ಮಗುವಿಗೆ ಹೆಸರಿಡಲು ಮೊದಲ ಅಕ್ಷರ ಯಾವುದಿರಬೇಕು ಇತ್ಯಾದಿ ವಿಚಾರಗಳನ್ನು ತಿಳಿದುಕೊಂಡು ಬರುವುದು ರೂಢಿಯಲ್ಲಿದೆ.

**ಕಿವಿ ಚುಚ್ಚುವುದು** : ಮಗುವಿಗೆ ಐದು ಅಥವಾ ಒಂಭತ್ತು ತಿಂಗಳಾದಾಗ ಕಿವಿ ಚುಚ್ಚಿಸುವುದು ರೂಢಿ. ಹಳ್ಳಿಗಳಲ್ಲಿ ಚಿನ್ನಾಚಾರಿಗಳಿದ್ದರೆ ಅಥವಾ ಅವರು ಇರುವಲ್ಲಿಗೆ ಹೋಗಿ ಅವರಿಂದ ಮಗುವಿಗೆ ಕಿವಿ ಚುಚ್ಚಿಸುತ್ತಾರೆ. ಹಳ್ಳಿಗಳಲ್ಲಿ ಕೆಲವು ಹೆಂಗಸರೂ ಈ ಕೆಲಸ ಮಾಡುವುದುಂಟು. ಕಿವಿ ಚುಚ್ಚಿದವರಿಗೆ ಎಲೆ, ಅಡಕೆ, ಹಣ್ಣು, ಕಾಣಿಕೆ ಜೊತೆಗೆ ಸಿಹಿಯನ್ನು ಕೊಡಲಾಗುತ್ತದೆ.

**ಮನೆ ವೈದ್ಯ** : ಮಗುವಿಗೆ ಅಜೀರ್ಣವೇನಾದರೂ ಆದರೆ, ವೀಳ್ಯದೆಲೆಗೆ ಹರಳೆಣ್ಣೆಯನ್ನು ಹಚ್ಚಿ, ಉರಿಯುವ ಹರಳೆಣ್ಣೆ ದೀಪದ ಮೇಲೆ ಉಗುರು ಬೆಚ್ಚಗೆ ಕಾಯಿಸಿ ಅದನ್ನು ಮಗುವಿನ ಹೊಟ್ಟೆಯ ಮೇಲೆ ಅಂಟಿಸುತ್ತಾರೆ. ದೃಷ್ಟಿತೆಗೆಯುವುದು ಹಾಗೂ ಆಸ್ರ ತೆಗೆಯುವುದು ರೂಢಿ. ಅಂದರೆ ಸ್ವಲ್ಪ ನೀರಿನೊಂದಿಗೆ ಅರಿಸಿನದ ಪುಡಿಯನ್ನು ಮಿಶ್ರಣ ಮಾಡಿ ಸ್ವಲ್ಪ ಉಪ್ಪು ಒಣ ಮೆಣಸಿನ ಕಾಯಿಯನ್ನು ನೀವಳಿಸಿ ಹಾಕಿ ಅನಂತರ ಎರಡು ಪೊರಕೆ ಕಡ್ಡಿಗಳನ್ನು ತೆಗೆದುಕೊಂಡು ದೀಪಕ್ಕೆ ಹಿಡಿದು ಹೊತ್ತಿಸಿ ಅದು ಉರಿಯುತ್ತಿರುವಾಗ ಮಗುವಿಗೆ ಮೂರು ಸಾರಿ ನೀವಳಿಸಿ ಹಾಕುತ್ತಾರೆ. ಕಡ್ಡಿಗಳು ಸುಡುವಾಗ ಚಟ ಪಟ ಶಬ್ದ ಮಾಡಿದರೆ ಮಗುವಿಗೆ ದೃಷ್ಟಿಯಾಗಿದೆ ಎಂಬ ನಂಬಿಕೆ.

**ಕಾಲುದೂಳು ಹಾಕುವುದು** : ಅಂದರೆ ಮಗುವು ಒಂದೇ ಸಮನೆ ಅಳುತ್ತಿದ್ದರೆ ಅದಕ್ಕೆ ಹೊಟ್ಟೆ ನೋಯುತ್ತಿರಬಹುದು ಎಂದು ಒಂದು ತಟ್ಟೆಯಲ್ಲಿ ಸ್ವಲ್ಪ ನೀರನ್ನು ತೆಗೆದುಕೊಂಡು ಅದಕ್ಕೆ ಸಗಣಿಯನ್ನು ಕಲೆಸುತ್ತಾರೆ. ಒಂದು ಲೋಟಕ್ಕೆ ಮೂರು ಬಟ್ಟೆಯ ಚೂರುಗಳನ್ನು ಬೆಂಕಿಯಲ್ಲಿ ಹೊತ್ತಿಸಿ ಹಾಕಿ, ಅದನ್ನು ಮಗುವಿಗೆ ನೀವಳಿಸಿ ಅನಂತರ ತಟ್ಟೆಗೆ ಬೋರಲಾಗಿ ಹಾಕಲಾಗುತ್ತದೆ. ಬಳಿಕ ತಟ್ಟೆಯನ್ನು ಮಗುವಿಗೆ ಮೂರುಬಾರಿ ನೀವಳಿಸಿ ಇಡುತ್ತಾರೆ. ಲೋಟವು ತಟ್ಟೆಯ ನೀರನ್ನು ಹೀರಿಕೊಳ್ಳುವಾಗ ಗುಳುಗುಳು ಶಬ್ದಮಾಡಿದರೆ ಮಗುವಿಗೆ ಕಾಲುದೂಳಾಗಿ ಹೊಟ್ಟೆ ನೋಯುತ್ತಿತ್ತು ಎಂಬ ನಂಬಿಕೆ. ಈ ರೀತಿಯ ಮನೆಮದ್ದುಗಳು ಹಲವಾರು ಇವೆ.

**ವಿವಾಹ :** ಮದುವೆ ಎಂಬುದು ವ್ಯಕ್ತಿಯ ಜೀವನದಲ್ಲಿ ಬಹುಮುಖ್ಯ ಘಟ್ಟ.. ವಿವಾಹಕ್ಕೆ ಸಂಬಂಧಿಸಿದಂತೆ ತಾಲೂಕಿನಲ್ಲಿ ಅನೇಕ ಆಚಾರ ಸಂಪ್ರದಾಯುಗಳನ್ನು ರೂಢಿಸಿಕೊಂಡಿದ್ದಾರೆ. ಹೆಣ್ಣು ನೋಡುವುದು ಅಥವಾ ಒಪ್ಪೀಳ್ಯ, ಲಗ್ನ ಕಟ್ಟಿಸುವುದು, ಮೂರ್ತದ ಕಂಬ ನೆಟ್ಟು ಚಪ್ಪರ ಹಾಕುವುದು, ದೇವತಾಕಾರ್ಯ, ಅರಣೆ ಪೂಜೆ ಮೊದಲಾದ ಶಾಸ್ತ್ರಗಳು ಸಾಂಪ್ರದಾಯಿಕವಾಗಿ ನಡೆಯುತ್ತವೆ.

**ಶವಸಂಸ್ಕಾರ :** ವ್ಯಕ್ತಿಯು ಕೊನೆಯುಸಿರೆಳೆಯುವ ಘಳಿಗೆ ಸಮೀಪಿಸಿತು ಎಂದು ತಿಳಿದಾಕ್ಷಣ ಮನೆಯಿಂದ ಹೊರಗೆ ಹಿಡಿಯುತ್ತಾರೆ. ನಿಧನರಾದ ತಕ್ಷಣ ಕಾಲುಗಳನ್ನು ಮಡಿಸಿ, ಎದೆಯ ಮೇ ಲೆ ಕೈಗಳನ್ನು ಇಡುತ್ತಾರೆ. ತಟ್ಟೆಯಲ್ಲಿ ಅಕ್ಕಿ, ಬೆಲ್ಲ, ಕುಡ್ಲುಗಳನ್ನು ಇಟ್ಟು, ಎದೆಯ ಮೇಲೆ ಇಡುತ್ತಾರೆ. ತಲೆಯ ಹಿಂಬದಿಯಲ್ಲಿ (ಪಕ್ಕದಲ್ಲಿ) ದೀಪವನ್ನು ಹಚ್ಚಿ ಇಡುತ್ತಾರೆ. ಮನೆಯ ಮುಂದೆ ಎರಡು ಮೂರು ಸೌದೆ ಕೊಂಟುಗಳಿಗೆ ಬೆಂಕಿ ಹಾಕುತ್ತಾರೆ.

ಎಲ್ಲರೂ ಬಂದ ಮೇಲೆ ಶವಕ್ಕೆ ಸ್ನಾನ ಮಾಡಿಸುತ್ತಾರೆ. ಸ್ನಾನದ ನಂತರ ಹಂಡೆಯನ್ನು ಬೋರಲಾಗಿ ಇಡುತ್ತಾರೆ. ಸತ್ತ ವ್ಯಕ್ತಿ ಗಂಡಸಾಗಿದ್ದು ಹೆಂಡತಿ ಬದುಕಿದ್ದರೆ, ತವರಿನವರು ಹೊಸ ಸೀರೆ, ಹೂವು, ಬಳೆ ಇತ್ಯಾದಿ ತಂದು, ಆಕೆಗೆ ತೊಡಿಸುತ್ತಾರೆ. ಗಂಡ ಬದುಕಿದ್ದರೆ ಆತನಿಗೂ ಹೊಸ ಬಟ್ಟೆ ಧರಿಸಿ ಶಾಸ್ತ್ರ ಮಾಡಿಸುತ್ತಾರೆ. ಶವದ ಹಣೆಗೆ ಕಾಸನ್ನು ಅಂಟಿಸುವುದು, ಚಟ್ಟದ ನಾಲ್ಕು ಮೂಲೆಗೂ ಎಳನೀರು ಕಟ್ಟುವುದು ಈ ಭಾಗದಲ್ಲಿ ಕಾಣಬರುತ್ತದೆ.

ಸತ್ತ ವ್ಯಕ್ತಿಯು ಅವಿವಾಹಿತನಾಗಿದ್ದರೆ ಒಂಟಿ ಬಡಿಯಲ್ಲಿ(ಇಬ್ಬರು) ಆತನನ್ನು ಹೊತ್ತುಕೊಂಡು ಹೋಗುತ್ತಾರೆ. ವಿವಾಹಿತರು ಸತ್ತರೆ ಶವವನ್ನು ಜೋಡಿಬಡಿಯಲ್ಲಿ ನಾಲ್ಕು ಜನ ಹೊತ್ತೊಯ್ಯುತ್ತಾರೆ. ಉಳ್ಳವರು ಕುರುಜಿನಲ್ಲಿ ವೈಭವದಿಂದ ಹೊತ್ತೊಯ್ಯುತ್ತಾರೆ. ಗುಂಡಿಯ ಬಳಿ ಹೆಣದ ಬಟ್ಟೆಯನ್ನೆಲ್ಲಾ ಬಿಚ್ಚಿ ಬಿಳಿಯ ಬಟ್ಟೆಯನ್ನು ಸುತ್ತಲಾಗುತ್ತದೆ. ಸತ್ತವನು ತಂದೆಯಾದರೆ ಹಿರಿಯ ಮಗನೂ, ತಾಯಿಯಾದರೆ ಕಿರಿಯ ಮಗನೂ ಕೆಂಡವನ್ನು ತುಂಬಿದ ಮಡಕೆ ಹಿಡಿದು ಮುಂದೆ ಸಾಗುತ್ತಾರೆ.

ಬಳಿಕ ಗುಂಡಿಯಲ್ಲಿ ಉತ್ತರಕ್ಕೆ ತಲೆ ಮಾಡಿ ಮಲಗಿಸುತ್ತಾರೆ. ಅನಂತರ ಮುಖದ ಮೇಲೆ ಬಾಳೆ ಎಲೆ ಮುಚ್ಚಿ ಮೇಲೆ ಉಪ್ಪು ಸುರಿದು, ಮಣ್ಣನ್ನು ಹಾಕುತ್ತಾರೆ. ಗುದ್ದದ ಮೇಲೆ ತುಳಸೀ ಅಥವಾ ತುಂಬೆ ಗಿಡ ನೆಟ್ಟು ನೀರು ಹುಯ್ಯುತ್ತಾರೆ. ಶವಸಂಸ್ಕಾರದ ಅನಂತರ ಹೋದ ದಾರಿಯಲ್ಲಿ ಮತ್ತೆ ಬರುವ ಹಾಗಿಲ್ಲ. ಹಾದಿ ತಪ್ಪಿಸಿಬರಬೇಕು. ಅನಂತರ ಎಲ್ಲರೂ ನೀರಿನ ಬಳಿಹೋಗಿ ನೀರನ್ನು ಮುಟ್ಟಿ ಬರಬೇಕು (ತಮ್ಮ ಮೈ ಮೇಲೆ ಸಗಣಿ ನೀರನ್ನು ಪ್ರೋಕ್ಷಣೆ ಮಾಡಿಕೊಳ್ಳುತ್ತಾರೆ). ಹೀಗೆ ಬಂದನಂತರ ಸಾವಿನ ಮನೆಯಲ್ಲಿ ಉರಿಯುತ್ತಿರುವ ದೀಪ ನೋಡಿ ಪಕ್ಕದಲ್ಲಿರುವ ಮೊರದಿಂದ ಒಂದು ಹಿಡಿ ಅಕ್ಕಿಯನ್ನು ಬೊಗಸೆಯಲ್ಲಿಟ್ಟುಕೊಂಡು ಮನೆಗೆ ಮುಮ್ಮುಖವಾಗಿ ನಿಂತು

ಅಕ್ಕಿಯನ್ನು ಹಿಮ್ಮುಖವಾಗಿ ಮನೆಯೊಳಕ್ಕೆ ಎರಚುತ್ತಾರೆ. ಆನಂತರ ತಮ್ಮ ತಮ್ಮ ಊರುಗಳಿಗೆ ಹೋಗುತ್ತಾರೆ.

ಇದಾದ ೧೧ ದಿನಕ್ಕೆ ತಿಥಿ. ಏತನ್ಮಧ್ಯೆ ಮನೆಯ ಧೂಳು ತೆಗೆದು, ಸುಣ್ಣ ಬಣ್ಣ ಬಳಿಯುತ್ತಾರೆ. ಆನಂತರ ೧೧ನೇ ದಿನ ತಾಯಿಯಾದರೆ ಕಿರಿಯಮಗ, ತಂದೆಯಾದರೆ ಹಿರಿಯ ಮಗ, ಸಹೋದರನಿಗೆ ಸಹೋದರ ತಲೆಬೋಳಿಸಿಕೊಳ್ಳುತ್ತಾರೆ. ಗುದ್ದದ ಬಳಿ ಹಾಲು ತುಪ್ಪ ಬಿಟ್ಟು ಎಡೆ ಇಟ್ಟು ಪೂಜಿಸಿ, ಕಾಗೆಗಳು ಬಂದು ತಿಂದ ಬಳಿಕ ಮನೆಗೆ ಹಿಂದಿರುಗುತ್ತಾರೆ. ಕೆಟ್ಟಗಳಿಗೆಯಲ್ಲಿ ಸತ್ತರೆ ಮನೆ ಬಿಡುವುದು, ಗೂಡು ಹಾಕಿಸುವುದು ಇತ್ಯಾದಿ ಸಂಪ್ರದಾಯಗಳಿವೆ. ಗೂಡು ಹಾಕಿಸುವುದೆಂದರೆ ಸತ್ತ ಜಾಗದಲ್ಲಿ ಇಟ್ಟಿಗೆ ಮಣ್ಣಿನಿಂದ ಗೂಡಿನ ರೀತಿ ಕಟ್ಟಿ ಅದರ ಒಳಗೆ ತಿಥಿಯ ದಿನ ಮಾಡಿದ ಎಲ್ಲ ತಿಂಡಿಯನ್ನು ಇಟ್ಟು ಒಂದು ದೀಪವನ್ನು ಹಚ್ಚಿ ಇಡುತ್ತಾರೆ. ಆನಂತರ ಜೋಯಿಸರು ಹೇಳಿದ ದಿನ ಗೂಡನ್ನು ಕೀಳುತ್ತಾರೆ. ಹಾಗೂ ಮತ್ತೆ ಮನೆಗೆ ಬಂದು ದುಂಬು ತೆಗೆದು, ತೊಳೆದು ಪೂಜೆಮಾಡಿ ಯಥಾಪ್ರಕಾರ ಮನೆಯಲ್ಲಿರುತ್ತಾರೆ.

**ಕಲ್‌ಸೇವೆ ಅಥವಾ ಬಯಲು ಸಮಾಧಿ :** ಗರ್ಭಿಣಿ ಅಥವಾ ಬಾಣಂತಿ ಸತ್ತರೆ ಅವಳನ್ನು ಹೂತರೆ ಮಳೆ ಬರುವುದಿಲ್ಲ ಎಂಬ ನಂಬಿಕೆ ಕೆಲವು ಕಡೆ ಇದೆ. ಆ ದೇಹವನ್ನು ನಾಯಿ, ನರಿ, ಹದ್ದು, ಕಾಗೆಗಳಿಗೆ ದಾನ ಮಾಡಿದರೆ ಗರ್ಭಿಣಿಗೆ ಪುನರ್ಜನ್ಮ ಪ್ರಾಪ್ತವಾಗುತ್ತದೆ ಎಂಬ ನಂಬಿಕೆಯಿಂದ ಬಯಲು ಸಮಾಧಿ ಅಥವಾ ಕಲ್‌ಸೇವೆ ಮಾಡುವುದು ಪದ್ಧತಿಯಾಗಿದ್ದಿತು. ಈಚೆಗೆ ಗರ್ಭಿಣಿಯ ಶವವನ್ನು ಸುಟ್ಟು ಬಿಡುತ್ತಾರೆ. ಸ್ಮಶಾನಕ್ಕೆ ತಂದ ಗರ್ಭಿಣಿ ಶವದ ಹೊಟ್ಟೆಯನ್ನು ಅಥವಾ ಹೊಟ್ಟೆಯ ಮೇಲೆ ಒಂದು ಮೊನೆ ಬಾಳೆ ಎಲೆಯನ್ನು ಹಾಸಿ ಅದನ್ನು ಗಂಡನ ಕೈಯಿಂದ ಸೀಳಿಸುತ್ತಾರೆ. ಸೀಳಿದ ಗಂಡ ಹೆಣಕ್ಕೆ ಬೆಂಕಿ ತೋರಿಸಿದ ಕೂಡಲೆ ಹಿಂದಿರುಗಿ ನೋಡದೆ ಊರ ಕಡೆಗೆ ನಡೆದು ಏಳು ದೇವರ ಗುಡಿಗಳನ್ನು ಪ್ರವೇಶ ಮಾಡಿ, ಆನಂತರ ಮನೆಗೆ ಬರಬೇಕು. ವಿದುರನಾದವ, ಹೆಂಡತಿ ಸತ್ತ ವರ್ಷದ ಯುಗಾದಿ ಹೊತ್ತಿಗೆ ಮರು ಮದುವೆ ಮಾಡಿಕೊಳ್ಳಬೇಕು. ಇಲ್ಲವಾದರೆ ಹೆಂಡತಿ ಸತ್ತು ಮೂರು ವರ್ಷಗಳವರೆಗೂ ಅವನು ಮದುವೆಯಾಗುವಂತಿಲ್ಲ. ಬಸುರಿಯ ಶವವನ್ನು ಸುಡದೆ ಕಲ್‌ಸೇವೆ ಮಾಡುವ ಸಂಪ್ರದಾಯವಿದ್ದಿತು. ಗರ್ಭಿಣಿಯ ಶವವನ್ನು ಕಾಡಿನ ಮಧ್ಯೆ ಕೂರಿಸಿ, ಶವದ ಸುತ್ತ ಕಲ್ಲುಗಳನ್ನಿಟ್ಟು ಬರುತ್ತಾರೆ. ಕಾಗೆ, ನಾಯಿ, ನರಿ ಹದ್ದುಗಳಿಗೆ ಆ ಗರ್ಭಿಣಿ ತನ್ನ ದೇಹವನ್ನು ದಾನ ಮಾಡಿಕೊಳ್ಳುವುದರಿಂದ ಅವಳು ದೆವ್ವವಾಗುವುದಿಲ್ಲ, ಅವಳಿಗೆ ಪರಲೋಕ ಪ್ರಾಪ್ತಿಯಾಗುತ್ತದೆ ಎಂದು ನಂಬುತ್ತಾರೆ. ತಾಲೂಕಿನ ಜನರ ಜೀವನದಲ್ಲಿ ಈ ರೀತಿ ಹುಟ್ಟಿನಿಂದ ಸಾಯುವ ತನಕ ಅನೇಕ ರೀತಿಯ ಸಂಪ್ರದಾಯಗಳನ್ನು ಗುರ್ತಿಸಬಹುದಾಗಿದೆ.

**ಆಹಾರ ಪದ್ಧತಿ**

ಪಿರಿಯಾಪಟ್ಟಣವು ಕೊಡಗಿನ ಗಡಿಗೆ ಅಂಟಿಕೊಂಡಂತಿರುವುದರಿಂದ ಕೊಡಗು ಹಾಗೂ ಬಯಲು ಸೀಮೆಗಳೆರಡರ ಆಹಾರ ಪದ್ಧತಿಯನ್ನೂ ಇಲ್ಲಿ ರೂಢಿಸಿಕೊಂಡು ಬರಲಾಗಿದೆ. ಮಾದರಿಗಾಗಿ ಕೊಡಗು ಗಡಿಯ ಅಡಿಗೆಗಳ ಒಂದು ಪಕ್ಷಿನೋಟವನ್ನು ಇಲ್ಲಿ ಕೊಡಲಾಗಿದೆ.

**ಮುದ್ದೆ (ಹಿಟ್ಟು) :** ಇಲ್ಲಿನವರ ಆಹಾರ ಮುದ್ದೆ. ಇದನ್ನು ರಾಗಿ, ಅಕ್ಕಿ, ಗೋಧಿ, ಜೋಳ, ಮುಸಕಿನ ಜೋಳ ಮುಂತಾದ ಧಾನ್ಯಗಳಿಂದ ತಯಾರಿಸುತ್ತಾರೆ. ಕೆಲವು ಸಾರಿ ತಂಗಳಿಟ್ಟಿಗೆ ಉಪ್ಪೆಸರಿನ ಕಾರಹಾಕಿ ಅಥವಾ ಮೆಣಸು, ಬೆಳ್ಳುಳ್ಳಿ ಉಪ್ಪು ಹಾಕಿ ಮಾಡಿದ ಮಿದ್ದಿಟ್ಟನ್ನು ಯಾವುದೇ ಸಾರಿಲ್ಲದೆ ತಿನ್ನಬಹುದು.

**ಅನ್ನ :** ಅನ್ನ ಅನುಕೂಲವಂತರ ದಿನ ಬಳಕೆಯ ಆಹಾರ. ನಮ್ಮ ಗ್ರಾಮೀಣರು ಮುದ್ದೆಯ ಜೊತೆಗೆ ಸ್ವಲ್ಪ ಪ್ರಮಾಣದ ಅನ್ನವನ್ನು ಊಟಮಾಡುತ್ತಾರೆ. ಬೆಲ್ಲದನ್ನ, ಕಿಚಡಿಯನ್ನ, ತುಪ್ಪದನ್ನಗಳನ್ನು ಹಬ್ಬಹರಿದಿನಗಳಲ್ಲಿ ಹಾಗೂ ನೆಂಟರಿಷ್ಟರು ಬಂದಾಗ ಮಾಡುತ್ತಾರೆ. 'ಪೊಂಗಲು' ಎಂದು ಹೇಳುವ ಬೆಲ್ಲದನ್ನ ಮತ್ತು ಕಿಚಡಿ ಅನ್ನವನ್ನು ಕೆಲವರು ಸಂಕ್ರಾಂತಿ ಹಬ್ಬದಲ್ಲಿ, ಕೆಲವರು ದೀಪಾವಳಿ ಹಬ್ಬದಲ್ಲಿ ವಿಶೇಷವಾಗಿ ಮಾಡುತ್ತಾರೆ. ನವಣಕ್ಕಿಯಿಂದಲೂ ಅನ್ನ ಮಾಡುತ್ತಾರೆ. ಇತ್ತೀಚೆಗೆ ಇದು ಅಪರೂಪವಾಗಿದೆ. ಮುದ್ದೆ ಹಾಗೂ ಅನ್ನಕ್ಕೆ ಉಪ್ಪೆಸರು, ಹುಳಿಎಸರು ಮೊದಲಾದ ಸಾರನ್ನು ಬಳಸುತ್ತಾರೆ.

**ಎಸರು :** ಹುಳ್ಳಿಕಾಳು, ಅವರೆಕಾಳು, ತಡ್ನಿಕಾಳು, ಹಸಿರುಕಾಳು, ಹಸಿಅವರೆ ಕಾಳುಗಳಿಂದ ಮತ್ತು ಕಡಲೆಕಾಳು ಸೊಪ್ಪು, ಕನ್ನೆಸೊಪ್ಪು, ಅಣ್ಣೆಸೊಪ್ಪು, ಮುಳ್‌ಗೀರೆಸೊಪ್ಪು, ಸೀಗೆಸೊಪ್ಪು, ನುಗ್ಗೆಸೊಪ್ಪು, ಅರಿವೆಸೊಪ್ಪು, ಬೆರಕೆ ಸೊಪ್ಪು, ಹೊನಗೊನೆಸೊಪ್ಪುಗಳಿಂದ ಉಪ್ಪೆಸರು, ಮತ್ತು ಬದನೆಕಾಯಿ, ಈರೆಕಾಯಿ, ಕೋಸು, ತುಪ್ಪೀರೆಕಾಯಿ ಮೊದಲಾದವುಗಳಿಂದ ಹುಳಿ ಮಾಡುತ್ತಾರೆ.

ಅವರೆಕಾಳಿನ ಪರ್ಪು, ಚಿತಕವರೆ ಎಸರು, ಬಾಳೆದಿಂಡಿನ ಎಸರು, ಕರಳೆ ಎಸರು, ಬಸ್ಸಾರು, ಹುರಳಿಕಟ್ಟಿನೆಸರು, ಮೊಳೆಹುಳ್ಳಿಎಸರು, ಕಡ್ಲೆಕಾಳುಸಾರು, ಮಸ್ಸೊಪ್ಪುನೆಸರು, ಮೆಣಸಿನಸಾರು, ಅಣಬೆಸಾರು, ಕಾಯಿನೆಸರು, ಹುಣಸೇಹೂವಿನೆಸರು, ನುಗ್ಗೆಕಾಯಿನೆಸರು, ಹುರುದವರೆಸಾರು, ಕಟ್ಟಿನಸಾರು (ಕಡ್ಲೆಬೇಳೆ, ತೊಗರಿಬೇಳೆ) ಹೀಗೆ ವಿಧವಿಧವಾದ ಹುಳಿ–ಸಾರುಗಳನ್ನು ಮಾಡುತ್ತಾರೆ.

**ರೊಟ್ಟಿ :** ರಾಗಿ, ಅಕ್ಕಿ, ಜೋಳ, ಗೋಧಿ ಇತ್ಯಾದಿಗಳಿಂದ ರಾಗಿರೊಟ್ಟಿ, ಅಕ್ಕಿರೊಟ್ಟಿ, ಗೋಧಿರೊಟ್ಟಿ, ಮಸಾಲೆರೊಟ್ಟಿ, ಕಾಯಿರೊಟ್ಟಿ, ಜೋಳದರೊಟ್ಟಿ, ರವೆರೊಟ್ಟಿ, ಕೆಂಡದಲ್ಲಿ ಬೇಯಿಸಿದ ರೊಟ್ಟಿ, ಮಡಕೆರೊಟ್ಟಿ ಮೊದಲಾದವನ್ನು ಮಾಡಲಾಗುತ್ತದೆ. ಇವಲ್ಲದೆ ದೋಸೆ, ಕಡುಬು (ಇಡ್ಲಿ), ಉಪ್ಪಿಟ್ಟು, ಸಜ್ಜಿಗೆ ಮತ್ತಿತರ ತಿಂಡಿಗಳೂ ಬಳಕೆಯಲ್ಲಿವೆ.

**ತಾಳ್ದ, ಪಲ್ಯ, ಗೊಜ್ಜು :** ತರಕಾರಿ, ಕಾಳು, ಸೊಪ್ಪುಗಳಿಂದ ನಾನಾ ಬಗೆಯ ತಾಳ್ದ, ಪಲ್ಯ, ಗೊಜ್ಜುಗಳನ್ನು ಮಾಡುತ್ತಾರೆ. ಹಲಸಿನಕಾಯಿ, ಬಾಳೆಕಾಯಿ, ಬಾಳೆದಿಂಡು, ಬಿದಿರುಕಳಲೆ, ಸೋರೆಕಾಯಿ, ಕುಂಬಳಕಾಯಿಗಳಿಂದ ಮಾಡುವ ತಾಳ್ದ, ಬದನೆಕಾಯಿ ಎಣ್ಗಾಯಿ, ಕುಂಬಳಕಾಯಿಗಸಿ, ಹಾಗಲಕಾಯಿ, ಆಲೂಗೆಡ್ಡೆ, ಘಟ್ಟದಹುರಳಿ, ಹೊನ್ನಗನ್ನೆಸೊಪ್ಪು, ಸಾಸುವೆ ಕುಡಿ, ಕೆಸುವಿನದಂಟು, ಬಾಳೆಕಾಯಿ, ಸುವರ್ಣಗೆಡ್ಡೆ, ತೊಂಡೆಕಾಯಿ, ಗಣಕೆ ಸೊಪ್ಪು, ಪಡವಲಕಾಯಿ, ಚಪ್ಪರದವರೆ ಪಲ್ಯ, ಸೀಮೆಬದನೆಕಾಯಿ ಗೊಜ್ಜು, ಬಸ್ಲೆಸೊಪ್ಪು ಹಾಗೂ ಸಪ್ಸೀಗೆಸೊಪ್ಪಿನಿಂದ ಮಾಡುವ ಪಲ್ಯ ಉಲ್ಲೇಖಾರ್ಹ. ಕೆಲವು ತಾಳ್ದ–ಪಲ್ಯ, ಗೊಜ್ಜುಗಳನ್ನು ಮದುವೆ, ಹಬ್ಬ–ಹರಿದಿನಗಳಲ್ಲಿ ಮಾತ್ರ ಮಾಡುತ್ತಾರೆ. ಕೆಲವು ಪಲ್ಯಗಳಲ್ಲಿ ವೈದ್ಯಕೀಯ ಗುಣಗಳಿವೆ. ಅಂತಹವುಗಳನ್ನು ವರ್ಷಕ್ಕೆ ಒಮ್ಮೆಯಾದರೂ ತಿನ್ನಬೇಕೆನ್ನುತ್ತಾರೆ. ಬಾಳೆದಿಂಡಿನ ಪಲ್ಯವನ್ನು ತಿನ್ನುವುದರಿಂದ ಆಹಾರದ ಜೊತೆ ಶರೀರದಲ್ಲಿ ಸೇರಿರುವ ಕೂದಲು, ಕಲ್ಲನ್ನು ಹೊರಹಾಕುವುದು, ಕೈ ಮಸ್ಕೆಯನ್ನು ಕರಗಿಸುವುದು. ಆದ್ದರಿಂದ ಬಾಳೆದಿಂಡನ್ನು ವರ್ಷಕ್ಕೊಮ್ಮೆಯಾದರೂ ತಿನ್ನಬೇಕೆಂಬ ನಂಬಿಕೆ ಇದೆ.

ಸಿಹಿ ತಿಂಡಿಗಳನ್ನು ದೂರದ ಪ್ರಯಾಣ ಹೋದಾಗ, ಅಥವಾ ಯಾವುದಾದರೂ ವಿಶೇಷದಿನಗಳಲ್ಲಿ ಕಜ್ಜಾಯ, ಅಪ್‌ದಿಟ್ಟು, ಚಿಕ್ಕಿನುಂಡೆ, ಒಬ್ಬಿಟ್ಟು (ಕಾಳು, ಬೇಳೆ, ಹಾಲು, ಕಾಯಿನ ಒಬ್ಬಿಟ್ಟು) ತಂಬಿಟ್ಟು (ಹಸಿ ತಂಬಿಟ್ಟು, ಹುರಿದ ತಂಬಿಟ್ಟು) ನಾಮದಲಗೆ, ಹಾಲಿನ ಗಿಣ್ಣು (ಕುಸುಗಿದ ಗಿಣ್ಣು, ಕೆದಕಲು ಗಿಣ್ಣು), ಕರ್ಜಿಕಾಯಿ, ಬೂಂದಿ, ಲಾಡು, ಸೀರೊಟ್ಟಿ, ಎಳ್‌ಸೂಸ್ಲು, ಕಾಯಾಲು, ಪಾಯಸ (ಗಸಗಸೆ ಪಾಯಸ, ಕಡ್ಲೆಬೇಳೆ ಪಾಯಸ, ಸೇವಿಗೆ ಪಾಯಸ (ಕೀರು), ಹೆಸರುಬೇಳೆ ಪಾಯಸ), ಪಂಚಾಮೃತ ಮೊದಲಾದವನ್ನು ತಯಾರಿಸಿ ತಿನ್ನುತ್ತಾರೆ.

ಕಡಲೆಕಾಳು, ಹುರುಳಿಕಾಳು, ಹಸಿರುಕಾಳು, ತಡ್ನಿಕಾಳು, ಕುಂಬ್ಳುಕಾಯಿಬೀಜ, ಹಲಸಿನ ಬೀಜ, ಉದ್ದಿನಕಾಳು, ಪುಂಡಿ ಬೀಜ, ಬತ್ತದ ಪುರಿ, ಜೋಳದ ಅವುಲು, ಕಾಚಕ್ಕಿ, ಎಳ್ಳು, ಉಚ್ಚೆಳ್ಳು ಮುಂತಾದ ಹುರಿದ ಕಾಳುಗಳನ್ನು ಬೇಕೆಂದಾಗ ತಿನ್ನುತ್ತಾರೆ. ಎಳನೀರು, ಮಜ್ಜಿಗೆ, ನಿಂಬೆಪಾನಕ ಮೊದಲಾದವುಗಳ ಜೊತೆಗೆ ಹುಣಸೇಹಣ್ಣಿನ ಪಾನಕ, ಮಿಣಕೆಹಣ್ಣಿನ ಪಾನಕಗಳನ್ನೂ, ಇಲ್ಲಿನ ಗ್ರಾಮೀಣರು ಬಳಸುತ್ತಾರೆ.

**ಮಾಂಸದ ಅಡುಗೆ :** ತಾಲೂಕಿನ ಮಾಂಸಾಹಾರಿಗಳು ಅವರವರ ಅಭ್ಯಾಸಕ್ಕೆ ತಕ್ಕಂತೆ ಆಡು, ಕುರಿ, ಎಮ್ಮೆ, ದನ, ಹಂದಿ, ಕೊತ್ತಿ, ತೋಡ, ಜಿಂಕೆ, ಮೊಲ, ಕೀರ, ಕ್ಯಾರೆಹಾವು, ಕೋಳಿ, ಬಾತುಕೋಳಿ, ಬಾವುಲಕ್ಕಿ, ಸರಳಕ್ಕಿ, ನಳ್ಳಿ, ಮೀನು, ಸೀಗಡಿ, ಮೊಟ್ಟೆ, ಆಮೆ, ನವಿಲು, ಗುಮಚಕ್ಕಿ ಲಕ್ಕುನಕ್ಕಿ (ಪಾರಿವಾಳ) ಲಕ್ಕು ಮುಂತಾದ ಪ್ರಾಣಿ ಪಕ್ಷಿಗಳ ಮಾಂಸ ಸೇವಿಸುವುದುಂಟು. ಕೋಳಿ ಬಾಡಿನಎಸರು, ಶಾವಿಗೆ ತಿಂದರೆ ಕೆಮ್ಮು ನೆಗಡಿ ಶೀತ ಉಪಶಮನವಾಗುತ್ತದೆ. ನಳ್ಳಿ ಕಷಾಯ, ಕರ್ಮೀನೆಸ್ರು 'ದಂ' ರೋಗಕ್ಕೆ, ಕೊತ್ತಿಬಾಡು, ನರಿಬಾಡು, ಕೇರೆ ಹಾವಿನ ತುಪ್ಪ ಬಾಣ್ಸನ್ನಿ ಮತ್ತು

ಕೆನ್ನೆ ಊದಿಕೊಂಡ್ರೆ ಒಳ್ಳೆಯ ಔಷಧಿಗಳು. ಲಕ್ವ ಹೊಡೆದವರಿಗೆ ಲಕ್ಕುನಕ್ಕಿ ಸೇವನೆ ಪರಿಣಾಮಕಾರಿ ಎಂಬಂತಹ ನಂಬಿಕೆಗಳು ಹಿಂದಿನವರಲ್ಲಿದ್ದವು. ಪಿರಿಯಾಪಟ್ಟಣದ ಸುತ್ತಿನಲ್ಲಿ ಕೋಳಿ, ಕುರಿ, ಆಡು ಮುಂತಾದವುಗಳು ಮಾಂಸ ಎಂಬ ಹೆಸರಿನಿಂದ ಕರೆಸಿಕೊಂಡರೆ ಕಾಡು ಪ್ರಾಣಿ ಮತ್ತಿತರ ಪ್ರಾಣಿಗಳವು ಬಾಡು ಎಂಬ ಹೆಸರಿನಿಂದ ಕರೆಸಿಕೊಳ್ಳುತ್ತವೆ.

ತಾಲೂಕಿನ ಬಹುಪಾಲು ಜನ ರಾಗಿ–ಜೋಳಗಳನ್ನು ಪ್ರಧಾನವಾಗಿ ಅವಲಂಬಿಸಿದ್ದರೂ ನೀರಾವರಿಯಿಂದಾಗಿ ಅಕ್ಕಿಯನ್ನೂ ಸಮಾನವಾಗಿ ಸೇವಿಸುತ್ತಾರೆ. ಹಿಂದೆ ಸಜ್ಜೆ, ಬರಗ, ಕಂಬು, ನವಣೆ ಮುಂತಾದವನ್ನು ಬಳಸುತ್ತಿದ್ದುದಕ್ಕೆ ಶಾಸನಾಧಾರಗಳಿವೆ. ದ್ವಿದಳ ಧಾನ್ಯಗಳಾದ ಅವರೆ, ಹೆಸರು, ತೊಗರಿ, ಉದ್ದು, ಹುರುಳಿ, ಅಲಸಂದೆ, ಮುಂತಾದವನ್ನು ಸಾಮಾನ್ಯವಾಗಿ ಬಳಸಲಾಗುತ್ತದೆ. ರಾಗಿ ಅಥವಾ ಜೋಳದ ಮುದ್ದೆ, ಉಪ್ಪೆಸರು, ಉಪ್ಪೆಸರಿನ ಖಾರ, ಕಾಳು ತರಕಾರಿಗಳನ್ನು ಹಾಕಿ ಮಾಡಿದ ಸಾಂಬಾರು, ಉಪ್ಪಿನಕಾಯಿ, ಮೊಸರು–ಮಜ್ಜಿಗೆಯನ್ನು ದೈನಂದಿನ ಆಹಾರವಾಗಿ ಸೇವಿಸುತ್ತಾರೆ. ಹಬ್ಬ–ಹರಿದಿನ, ವಿವಾಹ ಸಂದರ್ಭಗಳಲ್ಲಿ ಆರ್ಥಿಕ ಸ್ಥಿತಿಗತಿಗನುಗುಣವಾಗಿ ವಿಶೇಷ ಭಕ್ಷ್ಯಗಳನ್ನು ಮಾಡಿ ಸೇವಿಸುತ್ತಾರೆ. ತಾಲೂಕಿನಾದ್ಯಂತ ಬೆಳಿಗ್ಗೆ ಚಹಾ–ಉಪಾಹಾರ, ಮಧ್ಯಾಹ್ನ ಊಟ, ಸಾಯಂಕಾಲ ಚಹಾ/ಕಾಫಿ, ಹಾಗೂ ರಾತ್ರಿ ಊಟ ಮಾಡುವುದು ಸರ್ವೇಸಾಮಾನ್ಯವಾಗಿದ್ದರೂ, ಸಾಂಪ್ರದಾಯಿಕ ರೀತಿಯ ಆಹಾರ ಸೇವನೆಯೂ ಗ್ರಾಮೀಣ ಪ್ರದೇಶದಲ್ಲಿ ಇನ್ನೂ ಉಳಿದಿದೆ. ಹಳ್ಳಿಗಳಲ್ಲಿ ಬೆಳಿಗ್ಗೆ–ಸಂಜೆ ಕಾರ್ಯನಿರ್ವಹಿಸುವ ಚಹಾದಂಗಡಿ, ಗುಡ್ಲು ಹೋಟೆಲುಗಳು, ಬೆಳಗಿನ ನಾಷ್ಟಾ, ಚಹಾ–ಕಾಫಿಯನ್ನು ಬಂದ ಗಿರಾಕಿಗಳಿಗೆ ಪೂರೈಸಿದರೆ, ಪಟ್ಟಣದ ಹೋಟೇಲುಗಳು ಮುಂಜಾನೆಯಿಂದ ರಾತ್ರಿಯವರೆಗೆ ತೆರೆದಿದ್ದು, ವೈವಿಧ್ಯಮಯ ತಿಂಡಿ–ತಿನಿಸುಗಳ ಮೂಲಕ ಗ್ರಾಹಕರನ್ನು ಸೆಳೆಯುತ್ತವೆ. ಪಿರಿಯಾಪಟ್ಟಣ, ಬೆಟ್ಟದಪುರ, ಕಂಪಲಾಪುರ, ರಾವಂದೂರು, ಆರ್ನಹಳ್ಳಿ, ಮುಂತಾದೆಡೆಗಳಲ್ಲಿರುವ ಹೋಟೇಲುಗಳು ಸ್ಥಳೀಯರಿಗೆ ಪ್ರಯಾಣಿಕರಿಗೆ ಹಾಗೂ ಪ್ರವಾಸಿಗರಿಗೆ ಆಹಾರ ಪಾನೀಯಗಳನ್ನು ಒದಗಿಸುತ್ತವೆ. ಹಿಂದೆ ಕೆರೆಬಾವಿಗಳು ಕುಡಿಯುವ ನೀರನ್ನು ಪೂರೈಸುತ್ತಿದ್ದವು. ಆದರೆ ಇಂದು ಬೋರ್‌ವೆಲ್‌ಗಳ ಕೊರೆಯುವಿಕೆ, ಕೈಪಂಪು, ನಳ(ನಲ್ಲಿ), ಟ್ಯಾಂಕ್ ನಳಗಳ ಮೂಲಕ ನೀರು ಸರಬರಾಜು ವ್ಯವಸ್ಥೆ ತಾಲೂಕಿನ ಎಲ್ಲಾ ಗ್ರಾಮ ಉಪಗ್ರಾಮಗಳಲ್ಲೂ ಇರುವುದರಿಂದ ಕುಡಿಯುವ ನೀರಿನ ಸಮಸ್ಯೆ ಬಗೆಹರಿದಂತಾಗಿದೆ. ಚಹಾ–ಕಾಫಿ ಮುಂತಾದವುಗಳೊಂದಿಗೆ ಫಾಂಟಾ, ಕೋಕಾಕೋಲ, ಮುಂತಾದ ತಂಪು ಪಾನೀಯಗಳು ಗ್ರಾಮೀಣ ಪ್ರದೇಶಗಳಿಗೂ ಲಗ್ಗೆ ಹಾಕಿವೆ. ಮಾಂಸಹಾರಿಗಳು ಅವರವರ ಆರ್ಥಿಕ ಸಾಮರ್ಥ್ಯಕ್ಕನುಗುಣವಾಗಿ ಕೋಳಿ, ಕುರಿ, ಮುಂತಾದ ಪ್ರಾಣಿಗಳ ಮಾಂಸವನ್ನು ನಿರ್ದಿಷ್ಟ ದಿನದಂದು ಸೇವಿಸುತ್ತಾರೆ. ಹಿಂದೂಗಳಲ್ಲಿ ಸೋಮವಾರ–ಶನಿವಾರಗಳಲ್ಲಿ, ಶ್ರಾವಣ–ಕಾರ್ತಿಕ ಮಾಸಗಳಲ್ಲಿ ಮಾಂಸಾಹಾರ ಸೇವನೆಗೆ ನಿಷೇಧವಿದೆ. ಧೂಮಪಾನ (ಬೀಡಿ–ಸಿಗರೇಟು), ಪಾನ್‌ಬೀಡಾ

ಮುಂತಾದವು ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗುತ್ತಿದ್ದು, ಮಹಿಳೆಯರು ಎಲೆ ಅಡಿಕೆ ಹಾಕಿಕೊಳ್ಳುವುದು ರೂಢಿಯಲ್ಲಿದೆ. ಆದರೆ ಇತ್ತೀಚೆಗೆ ಕೇಂದ್ರ ಸರ್ಕಾರವು ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನವನ್ನು ಕಾನೂನು ಬದ್ಧವಾಗಿ ನಿಷೇಧಿಸಿದೆ. ನಶ್ಯ ಏರಿಸುವುದು, ಭಂಗಿ ಸೇದುವುದು ವಿರಳವಾಗಿ ಕಂಡು ಬರುತ್ತದೆ. ಹೆಂಡ ಸಾರಾಯಿ ಸೇವನೆ ಹಳ್ಳಿಗಳಲ್ಲಿ ಅಧಿಕಗೊಂಡಿದ್ದು, ಸಾರಾಯಿ ಅಂಗಡಿಗಳು ಬಹುಪಾಲು ಗ್ರಾಮಗಳಲ್ಲಿದ್ದು, ಪಟ್ಟಣಪ್ರದೇಶದಲ್ಲಿ ಮಾಂಸಾಹಾರಿ ಹೋಟೆಲು. ಬಾರು, ಮದ್ಯದಂಗಡಿಗಳು ಐಷಾರಾಮಿನ ಬದುಕಿನ ಭಾಗವಾಗಿವೆ.

## ಸಾಮಾಜಿಕ ಜೀವನ

ತಾಲೂಕಿನ ಗ್ರಾಮೀಣ ಹಾಗೂ ನಗರ ಪ್ರದೇಶಗಳ ಸಾಮಾಜಿಕ ಬದುಕಿನಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ನಗರಪ್ರದೇಶದ ದೈನಂದಿನ ಜೀವನದಲ್ಲಿ ಸಾಕಷ್ಟು ಬದಲಾವಣೆಯಾಗಿದೆ. ಗ್ರಾಮೀಣ ಬದುಕಿನಲ್ಲೂ ಗಣನಿಯ ಪ್ರಮಾಣದಲ್ಲಿ ಸುಧಾರಣೆಯಾಗಿದೆ. ಇದಕ್ಕೆ ಸಾರಿಗೆ–ಸಂಪರ್ಕದಲ್ಲಾಗಿರುವ ಪ್ರಗತಿಯೂ ಕಾರಣ. ಅದರಲ್ಲೂ ಮಾಹಿತಿ ತಂತ್ರಜ್ಞಾನದ ಬೆಳವಣಿಗೆಯಿಂದಾಗಿ, ವಿಶ್ವಗ್ರಾಮ ಕಲ್ಪನೆ ನನಸಾಗುತ್ತಿದ್ದು, ದೂರವಾಣಿ, ದೂರದರ್ಶನ, ಗಣಕಯಂತ್ರ ಹಾಗೂ ಅಂತರ್ಜಾಲ ಸೌಲಭ್ಯಗಳು ಇದನ್ನು ಮತ್ತಷ್ಟು ಸರಳಗೊಳಿಸಿವೆ. ಕೃಷಿಯಲ್ಲಿ ಸುಧಾರಣೆ, ನೀರಾವರಿಯಲ್ಲಿ ಪ್ರಗತಿ, ಶಿಕ್ಷಣ ಸೌಕರ್ಯ, ಆರೋಗ್ಯ ಸೌಲಭ್ಯ, ಬ್ಯಾಂಕಿಂಗ್, ಸಹಕಾರ ವ್ಯವಸ್ಥೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಸಾಮಾಜಿಕ ಸೇವಾ ಸೌಲಭ್ಯಗಳೇ ಮುಂತಾದ ರಂಗಗಳಲ್ಲಿನ ಪ್ರಗತಿಗೆ ಸರ್ಕಾರ ಕೈಗೊಂಡ ಪ್ರಗತಿಶೀಲ ಕಾರ್ಯಕ್ರಮಗಳೇ ಕಾರಣವಾಗಿದ್ದು, ಅದನ್ನಿಂದು ತಾಲೂಕಿನ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಗಮನಿಸಬಹುದಾಗಿದೆ.

ಗ್ರಾಮೀಣ ಭಾಗದಲ್ಲಿ ಕೃಷಿರಂಗಕ್ಕೆ ಸಂಬಂಧಿಸಿದಂತೆ, ಸುಧಾರಿತ ಕೃಷಿಪದ್ಧತಿ, ಕೃಷಿ ಉಪಕರಣಗಳಲ್ಲಿ ಪ್ರಗತಿಯನ್ನು ಸಾಧಿಸಲಾಗಿದ್ದು, ತಂತ್ರಜ್ಞಾನ ಆಧಾರಿತ ಕೃಷಿಯತ್ತ ಪರಿವರ್ತನೆ ಕಂಡುಬರುತ್ತಿದ್ದು, ಉಳುಮೆಯಿಂದ ಕಟಾವಿನವರೆಗೆ ಯಂತ್ರಗಳ ಬಳಕೆ ಹೆಚ್ಚಾಗುತ್ತಿದೆ. ರಸಗೊಬ್ಬರಗಳ ಬಳಕೆ ಕೃಷಿ ಉತ್ಪನ್ನದಲ್ಲಿ ಅಧಿಕ ಇಳುವರಿಯನ್ನು ತಂದಿದೆಯಾದರೂ, ಸಾವಯವ ಕೃಷಿಯ ಪ್ರಾಮುಖ್ಯತೆಯಿಂದು ಮನವರಿಕೆಯಾಗುತ್ತಿದೆ. ವಿದ್ಯುತ್ ಬಳಕೆಯಿಂದಾಗಿ, ಅಂತರ್ಜಲವನ್ನು ವರ್ಷವಿಡೀ ಅಗತ್ಯಕ್ಕನುಗುಣವಾಗಿ ಬಳಸಿಕೊಂಡು ಕೃಷಿ ಉತ್ಪನ್ನವನ್ನು ಪಡೆಯುವ ಸೌಕರ್ಯ ರೈತರಿಗೆ ಲಭಿಸಿದೆಯಾದರೂ, ಅಂತರ್ಜಲ ಮಟ್ಟದ ಕುಸಿತದಿಂದಾಗಿ ಪ್ರಾಕೃತಿಕ ಅಸಮತೋಲನವುಂಟಾಗಿ ನಾನಾ ಸಮಸ್ಯೆಗಳಿಗೆ ಕಾರಣವಾಗಿದೆ. ಕೌಟುಂಬಿಕ ಜೀವನದಲ್ಲಿ ಅವಿಭಕ್ತ ಕುಟುಂಬಗಳು ಅವಸಾನದ ಅಂಚನ್ನು ತಲುಪಿದ್ದು, ವಿಭಕ್ತ ಕುಟುಂಬಗಳು ಸಾಮಾನ್ಯವಾಗುತ್ತಿದ್ದು, ಸಾಮಾಜಿಕ ಸಂಬಂಧಗಳು ಸಡಿಲಗೊಳ್ಳುತ್ತಿರುವುದು ಆತಂಕದ ಬೆಳವಣಿಗೆಯಾಗಿದೆ.

ಒಂದು ಕಾಲದಲ್ಲಿ ಗ್ರಾಮೀಣ ಬದುಕಿನ ಜೀವಾಳವಾಗಿದ್ದ ಕುಂಬಾರ, ಗಾಣಿಗ, ಬಡಗಿ, ಕಮ್ಮಾರ, ಅಕ್ಕಸಾಲಿ ಮುಂತಾದ ಕುಲಕಸುಬುಗಳಿಂದು ಕೈಗಾರಿಕಾಭಿವೃದ್ಧಿಯಿಂದಾಗಿ ಹಿನ್ನಡೆ ಕಂಡಿದ್ದು, ಅವುಗಳ ಸ್ಥಳವನ್ನು ಯಂತ್ರೋಪಕರಣ ಆಧಾರಿತ ಉತ್ಪಾದನೆಗಳು ಆಕ್ರಮಿಸಿವೆ. ತಾಂತ್ರಿಕ ಪ್ರಗತಿ ಸಮಾಜದ ಎಲ್ಲಾ ಸ್ತರದ ಜನರ ಜೀವನಕ್ರಮದ ಮೇಲೆ ಸಾಕಷ್ಟು ಪ್ರಭಾವ ಬೀರಿದೆ. ಇದರಿಂದಾಗಿ ಸಾಂಪ್ರದಾಯಕ ವೃತ್ತಿಗಳು ಕ್ಷೀಣಿಸಲಾರಂಭಿಸಿ, ಸಂಬಂಧಿತ ಕಸುಬುದಾರರು ಪಟ್ಟಣ ಸೇರಿ ಪರ್ಯಾಯ ಮಾರ್ಗ ಕಂಡುಕೊಳ್ಳುತ್ತಿದ್ದಾರೆ. ರಾಗಿ ಬೀಸುವುದು, ಬತ್ತ ಕುಟ್ಟುವುದು, ಮುಂತಾದವು ಕಣ್ಮರೆಯಾಗಿ ರಾಗಿ–ಅಕ್ಕಿ ಗಿರಣಿಗಳು ತಲೆ ಎತ್ತಿ ಮೆರೆದಿವೆ. ಸಾಂಸ್ಕೃತಿಕ ಬದುಕು ಮರೆಯಾಗುತ್ತಿದೆ.

ವಾಣಿಜ್ಯ ವ್ಯಾಪಾರ ವಹಿವಾಟಿನಲ್ಲಿ ಗಣನೀಯ ಪ್ರಗತಿಯಾಗಿದ್ದರೂ ತಾಲೂಕು ಕೇಂದ್ರ ನರಸೀಪುರ ಸೇರಿದಂತೆ ಗ್ರಾಮೀಣ ಪ್ರದೇಶದಲ್ಲಿರುವ ವಾರದ ಸಂತೆಗಳಿಂದಿಗೂ ನಡೆಯುತ್ತಿವೆ. ಕೃಷಿ ಉತ್ಪನ್ನ ಮಾರುಕಟ್ಟೆ ಹಾಗೂ ರೇಷ್ಮೆ ಮಾರುಕಟ್ಟೆಗಳು ಕೃಷಿ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ಹಾಗೂ ಯೋಗ್ಯಬೆಲೆಯನ್ನು ಒದಗಿಸುವ ಮೂಲಕ ರೈತರ ಬದುಕನ್ನು ಹಸನಾಗಿಸುವಲ್ಲಿ ನೆರವಾಗಿವೆ. ನಗರಜೀವನದಲ್ಲಿ ಜಾತಿವ್ಯವಸ್ಥೆಯ ಹಿಡಿತವನ್ನು ಸಡಿಲಗೊಳಿಸುವಲ್ಲಿ ಹೋಟೆಲು ವ್ಯವಸ್ಥೆಯಂತಹ ಅನೇಕ ಅಂಶಗಳು ಕೈಜೋಡಿಸಿವೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಅದು ಮುಂದುವರಿದಿದೆಯಾದರೂ ಸಾಕಷ್ಟು ಪರಿವರ್ತನೆಯಾಗಿದೆ. ಅಸ್ಪೃಶ್ಯತೆಯಂತಹ ಸಾಮಾಜಿಕ ಪಿಡುಗು ಕಾನೂನುಬಾಹಿರವಾಗಿದ್ದು, ಸಾರ್ವಜನಿಕವಾಗಿ ಪರಿಶಿಷ್ಟಜಾತಿ, ಪಂಗಡಗಳಿಗೆ ಸೇರಿದ ಜನರ ಹಿತಾಸಕ್ತಿಯನ್ನು ಸಂರಕ್ಷಿಸುವ ಉದ್ದೇಶದಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೂಪಿಸಿದ ಹಲವಾರು ಕಾಯ್ದೆ ಹಾಗೂ ಯೋಜನೆಗಳಿಂದಾಗಿ ಕೆಳವರ್ಗದ ಜನರಿಗೆ ಸಮಾನ ಸೌಕರ್ಯ ಲಭಿಸಿ, ಎಲ್ಲಾ ರಂಗಗಳಲ್ಲೂ ಅವರಿಗೆ ಪ್ರವೇಶ ದೊರೆಯುವಂತಾಗಿದೆ. ಈ ಎಲ್ಲಾ ಕಾರಣಗಳಿಂದಾಗಿ ತಾಲೂಕಿನ ಜನರ ಸಾಮಾಜಿಕ ಜೀವನದಲ್ಲಿ ಸಾಕಷ್ಟು ಬದಲಾವಣೆಯುಂಟಾಗಿದ್ದರೂ ಆಹಾರ, ವಸತಿ, ಮೂಲಭೂತ ಸೌಕರ್ಯ, ಆರ್ಥಿಕ ಸ್ವಾವಲಂಬನೆ ಹಾಗೂ ಸ್ಥಿರತೆ, ಉಡುಗೆ–ತೊಡುಗೆಗಳನ್ನೊಳಗೊಂಡ ಭೌತಿಕ ಸ್ಥಿತಿಗತಿಯಲ್ಲಿ ಪ್ರಗತಿ ಕಂಡುಬಂದಿದೆಯಾದರೂ ಸಾಂಪ್ರದಾಯಕ ಜೀವನಕ್ರಮ ಇನ್ನೂ ಉಳಿದುಕೊಂಡು ಬಂದಿದೆ.

**ಗೃಹಜೀವನ :** ತಾಲೂಕಿನ ಕೊಪ್ಪ, ಬೆಣಗಾಲು ಮುಂತಾದೆಡೆ ಶಿಲಾಯುಗ ಮಾನವರು ಹಿಂದೆ ನೆಲೆಸಿದ್ದ ನಿವೇಶನಗಳಲ್ಲಿ ದೊರೆತಿರುವ ಅವಶೇಷಗಳಿಂದ ಅವರು ವಾಸಿಸುತ್ತಿದ್ದ ಮನೆಗಳ ಸ್ವರೂಪದ ಬಗ್ಗೆ ಪುರಾತತ್ವಜ್ಞರು ಈಗಾಗಲೇ ವರದಿ ಮಾಡಿದ್ದಾರೆ. ಪ್ರಸ್ತುತ ತಾಲೂಕಿನಲ್ಲಿ ಗುಡಿಸಲು, ತೊಟ್ಟಿಮನೆ, ಮಾಳಿಗೆಮನೆ, ಮಹಡಿಮನೆ ಮುಂತಾದ ಬಗೆಯ ಮನೆಗಳು ಕಂಡುಬರುತ್ತವೆ. ಅವರವರ ಸಾಮಾಜಿಕ ಆರ್ಥಿಕ ಸ್ಥಿತಿಗತಿಗನುಸಾರವಾಗಿ, ವಿವಿಧ ವರ್ಗದ ಜನ ವಿವಿಧ ಗಾತ್ರದ ಹಾಗೂ ಸ್ವರೂಪದ ಮನೆಗಳಲ್ಲಿ ವಾಸಿಸುತ್ತಾರೆ. ಗುಡಿಸಲು–ಜೋಪಡಿಗಳಲ್ಲಿ ಕೆಳವರ್ಗದವರು, ಆರ್ಥಿಕವಾಗಿ ಅಶಕ್ತರಾಗಿರುವವರು ಹಿಂದೆ ವಾಸಿಸುತ್ತಿದ್ದರು. ಆದರಿಂದು ಸರ್ಕಾರದಿಂದ ದೊರೆತಿರುವ

ಆಸರೆಯಿಂದಾಗಿ ಅವರೂ ಕೂಡ ಜನತಾಮನೆ, ಆಶ್ರಯ ಮನೆ ಎಂದು ಕರೆಯುವ, ಛಾವಣಿಗೆ ಮಂಗಳೂರು ಹೆಂಚು/ಝಿಂಕ್ ಷೀಟ್ ಹಾಕಿರುವ ಸಣ್ಣಪುಟ್ಟ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ನಾಡು ಹೆಂಚನ್ನು ಹೊದಿಸಿರುವ ತಗ್ಗಾದ ತೊಟ್ಟಿಮನೆ, ಎತ್ತರದ ಛಾವಣಿ ಇರುವ ತೊಟ್ಟಿ ಮನೆಗಳಿದ್ದು, ಕ್ರಮೇಣ ನಾಡುಹೆಂಚಿನ ಬದಲು ಮಂಗಳೂರು ಹೆಂಚು, ಝಿಂಕ್‌ಶೀಟ್‌ಗಳು ಅಧಿಕಗೊಳ್ಳುತ್ತಿವೆ. ಹಿಂದೆ ಮದ್ರಾಸ್ ತಾರಸಿಯ ಮಹಡಿ ಮನೆಗಳಿದ್ದು, ಇಂದು ಅವುಗಳ ಜೊತೆಗೆ ಸಿಮೆಂಟಿನ ತಾರಸಿಯನ್ನುಳ್ಳ ಮೂರ್‍ನಾಲ್ಕು ಅಂತಸ್ತಿನ ಮನೆಗಳು ಪಟ್ಟಣ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಕಂಡುಬಂದರೆ, ಗ್ರಾಮಗಳಲ್ಲೂ ತಾರಸಿ ಮನೆಗಳು ತಲೆ ಎತ್ತುತ್ತಿವೆ. ಗ್ರಾಮೀಣ ಪ್ರದೇಶದಲ್ಲಿ ಆಯಾ ವೃತ್ತಿಯವರು ತಮ್ಮ ಅಗತ್ಯಗಳಿಗನುಗುಣವಾಗಿ ಮನೆಯನ್ನು ನಿರ್ಮಿಸಿಕೊಳ್ಳುತ್ತಿದ್ದು, ರೈತರು ದನದ ಕೊಟ್ಟಿಗೆ, ಕಣಜ, ಹಿತ್ತಿಲು ಮುಂತಾದವುಗಳನ್ನು ಮನೆಪರಿಸರದಲ್ಲೇ ಹೊಂದಿದ್ದು, ಒಳಗೆ ವಿಶಾಲಮನೆಯಾದಲ್ಲಿ ಒಂದೆರಡು ಕೊಠಡಿ, ಸ್ನಾನದ ಮನೆ ಅಡಿಗೆ ಮನೆ, ದೇವರ ಮನೆ, ತಿಜೋರಿಕೋಣೆ, ಕಾಳಿನಕೋಣೆ ಮುಂತಾದವುಗಳಿರುತ್ತವೆ. ಅದೇ ಬಡವರಾದಲ್ಲಿ ಸಣ್ಣ ಮನೆಯಲ್ಲಿ ವಾಸಿಸುತ್ತಿದ್ದು, ದನದ ಕೊಟ್ಟಿಗೆಗೆ ತೆಂಗಿನ ಗರಿಯನ್ನು ಬಿಗಿದ ಛಾವಣಿ ಇರುತ್ತದೆ. ಹಿಂದೆ ಸಗಣಿ ನೆಲ ಸಾಮಾನ್ಯವಾಗಿದ್ದು, ಕೆಲವು ಮನೆಗಳಿಗೆ ಕಡಪ, ಚಪ್ಪಡಿಕಲ್ಲಿನ ನೆಲಹಾಸಿರುತ್ತಿತ್ತು. ಆದರೆ ಇಂದು ಅವುಗಳ ಸ್ಥಾನವನ್ನು ಗಾರೆಯು ಆಕ್ರಮಿಸಿ ಗಾರೆ ನೆಲ ಸಾಮಾನ್ಯವಾಗಿದೆ. ಮನೆಯ ನಡುವೆ ಇರುವ, ತೆರೆದ ಚೌಕಾ/ಆಯಾಕಾರದ ತೊಟ್ಟಿಯು ನಾಲ್ಕು, ಎಂಟು, ೧೨, ೧೬, ಕಂಬಗಳನ್ನು ಹೊಂದಿರುತ್ತಿತ್ತು. ಹೆಚ್ಚಿನ ಸಂದರ್ಭಗಳಲ್ಲಿ ಮನೆಯ ಗೋಡೆಗಳು ಮಣ್ಣು ಬಿದಿರುಗಳನ್ನು ಬಳಸಿ ಕಟ್ಟಿದವಾಗಿದ್ದು, ಇತ್ತೀಚೆಗೆ ಇಟ್ಟಿಗೆ, ಮಣ್ಣು ಸಿಮೆಂಟ್ ಬಳಸಿ ನಿರ್ಮಿಸಿದ ಗೋಡೆಗೆ ಸುಣ್ಣ–ಬಣ್ಣಗಳನ್ನು ಬಳಿಯುವುದು ಸಾಮಾನ್ಯವಾಗಿದೆ. ಕಳೆದ ಶತಮಾನದ ಐದನೆಯ ದಶಕದಲ್ಲಿ, ವಿದ್ಯುತ್‌ದೀಪಗಳು ಪಟ್ಟಣ, ಗ್ರಾಮ ಹಾಗೂ ಮನೆಗಳನ್ನು ಪ್ರವೇಶಿಸಿದರೂ ಅದು ಸಾರ್ವತ್ರಿಕಗೊಂಡು ಹೆಚ್ಚು ಬಳಕೆಗೆ ಬಂದದ್ದು, ಕಳೆದ ಶತಮಾನದ ಕೊನೆಯ ಎರಡು ದಶಕಗಳಲ್ಲಿ. ಇಂದು ತಾಲೂಕು ಪೂರಾ ವಿದ್ಯುದೀಕರಣಗೊಂಡಿದ್ದು, ಸರ್ಕಾರದ ನೆರವಿನಿಂದಾಗಿ ಬಹುತೇಕ ಎಲ್ಲಾ ಗೃಹಗಳಿಗೂ ವಿದ್ಯುತ್ ದೀಪ ಲಭಿಸಿದ್ದು, ವಿದ್ಯುತ್‌ರಹಿತ ಮನೆಗಳು ವಿರಳವಾಗುತ್ತಿವೆ. ತಾಲೂಕಿನ ಪಟ್ಟಣ ಪ್ರದೇಶದಲ್ಲಿ ಹೊಸ ಬಡಾವಣೆ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಜನತಾ ಬಡಾವಣೆಗಳಲ್ಲಿ ನವೀನ ಮನೆಗಳು ಕಂಡುಬಂದರೆ, ಊರು–ಪಟ್ಟಣಗಳ ಮೂಲವಸತಿ ಪ್ರದೇಶಗಳಲ್ಲಿ ಹಳೆಯ ಮಾದರಿಯ ಮನೆ, ಸಾಮಾಜಿಕ ಪರಿಸರಗಳು ಇಂದಿಗೂ ಉಳಿದುಕೊಂಡು ಬಂದಿದ್ದು, ಪಿರಿಯಾಪಟ್ಟಣ, ರಾವಂದೂರು, ಕಂಪಲಾಪುರ, ಬೆಟ್ಟದಪುರ, ಕಿತ್ತೂರು ಮುಂತಾದ ಸ್ಥಳಗಳನ್ನು ಇಲ್ಲಿ ಉದಾಹರಿಸಬಹುದಾಗಿದೆ. ಪಿರಿಯಾಪಟ್ಟಣ ಸೇರಿದಂತೆ ಮುಂತಾದೆಡೆಗಳಲ್ಲಿ ಸಾಂಪ್ರದಾಯಿಕ ಮನೆಗಳ ಜೊತೆಗೆ ಆಧುನಿಕ ಕಟ್ಟಡಗಳೂ ತಲೆ ಎತ್ತಿ ನಿಂತಿವೆ.

**ಗೃಹೋಪಯೋಗಿ ವಸ್ತುಗಳು :** ಬಡವರ್ಗಕ್ಕೆ ಸೇರಿದ ಜನರ ಮನೆಗಳಲ್ಲಿ ಹಿಂದೆ ಮಣ್ಣಿನ ಮಡಕೆ, ಅಲ್ಯುಮಿನಿಯಂ ತಟ್ಟೆ, ಪಾತ್ರೆ ಹಾಗೂ ಹಿತ್ತಾಳೆಯ ಹಂಡೆ

ಮುಂತಾದವುಗಳಿದ್ದು, ಕುರ್ಚಿ, ಬೆಂಚು, ಟೇಬಲ್‌ಗಳು ವಿರಳವಾಗಿರುತ್ತಿದ್ದವು. ಆದರೆ ಇಂದು ಸ್ಟೀಲ್ ಪಾತ್ರೆ, ಕಬ್ಬಿಣದ ಕುರ್ಚಿ, ಮಂಚ, ಬೆಂಚು ಮುಂತಾದವು ಪ್ರತಿಯೊಬ್ಬರ ಮನೆಯಲ್ಲಿವೆ. ಮಧ್ಯಮ ಹಾಗೂ ಮೇಲ್ವರ್ಗದ ಜನರ ಮನೆಗಳಲ್ಲಿ ಹಿತ್ತಾಳೆ, ತಾಮ್ರ, ಅಲ್ಯೂಮಿನಿಯಂ ಪಾತ್ರೆ ಪಡಗಗಳನ್ನು ಉಪಯೋಗಿಸುತ್ತಿದ್ದು, ಪ್ಲಾಸ್ಟಿಕ್ ಕುರ್ಚಿ, ಟೀಪಾಯಿ, ಬಕೇಟು, ಮಗ್ಗು, ಬೇಸನ್, ಮುಂತಾದವನ್ನು ಎಲ್ಲರೂ ಬಳಸುತ್ತಾರೆ. ಆದರೂ ಹಳ್ಳಿಗಳಲ್ಲಿ ಶ್ರಾವಣ ಮಾಸದಲ್ಲಿ ಹಾಗೂ ಯುಗಾದಿ ಹಬ್ಬದಲ್ಲಿ ಹೊಸ ಮಡಕೆಗಳಲ್ಲೇ ಅಡಿಗೆ ಮಾಡಿ ಉಣ್ಣುವುದು ಸಂಪ್ರದಾಯವಾಗಿದೆ. ಎಲ್.ಪಿ.ಜಿ. ಗ್ಯಾಸ್–ಸ್ಟೌಗಳು ಹಳ್ಳಿಗಳನ್ನು ಪ್ರವೇಶಿಸಿದ್ದರೂ, ಸೌದೆಒಲೆ, ಒತ್ತೊಲೆಗಳು, ಇನ್ನೂ ಅಡಿಗೆ ಮನೆಯಲ್ಲಿ ಪ್ರಾಮುಖ್ಯತೆ ಉಳಿಸಿಕೊಂಡಿವೆ. ಚಾಪೆ, ಜಮಖಾನ, ಹಾಸಿಗೆ, ತಲೆದಿಂಬು, ಹೊದಿಕೆ ಕಂಬಳಿ, ರಗ್ಗುಗಳನ್ನು ಎಲ್ಲರೂ ಉಪಯೋಗಿಸುತ್ತಿದ್ದು, ಉಳ್ಳವರು ಮಂಚವನ್ನು ಬಳಸುತ್ತಾರೆ. ಹಳ್ಳಿ–ಪಟ್ಟಣಗಳ ಗೃಹೋಪಯೋಗಿ ವಸ್ತುಗಳಲ್ಲಿ ಗಣನೀಯ ಸುಧಾರಣೆ–ಬಸಲಾವಣೆಗಳಾಗಿರುವುದು ಉಲ್ಲೇಖಾರ್ಹವಾಗಿದೆ.

**ಉಡುಪು :** ತಾಲೂಕಿನ ಜನರ ಸಾಂಪ್ರದಾಯಿಕ ಉಡುಗೆಯ ಭಾಗವಾದ ಪುರುಷರ ಪಂಚೆ, ಧೋತ್ರ, ಪಟಾಪಟಿ ಚಡ್ಡಿ, ಒಳಅಂಗಿ, ಅಂಗಿ, ಜುಬ್ಬ, ಟವೇಲು ಮುಂತಾದವು; ಮಹಿಳೆಯರ ಸೀರೆ, ರವಿಕೆ, ಕುಪ್ಪಸ, ಲಂಗ, ಜಂಪರ್, ದಾವಣಿ ಮುಂತಾದವುಗಳ ಮೇಲೆ ಆಧುನಿಕತೆಯ ಪ್ರಭಾವ ಸಾಕಷ್ಟಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಹೊಲದಲ್ಲಿ ದುಡಿಯುವಾಗ, ಚಡ್ಡಿ, ಬನಿಯನ್ ಧರಿಸುವ ರೈತರು ಬಿಡುವಿನ ವೇಳೆಯಲ್ಲಿ ಪಂಚೆ ಶರ್ಟು ತೊಟ್ಟರೂ ಲುಂಗಿಯ ಬಳಕೆ ಹೆಚ್ಚಾಗುತ್ತಿದೆ. ಹೆಗಲ ಮೇಲೆ ಟವಲು ಹಾಕಿಕೊಂಡು, ಕಾಲಿಗೆ ಚಪ್ಪಲಿ ಮೆಟ್ಟಿಕೊಂಡು ಹೊರಗೆ ಹೋಗುತ್ತಾರೆ. ಆದರೆ ಇಂದಿನ ಯುವಕರು ಪ್ಯಾಂಟ್, ನಿಕ್ಕರ್, ಟಿ–ಶರ್ಟು, ಬರ್ಮುಡ ಚಡ್ಡಿ, ಲುಂಗಿ ಮುಂತಾದವನ್ನು ಧರಿಸುವುದರೊಂದಿಗೆ ಸಾಂಪ್ರದಾಯಕ ಉಡುಗೆ ಹಿಂದೆ ಸರಿಯುತ್ತಿದೆ. ಇದೇ ರೀತಿ ಮಹಿಳೆಯರ ಸೀರೆಗಳೂ ಕೂಡ ಹದಿನೆಂಟು ಮೊಳಗಳಿಂದ ಹನ್ನೆರಡು ಮೊಳ (ಎಂಟರಿಂದ ಐದೂವರೆ ಮಿಟರ್)ಕ್ಕೆ ಇಳಿದಿದ್ದು, ಒಳಲಂಗ–ರವಿಕೆಗಳ ಜೊತೆಗೆ ಮೊಲೆಕಟ್ಟಿನ ಬಳಕೆಯೂ ಹಳ್ಳಿಗಳಲ್ಲಿ ಸಾಮಾನ್ಯವಾಗಿ ಬಿಟ್ಟಿದೆ. ಹೆಣ್ಣುಮಕ್ಕಳು ವಯೋಮಿತಿಗನುಗುಣವಾಗಿ ಲಂಗ–ಜಂಪರ್, ಧರಿಸುತ್ತಾರಾದರೂ, ಫ್ರಾಕ್, ಸ್ಕರ್ಟ್, ಚೂಡಿದಾರ–ವೇಲ್, ಲಾಚಾ, ಮಿಡಿ, ಪ್ಯಾಂಟ್–ಶರ್ಟು, ಜೀನ್ಸ್, ಟಿ–ಶರ್ಟ್ ಮುಂತಾದ ವೈವಿಧ್ಯಮಯ ಉಡುಗೆಗಳು ಪಟ್ಟಣಗಳಲ್ಲಿ ಸಾಮಾನ್ಯವಾಗಿಬಿಟ್ಟಿದ್ದು, ಹಳ್ಳಿಗಳಲ್ಲೂ ರೂಢಿಗೆ ಬಂದಿವೆ. ಯುವತಿಯರ ಸಾಂಪ್ರದಾಯಿಕ ಉಡುಗೆಯಾಗಿದ್ದ ಲಂಗ–ದಾವಣಿ ವಿರಳವಾಗಿ ಬಿಟ್ಟಿದೆ. ಮನೆಯಲ್ಲಿರುವಾಗ ವಯೋಮಾನಕ್ಕನುಗುಣವಾಗಿ ಹೆಣ್ಣುಮಕ್ಕಳು ನೈಟಿ, ಸೀರೆ ಧರಿಸಿದರೆ, ಪುರುಷರು ಲುಂಗಿ, ನಿಕ್ಕರ್, ಬರ್ಮುಡ, ಚಡ್ಡಿ ಹಾಗೂ ಶರ್ಟ್‌ನ್ನು ಧರಿಸುವುದು ಸಾಮಾನ್ಯವಾಗಿದೆ. ತಮ್ಮ ಆರ್ಥಿಕ ಸಾಮರ್ಥ್ಯಕ್ಕೆ ತಕ್ಕಂತೆ ಹೊಸಬಟ್ಟೆಯನ್ನು ಖರೀದಿಸಿ ಹೊಲಿಸಿ, ಅದನ್ನು ಗೌರಿ–ಗಣೇಶ, ಯುಗಾದಿ, ದೀಪಾವಳಿ ಮುಂತಾದ ಹಬ್ಬ ಹರಿದಿನಗಳಂದು ಹಿಂದೂಗಳು ಧರಿಸಿ ಸಂಭ್ರಮಿಸುತ್ತಾರೆ.

ಮುಸ್ಲಿಂ ಪುರುಷರ ಉಡುಗೆ ಕುರ್ತಾ, ಪೈಜಾಮ, ಲುಂಗಿ, ಹಾಗೂ ಶರ್ಟುಗಳಾದರೆ ಮಹಿಳೆಯರು ಸೀರೆ-ರವಿಕೆ, ಚೂಡಿದಾರ್ ಹಾಗೂ ಬುರ್ಖಾ ಧರಿಸುತ್ತಾರೆ. ಆದರೆ ಇಂದು ಅವರಲ್ಲೂ ಸಾಕಷ್ಟು ಬದಲಾವಣೆಗಳಾಗಿದೆಯಾದರೂ ಸಂಪ್ರದಾಯಸ್ಥರು ಇನ್ನೂ ಇದ್ದಾರೆ. ಮುಸ್ಲಿಮರಾದಲ್ಲಿ ರಮ್ಜಾನ್, ಬಕ್ರೀದ್, ಹಬ್ಬಗಳಲ್ಲೂ, ಕ್ರಿಶ್ಚಿಯನ್ನರಾದಲ್ಲಿ ಹೊಸವರ್ಷದಿನ, ಕ್ರಿಸ್‌ಮಸ್, ಈಸ್ಟರ್ ಹಬ್ಬಗಳಲ್ಲೂ ಹೊಸಬಟ್ಟೆ ಧರಿಸಿ ಉಲ್ಲಾಸದಿಂದ ಹಬ್ಬ ಆಚರಿಸುತ್ತಾರೆ.

**ಆಭರಣಗಳು :** ಇತರ ಮಹಿಳೆಯರಂತೆ ತಾಲೂಕಿನ ಮಹಿಳೆಯರೂ ಮೂಲತಃ ಆಭರಣಪ್ರಿಯರೇ. ಹಬ್ಬ, ಹರಿದಿನ, ವಿವಾಹ ಮುಂತಾದ ವಿಶೇಷ ಸಂದರ್ಭಗಳಲ್ಲಿ ತಮ್ಮಲ್ಲಿರುವ ವೈವಿಧ್ಯಮಯ ಆಭರಣಗಳನ್ನು ಧರಿಸಿ ಸಂಭ್ರಮಿಸಿದರೆ, ದಿನನಿತ್ಯ ಓಲೆ, ಮಾಟಿ, ಮೂಗುಬೊಟ್ಟು, ತಾಳಿ, ಕರಿಮಣಿಸರಗಳನ್ನು ವರ್ಗಬೇಧವಿಲ್ಲದೆ ಸಾಮಾನ್ಯವಾಗಿ ಧರಿಸುತ್ತಾರೆ. ಉಳಿದಂತೆ ಕೈಗೆ ಗಾಜಿನಬಳೆ, ಉಂಗುರ, ಕಾಲಿಗೆ ಬೆಳ್ಳಿಯುಂಗುರ ಹಾಗೂ ಬೆಳ್ಳಿಯ ಕಾಲ್ಮುರಿಯನ್ನು ತೊಡುತ್ತಾರೆ. ಸಾಂಪ್ರದಾಯಿಕ ಆಭರಣಗಳಾದ ಕಡಗ, ಜಡೆಬಿಲ್ಲೆ, ನಾಗರ, ಮುರವು, ಚೌಲಿಗೊಣಸು, ಕೊಳವೆ, ಪಾಟ್ಲಿ, ಅಡ್ಡಿಗೆ, ಸರ, ಪದಕ, ಬಳೆ, ತೋಳ್ಬಂದಿ ಮುಂತಾದವು ವಿರಳಗೊಂಡು ನವೀನ ಮಾದರಿಯ ಆಭರಣಗಳತ್ತ ಮಹಿಳೆಯರು ಆಕರ್ಷಿತರಾಗಿದ್ದಾರೆ. ಹಿಂದೆ ಪುರುಷರು ಕಿವಿಗೆ ಹತ್ತೊಡಕು, ಕಲವಾರ ಹಾಗೂ ಪಟ್ಲಾರುಗಳನ್ನೂ, ಕೊರಳಿಗೆ ತಾಯತವನ್ನೂ ಕೈಗೆ ಕಡಗವನ್ನೂ ಧರಿಸುತ್ತಿದ್ದರು. ಆದರೆ ಇಂದು ಕಿವಿಗೆ ಹತ್ತೊಡಕು ತೊಟ್ಟವರು ವಿರಳವಾಗುತ್ತಿದ್ದು, ಕೊರಳಿಗೆ ಸರ, ಕೈಗೆ ಉಂಗುರ, ಮಣಿಕಟ್ಟಿನ ಸರ ಮುಂತಾದವು ಬಳಕೆಗೆ ಬಂದಿವೆ. ವಯಸ್ಸಾದ ಮಹಿಳೆಯರು ತಲೆಗೂದಲಿಗೆ ಗಂಟು ಬಿಗಿದರೆ, ಮಧ್ಯಮ ವಯಸ್ಸಿನವರೂ ಸೇರಿದಂತೆ ಇತರರು ತಲೆಬಾಚಿಕೊಂಡು ವಿವಿಧ ಬಗೆಯಲ್ಲಿ ಜಡೆಯನ್ನು ಹೆಣೆದುಕೊಳ್ಳುತ್ತಾರೆ. ಬಾಲಕಿಯರಿಗೆ ಬಾಬ್‌ಕಟ್ ಸೇರಿದಂತೆ, ವೈವಿಧ್ಯಮಯವಾಗಿ ತಲೆಗೂದಲನ್ನು ವಿನ್ಯಾಸ ಮಾಡಿಸುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ಹರಳೆಣ್ಣೆ, ಕೊಬ್ಬರಿ ಎಣ್ಣೆಗಳನ್ನು ಬಳಸಿದರೆ, ಪಟ್ಟಣ ಪ್ರದೇಶದಲ್ಲಿ ಮಹಿಳೆಯರು ಕೊಬ್ಬರಿಎಣ್ಣೆಯನ್ನೇ ವಿಶೇಷವಾಗಿ ಬಳಸುತ್ತಾರೆ. ಹಲ್ಲುಜ್ಜಲು ಬ್ರಷ್-ಪೇಸ್ಟ್, ಸ್ನಾನಕ್ಕೆ ಸೋಪು, ಸೀಗೇಕಾಯಿ, ಷಾಂಪು, ಮೇಕಪ್ ಮಾಡಿಕೊಳ್ಳಲು ಸ್ನೋಪೌಡರ್, ಸುಗಂಧದ್ರವ್ಯ ಮುಂತಾದವನ್ನು ಬಳಸುವುದು ಸಾಮಾನ್ಯವಾಗಿದೆ. ಚಪ್ಪಲಿ, ಚಡಾವುಗಳ ಬಳಕೆ ತಾಲೂಕಿನಾದ್ಯಂತ ಸಾಮಾನ್ಯವಾಗಿ ರೂಢಿಯಲ್ಲಿದ್ದು, ಹಚ್ಚೆ ಹಾಕಿಸಿಕೊಳ್ಳುವ ಸಂಪ್ರದಾಯ ವಿರಳವಾಗುತ್ತಿದೆ.

**ಹಬ್ಬ-ಹರಿದಿನ, ಜಾತ್ರೆ, ಉತ್ಸವಗಳು :** ತಾಲೂಕಿನ ಜನತೆಯೂ ಯುಗಾದಿ, ದೀಪಾವಳಿ, ಮೊದಲಾದ ಹಬ್ಬಗಳನ್ನು ಆಚರಿಸುತ್ತಾರೆ. ಆ ಹಬ್ಬಗಳ ಕೆಲ ವಿಶೇಷಗಳು ಹೀಗಿವೆ : **ಯುಗಾದಿ** : ಹಿಂದೂಗಳ ಹೊಸವರ್ಷದ ಮೊದಲದಿನ. ಈ ಹಬ್ಬವನ್ನು ಹಿಂದೂಗಳೆಲ್ಲರೂ ಆಚರಿಸುವರು. ಈ ಹಬ್ಬದಲ್ಲಿ ಎಲ್ಲರೂ ಮಾವಿನಸೊಪ್ಪು, ಬೇವಿನ ಸೊಪ್ಪುಗಳನ್ನು ತಂದು ಮನೆ ಮುಂದೆ ತೋರಣ ಕಟ್ಟಿ, ಹೊಸ ಬಟ್ಟೆ ಧರಿಸಿ, ಬೇವು-ಬೆಲ್ಲಗಳನ್ನು ತಿಂದು ಹಬ್ಬವನ್ನು ಸಡಗರದಿಂದ ಆಚರಿಸುತ್ತಾರೆ. ಪಿರಿಯಾಪಟ್ಟಣದ

ಕೆಲವು ಹಳ್ಳಿಗಳಲ್ಲಿ ಹೊಳೆ ಅಥವಾ ಕೆರೆಗಳಿಗೆ ಹೋಗಿ ಸ್ನಾನಮಾಡಿ ದೇವರ ಸಾಮಾನುಗಳನ್ನು (ಗಂಟೆ, ಶಂಕು, ದಿಬ್ಬಿಗಡಿಗೆ) ತೊಳೆದು, ಪೂಜೆ ಮಾಡಿಕೊಂಡು ಬರುತ್ತಾರೆ. ದನ–ಕರುಗಳನ್ನು ತೊಳೆದು ಪೂಜಿಸುತ್ತಾರೆ. ಈ ಹಬ್ಬದಲ್ಲಿ ಒಬ್ಬಟ್ಟಿನೂಟ ಸರ್ವೆ ಸಾಮಾನ್ಯ. ಅಲ್ಲದೆ ತಮ್ಮ ಅದೃಷ್ಟ ಪರೀಕ್ಷೆಗಾಗಿ ಚೌಕಬಾರ, ಇಸ್ಪೀಟನ್ನು ಬಾಜಿಕಟ್ಟಿಕೊಂಡು ಆಡುತ್ತಾರೆ. ಊರಿನ ಮುಖ್ಯ ದೇವತೆಯ ಉತ್ಸವವನ್ನು ಮಾಡಲಾಗುತ್ತದೆ. ಯುಗಾದಿ ಹಬ್ಬದಂದು ಈಶ್ವರ ಪೂಜೆ ಮತ್ತು ಚಂದ್ರನದರ್ಶನ ಬಹಳ ಪವಿತ್ರವಾದುದು. ರೈತರು ಕೃಷಿ ಕಾರ್ಯವನ್ನು ಹೊನ್ನಾರು ಕಟ್ಟುವುದರ ಮೂಲಕ ಪ್ರಾರಂಭಿಸುತ್ತಾರೆ.

**ಪಿತೃಪಕ್ಷ :** ಇದನ್ನು ಕೆಲವರು ಮಹಾಲಯ ಅಮಾವಾಸ್ಯೆಯಂದು ಮಾಡಿದರೆ, ಕೆಲವರು ಆಯುಧ ಪೂಜೆಯಂದೂ ಮತ್ತೆ ಕೆಲವರು ದೀಪಾವಳಿಯಂದು ಮಾಡುತ್ತಾರೆ. ಅವರವರ ಮನೆತನದ ಸಂಪ್ರದಾಯಕ್ಕೆ ತಕ್ಕಂತೆ ಅಂದು ಕೆಲವರು ಸಿಹಿಯೂಟ ಮಾಡಿದರೆ, ಮತ್ತೆ ಕೆಲವರು ಮಾಂಸಾಹಾರ ಮಾಡುತ್ತಾರೆ. ಕಳಶ ಪೂಜಿಸಿ, ಹೊಸಬಟ್ಟೆ, ಎಡೆ ಇಟ್ಟು, ಕೋಣೆಯಲ್ಲಿ ಪೂಜೆ ಮಾಡಿ ನಂತರ ಕೋಣೆಗೆ ಸ್ವಲ್ಪ ಹೊತ್ತು ಯಾರನ್ನೂ ಬಿಡುವುದಿಲ್ಲ. ಸ್ವಲ್ಪ ಸಮಯ ಕಳೆದ ಮೇಲೆ ಹಿರಿಯರು 'ಉಂಡು' ಹೋದರೆಂದು, ಎಡೆಗಾಗಿ ಇಟ್ಟಿದ್ದ ಪದಾರ್ಥಗಳನ್ನು ಪ್ರಸಾದವೆಂದು ಭಾವಿಸಿ ಮನೆಯವರೆಲ್ಲರೂ ಊಟ ಮಾಡುತ್ತಾರೆ.

**ದೀಪಾವಳಿ :** ಈ ಹಬ್ಬವನ್ನು ದೀವಳ್ಗೆ, ದೀವಳಿಗೆ ಎಂದು ಕರೆಯುತ್ತಾರೆ. ಈ ಹಬ್ಬದಲ್ಲಿ ದನಕರುಗಳನ್ನು ತೊಳೆದು ಅವುಗಳ ಕೊಂಬುಗಳಿಗೆ ಎಣ್ಣೆ, ಬಣ್ಣಗಳನ್ನು ಹಚ್ಚಿ, ಹೂಮುಡಿಸುತ್ತಾರೆ. ಈ ಹಬ್ಬದಂದು ಎಲ್ಲರ ಮನೆ ಮುಂದೆ, ಜಗಲಿ ಮೇಲೆ, ಬಾಗಿಲನಿಲಗಳಲ್ಲಿ ಚೆಂಡ್ಹೂವು ಎದ್ದು ಕಾಣುತ್ತಿರುತ್ತವೆ. ಸಗಣಿ ಉಂಡೆ ಮಾಡಿ ಅದಕ್ಕೆ ಚೆಂಡ್ಹೂವು ಸಿಗಿಸಿ ಆ ಉಂಡೆಗಳನ್ನು ಮನೆ ಮುಂದೆ ಇಡುತ್ತಾರೆ. ಒಂದೆರಡು ದೊಡ್ಡದಾಗಿ ಸಗಣಿ ಉಂಡೆ ಮಾಡಿ ಅದಕ್ಕೆ ಚೆಂಡ್ಹೂವು, ಕುಂಬಳದ ಹೂವು, ಉತ್ತರಾಣಿ ಕಡ್ಡಿ ಮುಂತಾದವನ್ನು ಸಿಕ್ಕಿಸಿ ಅವುಗಳನ್ನು ಮನೆ ಮುಂದೆಯೂ ಮತ್ತು ತಿಪ್ಪೆಯ ಮೇಲೂ ಇಟ್ಟು ಪೂಜಿಸುತ್ತಾರೆ. ದೀಪಾವಳಿ ಹಬ್ಬದ ದಿನದಿಂದ ಊರಿನ ಮುಖ್ಯದೇವತೆಯ ದೇವಸ್ಥಾನದಲ್ಲಿ ಪ್ರತೀ ದಿನವೂ ಕೆಲವು ಮನೆಯವರು ಸೇರಿ ಪೂಜೆಯನ್ನು ಮಾಡಿಸುತ್ತಾರೆ. ಇದು ಒಂದು ತಿಂಗಳವರೆವಿಗೂ ನಡೆಯುತ್ತದೆ. ಕೊನೆಯದಾಗಿ ಕಡೆ ಕಾರ್ತಿಗೆ ಎಂದು ಹೇಳಿ ಆ ದಿನ ಪೂಜೆ ಸಲ್ಲಿಸುವವರಿಗೆಲ್ಲ ಪೂಜಾರಿಯ ಮನೆಯಲ್ಲೇ ಊಟದ ವ್ಯವಸ್ಥೆ ಮಾಡುತ್ತಾರೆ. ಪ್ರತಿಯೊಬ್ಬರೂ ತಮ್ಮ ಮನೆ ಮುಂದೆ ಒಂದು ತಿಂಗಳವರೆವಿಗೆ ದೀಪಗಳನ್ನು ಸಾಯಂಕಾಲ ಹಚ್ಚಿಡುವ ಪದ್ಧತಿಯಿದೆ. ಈ ಹಬ್ಬದಲ್ಲಿ ಪಿತೃಗಳಿಗೆ ಎಡೆಯಿಡುವವರು, ಬಂಧು ಬಳಗದವರನ್ನು ಕರೆದಿರುತ್ತಾರೆ.

**ಸಂಕ್ರಾತಿ :** ಇದನ್ನು ಸುಗ್ಗಿಯ ಹಬ್ಬ ಎಂದೂ ಕರೆಯುತ್ತಾರೆ. ಈ ಹಬ್ಬದಲ್ಲಿ ಅವರೆಕಾಯಿ, ಕುಂಬಳಕಾಯಿ, ಕಡಲೇಕಾಯಿ ಹಾಗೂ ಗೆಣಸುಗಳನ್ನು ಕುಸಿಕಿ ತಿನ್ನುವ ಪರಿಪಾಠವಿದೆ.

ಕಾಡಿನ ಗೂಡಾಗಿರುವ ಪಿರಿಯಾಪಟ್ಟಣ ತಾಲೂಕಿನ ಜನಗಳಿಗೆ ಸಂಕ್ರಾಂತಿ ಹಬ್ಬ ಬೇಟೆಯ ಹಬ್ಬವಾಗಿದೆ. ಹಿಂದೆ ಈ ಹಬ್ಬದಂದು ಆನೆ ಚೌಕೂರು ರಸ್ತೆಯ ಬದಿಯಲ್ಲಿರುವ ಮುತ್ತುರಾಯಸ್ವಾಮಿ ಗುಡಿಯ ಬಳಿ ಊರಜನ ಸೇರಿ, ಪೂಜೆಯ ನಂತರ ಎಲ್ಲರೂ ಕಾಡನ್ನು ಸೇರಿ, ಬೇಟೆಯಾಡಿ, ಕೊಂದ ಮೃಗಗಳನ್ನು ಎಲ್ಲರೂ ಪಾಲು ಮಾಡಿಕೊಂಡು, ವಿಶೇಷ ಅಡಿಗೆ ಮಾಡಿ ಊಟಮಾಡುವ ಪದ್ಧತಿ ಇತ್ತು. ಇತ್ತೀಚೆಗೆ ಈ ಪದ್ಧತಿ ರದ್ದಾಗಿದೆ.

**ಮಹಾ ಶಿವರಾತ್ರಿ :** ಈ ಹಬ್ಬದಂದು ಶಿವನಿಗೆ ವಿಶೇಷ ಪೂಜೆ ಸಲ್ಲಿಸುವ ಪರಿಪಾಠವಿದೆ. ದೇವಸ್ಥಾನಗಳಲ್ಲಿ ಭಜನೆ ನಡೆಯುತ್ತವೆ. ಬೆಟ್ಟದಪುರದ ಸಿಡಿಲು ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಅಂದು ರಾತ್ರಿ ಅನೇಕ ರೀತಿಯ ಪೂಜಾವೈವಿಧ್ಯಗಳು, ಭಜನೆಗಳು ಅದ್ದೂರಿಯಾಗಿ ನಡೆಯುತ್ತವೆ.

**ಗ್ರಾಮದೇವತೆಗಳು :** ತಾಲೂಕಿನ ವಿವಿಧ ಗ್ರಾಮಗಳಲ್ಲಿ ಚೌಡಮ್ಮನ ಹಬ್ಬ, ಅನ್ನಾಳಮ್ಮನ ಹಬ್ಬ, ನಿಂಗಮ್ಮನ ಹಬ್ಬ, ಅಚಲಪರಮೇಶ್ವರಿ ಹಬ್ಬ, ಬಂಡಿಹಬ್ಬ, ದೊಡ್ಡಮ್ಮನ ಹಬ್ಬ, ಮಾರಿ ಹಬ್ಬ, ಚಿಕ್ಕಮ್ಮನ ಹಬ್ಬ, ಕೆಲ್ಲೂರಿನ ಗೌರಮ್ಮನ ಉತ್ಸವ ಮೊದಲಾದುವು ಆಯಾ ಗ್ರಾಮದೇವತೆಯ ಹೆಸರಲ್ಲಿ ನಡೆಯುತ್ತವೆ. ಮಾರಮ್ಮನ ಹಬ್ಬ, ಕಿತ್ತೂರಮ್ಮನ ಜಾತ್ರೆ, ಕಾಡು ಹನುಮಂತರಾಯನ ಹಬ್ಬ ಇತ್ಯಾದಿಗಳು ಸುತ್ತಲ ಐದಾರು ಊರುಗಳು ಸೇರಿಕೊಂಡು ಮಾಡುವಂತಹ ಹಬ್ಬಗಳಾಗಿವೆ. ಪಿರಿಯಾಪಟ್ಟಣದಮ್ಮನ ಜಾತ್ರೆ, ಕನ್ನಂಬಾಡಿಯಮ್ಮನ ಜಾತ್ರೆ, ಮಹದೇಶ್ವರನ ಉತ್ಸವ, ಬೆಟ್ಟದಪುರದ ಶಿಡ್ಲುಮಲ್ಲಿಕಾರ್ಜುನ ರಥೋತ್ಸವ, ಪಿರಿಯಾಪಟ್ಟಣದ ಕೋಟೆ ವೈದ್ಯೇಶ್ವರಸ್ವಾಮಿ ಜಾತ್ರೆ, ಉತ್ತೇನಹಳ್ಳಿ ಬಸವೇಶ್ವರನ ಜಾತ್ರೆ, ಕಗ್ಗುಂಡಿ ಹರಳಯ್ಯನ ಜಾತ್ರೆ ಇತ್ಯಾದಿಗಳು ಇಡೀ ಪ್ರಾಂತವೇ ಆಚರಿಸುವ ಹಬ್ಬಗಳಾಗಿ ಪ್ರಸಿದ್ಧವಾಗಿವೆ.

**ಕಾಡು ಹನುಮಂತರಾಯನ ಹಬ್ಬ :** ಪಿರಿಯಾಪಟ್ಟಣದಮ್ಮನ ಜಾತ್ರೆ ನಡೆದ ೧೫ ದಿವಸಕ್ಕೆ ಈ ಹಬ್ಬ ನಡೆಯುತ್ತದೆ. ಪಿರಿಯಾಪಟ್ಟಣದ ಪಶ್ಚಿಮ ದಿಕ್ಕಿಗೆ ೧೦ ಕಿ. ಮೀ. ದೂರವಿರುವ ಸಿದ್ಧಾಪುರ ರಸ್ತೆಯಲ್ಲಿ ಮುತ್ತೂರು ಕಾಲೋನಿಯ ಅರಣ್ಯದಂಚಿನಲ್ಲಿ 'ಕಾಡು ಹನುಮಂತರಾಯ'ನ ದೇವಸ್ಥಾನವಿದೆ. ಇದರ ಉತ್ಸವವು ಎರಡು ವರ್ಷಕ್ಕೊಮ್ಮೆ ನಡೆಯುತ್ತದೆ. ಈ ಹಬ್ಬಕ್ಕೆ ಮುತ್ತೂರು, ಲಿಂಗಾಪುರ, ಕಿರಂಗೂರು, ಸುಳಗೋಡು ಮುಂತಾದ ಊರುಗಳ ಜನರೂ ಸೇರುತ್ತಾರೆ. ಈ ಹಬ್ಬದ ವಿಶೇಷವೆಂದರೆ ಬೇಟೆಗೆ ಹೋಗುವುದು. ಬೇಟೆಗೆ ಹೋಗುವವರು ಹರಕೆ ಮಾಡಿಕೊಂಡಿರುತ್ತಾರೆ. ಈ ಹರಕೆ ಕೈಗೂಡಿದರೆ ಅದರಲ್ಲಿ ಅರ್ಧ ಪಾಲನ್ನು ದೇವರಿಗೆ ಅರ್ಪಿಸುತ್ತಾರೆ. ಇಂತಹ ಸಂಪ್ರದಾಯದಿಂದ ಈ ದೇವರಿಗೆ 'ಬೇಟೆ ಹನುಮಂತ' ಎಂಬ ಹೆಸರೂ ಬಂದಿದೆ. ಇದರ ಉತ್ಸವವನ್ನು ಪಿರಿಯಾಪಟ್ಟಣದ ಉಪ್ಪಾರ ಜನಾಂಗದವರು ನಡೆಸಿಕೊಡುತ್ತಾರೆ. ಹಬ್ಬದ ದಿವಸ ದೇವರಿಗೆ ಸಂಬಂಧಪಟ್ಟ ವಿಗ್ರಹಗಳನ್ನು ತರುತ್ತಾರೆ. 'ಗುಂಡುಪಟ್ಣ' ಕೆರೆಯಿಂದ ಕಳಶ ತಂದು ರಾತ್ರಿಯಿಡೀ ದೇವಸ್ಥಾನದಲ್ಲಿ ಪೂಜೆ, ಪುರಸ್ಕಾರ ನಡೆಯುತ್ತದೆ.

ಮಾರನೆಯ ದಿನ ದೇವಸ್ಥಾನಕ್ಕೆ ಬಂದಂತಹ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ನಡೆಯುತ್ತದೆ.

**ಕಿತ್ತೂರಮ್ಮನ ಜಾತ್ರೆ :** ಪಿರಿಯಾಪಟ್ಟಣ ತಾಲೂಕಿನ ಕಿತ್ತೂರಿನಲ್ಲಿ ಗ್ರಾಮದೇವತೆ ಕಿತ್ತೂರಮ್ಮನ ಜಾತ್ರೆ ತಾಲ್ಲೂಕಿನಾದ್ಯಂತ ಪ್ರಸಿದ್ಧಿ ಪಡೆದ ಜಾತ್ರೆಗಳಲ್ಲಿ ಒಂದಾಗಿದೆ. ಜಾತ್ರೆಯ ಅಂಗವಾಗಿ ಮಾಘಮಾಸದ ಹುಣ್ಣಿಮೆಯಂದು ಗಿರಿಜಾ ಪರಮೇಶ್ವರ ಕಲ್ಯಾಣ ರಥೋತ್ಸವದ ಹಿನ್ನೆಲೆಯಲ್ಲಿ ಭಕ್ತಾದಿಗಳು ತಮ್ಮ ಮನೆಗಳಲ್ಲೂ ಮದುವೆ ಕಾರ್ಯಗಳನ್ನು ಇಟ್ಟುಕೊಳ್ಳುವುದು ಈಗಲೂ ರೂಢಿಯಲ್ಲಿದೆ. ಮಾರ್ಚ್ ತಿಂಗಳಲ್ಲಿ ಒಂದು ದಿನ ನಡೆಯುವ ಈ ಜಾತ್ರೆಗೆ ಸುಮಾರು ೩೦,೦೦೦ ಜನ ಸೇರುತ್ತಾರೆ.

**ಕುಡುಕೂರು ಜಾತ್ರೆ :** ಕುಡುಕೂರಿನಲ್ಲಿ ದೀಪಾವಳಿ ಹಬ್ಬದಂದು ಮಲ್ಲಿಕಾರ್ಜುನನ ಉತ್ಸವವು ನಡೆಯುತ್ತದೆ. ಜಾತ್ರೆಗೆ ಸೇರಿದ ಭಕ್ತಾದಿಗಳು ಪಂಜನ್ನು ಹೊತ್ತಿಸಿ ದೇವರ ಉತ್ಸವದೊಂದಿಗೆ ಬೆಟ್ಟದಪುರದಲ್ಲಿರುವ ಶಿಡ್ಲುಮಲ್ಲಿಕಾರ್ಜುನ ದೇವಸ್ಥಾನಕ್ಕೆ ಓಡಿ ಬರುತ್ತಾರೆ. ಇದನ್ನು ಜನರು ನಿಬ್ಬೆರಗಿನಿಂದ ನೋಡುತ್ತಾರೆ. ನವೆಂಬರ್ ತಿಂಗಳಲ್ಲಿ ಒಂದು ದಿನದ ಮಟ್ಟಿಗೆ ಜರುಗುವ ಈ ಜಾತ್ರೆಗೆ ಸುಮಾರು ೧೦,೦೦೦ ಜನ ನೆರೆಯುತ್ತಾರೆ.

**ಹರಳಯ್ಯನ ಜಾತ್ರೆ :** ಕಲ್ಯಾಣದ ಕ್ರಾಂತಿಯನಂತರ ಶರಣ ಹರಳಯ್ಯನು ತನ್ನ ಕುಟುಂಬದೊಡನೆ ದಕ್ಷಿಣದ ಕಡೆಗೆ ಬಂದು ತಾಲ್ಲೂಕಿನ ರಾವಂದೂರು ಸಮೀಪದಲ್ಲಿ ನೆಲಸಿದನೆಂದೂ, ಅವನು ನೆಲಸಿದ ಸ್ಥಳ ಹರಳಹಳ್ಳಿ ಆಯಿತೆಂದು ತಿಳಿದುಬರುತ್ತದೆ. ಈ ಶರಣನ ಸ್ಮರಣೆಯಿಂದ ಕಗ್ಗುಂಡಿಯಲ್ಲಿರುವ ಹರಳಯ್ಯನ ಮಠದಲ್ಲಿ ವರ್ಷಕ್ಕೊಂದು ಸಲ ಜಾತ್ರೆ ನಡೆಯುತ್ತದೆ. ಈ ಜಾತ್ರೆಯಲ್ಲಿ ದಲಿತರು ವಿಶೇಷವಾಗಿ ಭಾಗವಹಿಸುತ್ತಾರೆ.

**ಬೆಟ್ಟದಪುರದ ಮಲ್ಲಿಕಾರ್ಜುನ ಸ್ವಾಮಿ ಜಾತ್ರೆ :** ತಾಲ್ಲೂಕಿನ ಅತಿದೊಡ್ಡ ಜಾತ್ರೆಗಳಲ್ಲಿ ಬೆಟ್ಟದಪುರದ ಸಿಡ್ಲುಮಲ್ಲಿಕಾರ್ಜುನ ಸ್ವಾಮಿ ಜಾತ್ರೆಯೂ ಒಂದು. ಈ ಜಾತ್ರೆಯಲ್ಲಿ ಗಿರಿಜಾ ಕಲ್ಯಾಣ ಮತ್ತು ರಥೋತ್ಸವಗಳು ಅತ್ಯಂತ ವೈಭವದಿಂದ ನೆರವೇರುತ್ತವೆ. ದನಗಳ ಜಾತ್ರೆಯೂ ನಡೆಯುತ್ತದೆ. ಫೆಬ್ರವರಿ ತಿಂಗಳಲ್ಲಿ ೧೫ ದಿನ ನಡೆಯುವ ಈ ಜಾತ್ರೆಗೆ ಲಕ್ಷಾಂತರ ಜನ ಬಂದು ಸೇರುತ್ತಾರೆ.

**ತಂದ್ರೆಗುಡಿ ಕೊಪ್ಪಲಿನ ಸಿಡಿ ಜಾತ್ರೆ :** ಕೌಳರ ಆರಾಧನಾ ನೆಲೆಯಾಗಿದ್ದ ತಂದ್ರೆ ಗುಡಿ ಕೊಪ್ಪಲಿನ ಕಾಳಿಗುಡಿಯಲ್ಲಿ ಈಗ ಸಪ್ತಮಾತೃಕೆಯರ ವಿಗ್ರಹಗಳಿದ್ದು, ದೇವತೆಗೆ ಸಿಡಿ ಜಾತ್ರೆ ನಡೆಯುತ್ತದೆ.

**ಅತ್ತಿಗೋಡು ಮಹದೇಶ್ವರ ಜಾತ್ರೆ :** ಜಾತ್ರೆಯು ನವೆಂಬರ್ ತಿಂಗಳಲ್ಲಿ ಒಂದು ದಿನದ ಮಟ್ಟಿಗೆ ನಡೆಯುತ್ತಿದ್ದು, ಸುಮಾರು ೨೦,೦೦೦ ಜನ ಅದರಲ್ಲಿ ಪಾಲ್ಗೊಳ್ಳುತ್ತಾರೆ.

**ಮಾದೇಶ್ವರನ ಜಾತ್ರೆ :** ಪಿರಿಯಾಪಟ್ಟಣದ ದಕ್ಷಿಣಕ್ಕೆ ಗೋಣಿಕೊಪ್ಪಲು ರಸ್ತೆಯಲ್ಲಿ ಎರಡು ಕಿ.ಮೀ. ದೂರದಲ್ಲಿರುವ ಶ್ರೀಮಹದೇಶ್ವರನ ದೇವಸ್ಥಾನದಲ್ಲಿ ಪ್ರತಿವರ್ಷ

ದೀಪಾವಳಿ ಹಬ್ಬದ ಸಂದರ್ಭದಲ್ಲಿ ಇದರ ಉತ್ಸವ ವಿಜೃಂಭಣೆಯಿಂದ ನಡೆಯುತ್ತದೆ. ಜಾತ್ರೆಯ ಅಂಗವಾಗಿ ಕೊಂಡ, ಪಂಜಿನ ಸೇವೆ, ಲಕ್ಷದೀಪೋತ್ಸವ ಇತ್ಯಾದಿಗಳು ಜರುಗುತ್ತವೆ. ವಿವಿಧ ಜಿಲ್ಲೆಗಳಿಂದಲೂ ಭಕ್ತಾದಿಗಳು ಜಾತ್ರೆಗೆ ಬರುತ್ತಾರೆ.

**ಉತ್ತೇನಹಳ್ಳಿ ಬಸವೇಶ್ವರ ಜಾತ್ರೆ :** ಕಲ್ಯಾಣ ಪಟ್ಟಣದಲ್ಲಿ ಬಸವೇಶ್ವರನ ಸೇವೆಯಲ್ಲಿದ್ದ ಉತ್ತಣ್ಣ ಪಂಡಿತ ಕಲ್ಯಾಣದ ಕ್ರಾಂತಿಯಾದ ಮೇಲೆ ಬಂದು ಇಲ್ಲಿ ನೆಲಸಿದ್ದರಿಂದ ಈ ಊರು ಉತ್ತಯ್ಯನವರ ಹಳ್ಳಿಯಾಗಿ ಕ್ರಮೇಣ ಉತ್ತೇನಹಳ್ಳಿಯಾಯಿತೆಂಬ ಹೇಳಿಕೆ ಇದೆ. ಹಿಂದೆ ಇಲ್ಲಿ ಮಹಾರಾಜರ ದನಗಳ ಕಾವಲ್ ಇದ್ದಿತಂತೆ. ದನಗಳಿಗೆ ಬರುವ ಕಾಯಿಲೆಗಳ ಪರಿಹಾರಕ್ಕೆ ಇಲ್ಲಿನ ಬಸವೇಶ್ವರನಿಗೆ ಹರಕೆ ಕಟ್ಟಿಕೊಳ್ಳುತ್ತಾರೆ. ಕುಂಬಾರರು ಮಾಡಿಕೊಡುವ ಪುಟ್ಟ ಪುಟ್ಟ ಮಣ್ಣಿನ ಗುಡಿಗಳನ್ನು ಬಸವಣ್ಣನಿಗೆ ಅರ್ಪಿಸಿ ಜಾತ್ರೆ ನಡೆಸುತ್ತಾರೆ. ಮುಸ್ಲಿಮರ ಬಾಬಯ್ಯನ ಹಬ್ಬದಲ್ಲಿ ಹಿಂದೂಗಳು ಹುಲಿವೇಷ, ಪಾಳೇಗಾರನ ವೇಷ ಹಾಕುತ್ತಾರೆ. ಮಜ್ಜಣ ಕುಣಿತವೂ ನಡೆಯುತ್ತದೆ.

**ಪಿರಿಯಾಪಟ್ಟಣದ ಕನ್ನಂಬಾಡಿ ಅಮ್ಮನ ಜಾತ್ರೆ :** ಜಾತ್ರೆಯು ಮಾರ್ಚ್ ಮಾಹೆಯಲ್ಲಿ ಹತ್ತು ದಿನಗಳ ಕಾಲ ಜರುಗುತ್ತಿದ್ದು, ಸುಮಾರು ೫೦,೦೦೦ ಜನ ನೆರೆಯುತ್ತಿದ್ದು, ಆ ಸಂದರ್ಭದಲ್ಲಿ ದನಗಳ ಜಾತ್ರೆಯೂ ನಡೆಯುತ್ತದೆ.

## ತಾಲೂಕಿನ ಪ್ರಮುಖ ಜಾತ್ರೆಗಳ ಪಟ್ಟಿ

| ಊರು | ದೇವರು | ಜಾತ್ರೆ ದಿನಾಂಕ | ಅವಧಿ | ಭಾಗವಹಿಸುವವರ ಸಂಖ್ಯೆ | ದನಗಳ ಜಾತ್ರೆ |
|---|---|---|---|---|---|
| ಬೆಟ್ಟದಪುರ | ಮಲ್ಲಿಕಾರ್ಜುನ | ಫೆಬ್ರವರಿ | ೧೫ ದಿನ | ೫೦,೦೦೦ | ಉಂಟು |
| ಪಿರಿಯಾಪಟ್ಟಣ | ಕನ್ನಂಬಾಡಿಯಮ್ಮ | ಮಾರ್ಚ್ | ೧೦ ದಿನ | ೩೦,೦೦೦ | ಉಂಟು |
| ಕಿತ್ತೂರು | ಕಿತ್ತೂರಮ್ಮ | ಮಾರ್ಚ್ | ೦೧ ದಿನ | ೧೦,೦೦೦ | – |
| ಅತ್ತಿಗೋಡು | ಮಹದೇಶ್ವರ | ನವೆಂಬರ್ | ೦೧ ದಿನ | ೫,೦೦೦ | – |
| ಕುಡುಕೂರು | ಮಲ್ಲಿಕಾರ್ಜುನ | ನವೆಂಬರ್ | ೦೧ ದಿನ | ೫,೦೦೦ | – |

**ತಾಲೂಕಿನ ಮಹನೀಯರು :** ಪಿರಿಯಾಪಟ್ಟಣ ತಾಲೂಕಿನಲ್ಲಿ ಕಲೆ, ಸಾಹಿತ್ಯ, ಸಿನಿಮಾ, ವೈದ್ಯಕೀಯ, ವಿಜ್ಞಾನ, ಸಮಾಜಸೇವೆ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿ ಹೆಸರಾದ ಕೆಲವು ಮಹನೀಯರುಗಳ ಹೆಸರುಗಳು ಹೀಗಿವೆ : ಪಟೇಲ್ ದೇವೇಗೌಡರ ಪತ್ನಿ ನಿಂಗಮ್ಮ, ವೀರಣ್ಣ ಶೆಟ್ಟರು, ಮಲ್ಲಮ್ಮ, ಪಿ. ವಿ. ಶಿವಪ್ಪ, ಯಜಮಾನ್ ಕರಿಬಸಪ್ಪ, ಬಿ.ಎಸ್. ಪುಟ್ಟಣ್ಣಶೆಟ್ಟಿ, ಕೆ. ಎಂ. ಶಿವಶಂಕರ್, ಪಿ. ವಿ. ನಂಜುಂಡಸ್ವಾಮಿ, ಪಿ. ಕೆ. ಪುಟ್ಟರಾಜಪ್ಪ, ವಿ. ರಾಜಮೋಹನ್, ಪಿ. ಟಿ. ರಂಗಸ್ವಾಮಿ, ಪಿ. ಸಿ. ಚನ್ನವೀರಯ್ಯ,

ಬೆಂಗಳೂರು ಸುಬ್ಬಣ್ಣ, ಶ್ರೀ ಕೆ. ನಂದಿಬಸಪ್ಪ, ಕಂಠಿ ಮಲ್ಲಣ್ಣ, ಮಹಡಿ ಚೆನ್ನಯ್ಯ, ಸುಬ್ಬೇಗೌಡ, ರಾಮೇಗೌಡ, ರಾವಂದೂರಿನ ದೊಡ್ಡಣ್ಣ, ಸಿದ್ದಣ್ಣ ಶೆಟ್ಟರು, ಶಿವಾನಂದಪ್ಪ, ಬೂವನಹಳ್ಳಿ ಕರಿಶೆಟ್ಟಿ, ಕೊಣಸೂರಿನ ಪಶುಪತಿ ಶಿವಪ್ಪ, ಅತ್ತಿಗೋಡಿನ ರಾಚಪ್ಪ ಶೆಟ್ಟರು, ದೊಡ್ಡಣ್ಣ ಶೆಟ್ಟರು, ಶ್ಯಾನುಭೋಗನಹಳ್ಳಿಯ ಕೃಷ್ಣಮೂರ್ತಿ, ಪಟೇಲ್ ಗಿರಿಯಪ್ಪ, ಸಂಗರ ಶೆಟ್ಟಿಹಳ್ಳಿ ಲಕ್ಕೇಗೌಡರು, ಹರದೂರು ಗ್ರಾಮದ ಶ್ರೀಮತಿ ಶಾರದಮ್ಮ, ಮಹಾದಾನಿ ಮಹದೇವಪ್ಪ, ದಿವಂಗತ ಕರಿಯಪ್ಪನವರ, ಎನ್. ವಿ. ಸುಬ್ರಹ್ಮಣ್ಯಂ, ಕಾಳೇಗೌಡರ ಜವರೇಗೌಡರು, ದೇವರಸೇಗೌಡರು, ಹರೀನಹಳ್ಳಿ ವಿ. ವಾಸು, ಅತ್ತಿಗೋಡು ಗ್ರಾಮದ ಎ.ವಿ. ಬಸವಶೆಟ್ಟರು, ಸಿದ್ದಲಿಂಗಶೆಟ್ಟರು, ಬೆಟ್ಟದಪುರದ ಪುಟ್ಟಬಸಪ್ಪ, ಡಾ. ಕೆ.ಆರ್. ತಮ್ಮಯ್ಯ ಮುಂತಾದ ಎಷ್ಟೋ ಮಂದಿ 'ಎಲೆ ಮರೆಯ ಕಾಯಿ'ಯಂತೆ ಇದ್ದು ಅವರ ಬಗ್ಗೆ ಸರಿಯಾದ ಮಾಹಿತಿ ಸಿಗದೆ ಉಳಿದು ಹೋಗಿದ್ದಾರೆ. ಇಂತಹ ಧೀಮಂತ ದಾನವಂತ ಮಹನೀಯರುಗಳಿಗೆ ತಮ್ಮ ಮಡಿಲಲ್ಲಿ ಜನ್ಮವಿತ್ತಿರುವ ಪಿರಿಯಾಪಟ್ಟಣ ತಾಲ್ಲೂಕು ನಿಜಕ್ಕೂ ಧನ್ಯ !

* * * *